ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

"ಪ್ರೊ. ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಗಳ ಅಧ್ಯಯನ"

ನಿಬಂಧಕಾರರು
ನೋಂದಣಿ ಸಂಖ್ಯೆ : KVTM/K 140901030092
ಕನ್ನಡ ಎಂ.ಫಿಲ್ ವಿದ್ಯಾರ್ಥಿ

2014–15

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

"ಪ್ರೊ. ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಗಳ ಅಧ್ಯಯನ"

ಸಂಶೋಧಕರು – ಮಹದೇವಸ್ವಾಮಿ ಎ.ಎಂ.
ಮಾರ್ಗದರ್ಶಕರು – ಡಾ. ಹೆಚ್. ವಿ. ಗೀತಾ.

ನಿಬಂಧಕಾರರು

ನೋಂದಣಿ ಸಂಖ್ಯೆ : KVTM/K 140901030092

ಕನ್ನಡ ಎಂ.ಫಿಲ್ ವಿದ್ಯಾರ್ಥಿ

2014–15

ಪರಿವಿಡಿ

ಪ್ರೊ. ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಗಳ ಅಧ್ಯಯನ

* * * * *



ಪ್ರೊ. ಮಲೆಯೂರು ಗುರುಸ್ವಾಮಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಚರಿತ್ರೆಯ ಕರ್ನಾಟಕದ ಸಂಸ್ಕೃತಿಯ ವೈವಿಧ್ಯತೆಗಳಲ್ಲಿ ಒಂದು. ಹಾಗಾಗಿ ಸಾಹಿತ್ಯೇತರ ಮೌಲ್ಯ ಪ್ರತಿಪಾದನೆಗಳಿಗಿಂತ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ನಾಡಿನ ಕಲೆ, ಮತ, ಧರ್ಮ, ಜನರ ಆಚಾರ-ವಿಚಾರಗಳು, ನಂಬಿಕೆಗಳು, ಸಮಾಜದ ಸಂಬಂಧಗಳ ಬೆಸುಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮತಧರ್ಮಗಳು, ರಾಜಾಶ್ರಯಗಳ ನೆರವಿನಿಂದ ರಚಿತವಾಗಿದೆ. ಆಯಾಕಾಲದ ಸಾಮಾಜಿಕ, ಸಾಂಸ್ಕೃತಿಕ ಇತಿಹಾಸವನ್ನು ಅರಿತುಕೊಳ್ಳಲು ಸಾಹಿತ್ಯ ಚರಿತ್ರೆಯೂ ಮುಖ್ಯ ಆಕರವಾಗಿದೆ. ಮಲೆಯೂರು ಗುರುಸ್ವಾಮಿಯವರ ಸಾಹಿತ್ಯವು ಇತಿಹಾಸದ ಎಳೆಗಳು, ಗ್ರಾಮೀಣ ಪರಿಸರದ ಚಿತ್ರಣ ಹಾಗೂ ಗ್ರಾಮೀಣ ಬದುಕಿನ ಎಲ್ಲ ಆಗು-ಹೋಗುಗಳ ಹಾಗೂ ಭಾರತದ ಗ್ರಾಮಗಳ ಬದುಕು ಹೇಗಿದೆ ಎಂಬುದನ್ನು ವಿಶ್ಲೇಷಿಸುವುದು ಈ ನಿಬಂಧದ ಮೂಲ ಉದ್ದೇಶವಾಗಿದೆ. ಇದನ್ನು ಪ್ರಸ್ತುತಪಡಿಸಲು ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ

- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
- ಪ್ರೊ. ಮಲೆಯೂರು ಗುರುಸ್ವಾಮಿ ಅವರ ಬದುಕು-ಬರಹ
- ಗ್ರಾಮೀಣ ಬದುಕಿನ ಚಿತ್ರಣ
- ಐತಿಹಾಸಿಕ ಅಂಶಗಳು
- ಆಧ್ಯಾತ್ಮಿಕತೆ ಮತ್ತು ವೈಚಾರಿಕತೆ
- ಉಪಸಂಹಾರ

ಮಲೆಯೂರು ಗುರುಸ್ವಾಮಿ ಅವರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದಾಗ ಆಧುನಿಕ ಭಾರತದ ಗ್ರಾಮೀಣ ಜನತೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಆವರಣವನ್ನು ಸಾಹಿತ್ಯವಲಯಕ್ಕೆ ಅಳವಡಿಸುವಲ್ಲಿ ಲೇಖಕರ ಪ್ರತಿಭೆ ಮಹತ್ತರವಾದದ್ದು. ಹಾಗಾಗಿ ನಾನು ಇವರ ಮೂರು ಕಾದಂಬರಿಗಳನ್ನು ವಿಶ್ಲೇಷಿಸುವುದು ಮೂಲ ಉದ್ದೇಶವಾಗಿದೆ.

'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಎಂಬ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ಗ್ರಾಮೀನ ಬದುಕಿನ ಚಿತ್ರಣ, ಇತಿಹಾಸ ಎಳೆಗಳು ಇಲ್ಲಿ

ಕಾದಂಬರಿ ರೂಪ ಪಡೆದಿದೆ. ಗ್ರಾಮ್ಯ ಪರಿಸರದ ಚಿತ್ರಗಳಿವೆ, ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಗಳ ಬದುಕು ಹೇಗಿದೆ, ಎಂಬುದನ್ನು ಕಾದಂಬರಿಕಾರರು ವಿಶ್ಲೇಷಿಸಿದ್ದಾರೆ. ಇಲ್ಲಿನ ಪಾತ್ರಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಲೇಖಕರು ಕಂಡರಿಸಿದ್ದಾರೆ.

'ಅಪ್ರತಿಮವೀರ' ಕಾದಂಬರಿಯನ್ನು ಪ್ರಧಾನವಾಗಿಟ್ಟುಕೊಂಡು ರಾಜಮಹಾರಾಜರಿಗೆ ಸಂಬಂಧಿಸಿದ ವಿಷಯಗಳನ್ನು ಈ ಕಾದಂಬರಿ ಕಲೆ ಹಾಕಿದೆ. ಮೈಸೂರು ಸಂಸ್ಥಾನದ ರಾಜನೊಬ್ಬನ ಕಥೆಯೇ ಇದರ ಕಥಾವಸ್ತುವಾದರೂ ಅದರೊಟ್ಟಿಗೆ ರಾಜ ಪ್ರಭುತ್ವ, ಪ್ರಜಾಪ್ರಭುತ್ವಗಳೆರಡರ ತೌಲನಿಕ ಅಧ್ಯಯನ ಇಲ್ಲಿದೆ. ರಾಜರ ಕಥೆಯೆಂದರೆ ಸಾಮಾನ್ಯವಾಗಿ ಕಲ್ಪನೆ, ಆದರೆ ಕಲ್ಪನೆಗಿಂತ ಹೆಚ್ಚಾಗಿ ವಾಸ್ತವ ಮತ್ತು ಇತಿಹಾಸಗಳೆರಡಕ್ಕೂ ಸಮೀಪವಾಗಿ ಈ ಕೃತಿಯನ್ನು ರಚಿಸಿದ್ದಾರೆ. ವೈಚಾರಿಕತೆಯನ್ನು ಹೊಂದಿರುವ ಈ ಕೃತಿ ಮೈಸೂರು ರಾಜರ ಚರಿತ್ರೆಯನ್ನು ಕಟ್ಟಬೇಕೆಂದರೆ ಇರಬೇಕಾದ ಎಲ್ಲ ಐತಿಹಾಸಿಕ ಗುಣಗಳನ್ನು ಮೈಗೂಡಿಸಿಕೊಂಡಿವೆ. ಐತಿಹಾಸಿಕ ಅಂಶಗಳು ಈ ಕಾದಂಬರಿಯಲ್ಲಿ ಹೇಗೆ ಚಿತ್ರಿತವಾಗಿದೆ ಎಂಬುದರ ಅಧ್ಯಯನ ಈ ಅಧ್ಯಯನ ವಸ್ತುವಾಗಿದೆ.

'ಮಹಾಯಾತ್ರಿಕ' ಕಾದಂಬರಿಯನ್ನು ಪ್ರಧಾನವಾಗಿಟ್ಟುಕೊಂಡು ಇಲ್ಲಿನ ಅಧ್ಯಾತ್ಮ ಮತ್ತು ವೈಚಾರಿಕತೆಯನ್ನು ಗುರುತಿಸುವುದು. ಹಳೇ ಮೈಸೂರು ಭಾಗದಲ್ಲಿ ಆಧ್ಯಾತ್ಮಿಕ ಸಿದ್ದಪುರುಷನಾಗಿ ಜನಮಾನಸದಲ್ಲಿ ಉಳಿದಿರುವ ವ್ಯಕ್ತಿಯೇ ಮಲೆಯ ಮಹದೇಶ್ವರರು, ಜನಪದರಲ್ಲಿ ಮಹದೇಶ್ವರರನ್ನು ಕುರಿತು ಅಗಾಧ ಸಾಹಿತ್ಯ ನಿರ್ಮಾಣವಾಗಿರುವುದು ಆ ವ್ಯಕ್ತಿಯ ಮಹಿಮೆಗೆ ಮತ್ತೊಂದು ಸಾಕ್ಷ್ಯರೂಪ. ಇಂಥ ವ್ಯಕ್ತಿಯ ಶಕ್ತಿಯನ್ನು ಕುರಿತು ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ 'ಮಹಾಯಾತ್ರಿಕ' ಕಾದಂಬರಿ ರೂಪಗೊಂಡಿದೆ. ಮಹದೇಶ್ವರರ ಒಟ್ಟು ಬದುಕಿಗೆ ಈ ಕೃತಿ ಕನ್ನಡ ಹಿಡಿದಿದೆ. ಈ ಕಾದಂಬರಿ ಮಹದೇಶ್ವರರ ಅಧ್ಯಾತ್ಮಶಕ್ತಿ, ಪ್ರಕೃತಿಪ್ರೇಮ, ಶಿಷ್ಯರ ಪಡೆ, ಒಟ್ಟು ಸಂದೇಶಗಳನ್ನು ಹೀಗೆ ಈ ಕೃತಿಯುದ್ದಕ್ಕೂ ಕಾದಂಬರಿಕಾರರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಪಠ್ಯ ವಿಷಯ ಮಾತ್ರವೇ ಅಲ್ಲದೇ, ಜಗತ್ತಿನ ಸಮಸ್ತ ಆಗು–ಹೋಗುಗಳೂ ಇವರ ಬಾಯಿಗೆ ಆಹಾರವಾಗುತ್ತಿದ್ದುವು. ಬಿಳಿಗಿರಿರಂಗನ ಬೆಟ್ಟದ ಸೋಲಿಗರಿಂದ ಹಿಡಿದು ವಾಷಿಂಗ್ಟನ್, ವೈಟ್‌ಹೌಸಿನ ತನಕ, ಚಾಮರಾಜನಗರದ ಬಿ.ಎಸ್.ವಿ. ಬಸ್ ಚರಿತ್ರೆಯಿಂದ ಹಿಡಿದು ಸದ್ದಾಂ ಹುಸೇನ್ ತನಕ ಪಾಠದ ನಡುವೆ ಇವರು ಹೇಳದ ವಿಷಯಗಳೇ ಇಲ್ಲ.

ವಚನ ಸಾಹಿತ್ಯದ ಮಟ್ಟಿಗಂತೂ ಮಲೆಯೂರು ಗುರುಸ್ವಾಮಿ ಅಧಿಕೃತ ವಕ್ತಾರರಂತೆ ಮಾತನಾಡಬಲ್ಲರು. ಭಾಷಣಕ್ಕೆ ನಿಂತರೆ ನೂರಾರು ಸಂಖ್ಯೆಯಲ್ಲಿ ವಚನಗಳು. ಅವರ ತುದಿನಾಲಿಗೆಯಲ್ಲಿ ನಲಿದಾಡುತ್ತವೆ. ಪದಗಳನ್ನು ಒತ್ತೀ ಒತ್ತಿ ಹೇಳುವ ಅವರ ಶೈಲಿಯ ಸೊಗಸೇ ಸೊಗಸು. ವಚನ ಸಾಹಿತ್ಯದ ಅರಿವಿರುವ ಒಬ್ಬ ಪ್ರಜ್ಞಾವಂತ ವೀರಶೈವ ಮಠಾಧಿಪತಿಗಳಷ್ಟೇ ಸಮರ್ಥವಾಗಿ ವಚನ ಸಾಹಿತ್ಯವನ್ನು ಮ.ಗು. ಅವರು ಅರೆದು ಕುಡಿದಿದ್ದಾರೆ.

ಪ್ರೊ. ಮಲೆಯೂರು ಗುರುಸ್ವಾಮಿ ಅವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಆದರೆ ಶ್ರೀ ಮಲೆಯ ಮಹದೇಶ್ವರ ಜೀವನ ಸಾಧನೆಗೆ ಸಂಬಂಧಿಸಿದ 'ಮಹಾಯಾತ್ರಿಕ' ಕಾದಂಬರಿ ಜೀವನ ಪಯಣದ ಯಶಸ್ಸಿನ ಮೈಲಿಗಲ್ಲು, ಸದಾ ನಗು-ನಗುತಾ ಸಾಹಿತ್ಯಾಭಿರುಚಿಯ ಜೊತೆಗೆ ಸಾರಸ್ವತ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳುತ್ತಾ ಕನ್ನಡಕ್ಕಾಗಿ ದುಡಿಯುತ್ತಿದ್ದಾರೆ. ಇವರ ಬರವಣಿಗೆಯ ಗದ್ಯಶೈಲಿ ವಿಶಿಷ್ಟ ಮೆರಗಿನಿಂದ ಕೂಡಿದ್ದು, ಇವರ ಧರಿಸುವ ಉಡುಪುನಂತೆಯೇ ಆಕರ್ಷಣೀಯನಾದ ಮಾತು ಅರ್ಥಗಾಂಭೀರ್ಯದ ಬರವಣಿಗೆ, ಶಬ್ದ ಹಾಗೂ ಅರ್ಥಗಳ ಹೃದಯಂಗಮ ಸಮನ್ವಯವನ್ನು ಹೊಂದಿರುವ ಮನೋಹರವಾದ ವಾಗರ್ಥ ವಿಸ್ಮಯ ಇದರದಾಗಿದೆ.

ಪ್ರೊ. ಮ.ಗು. ಅವರ ವ್ಯಕ್ತಿತ್ವದ ಮತ್ತೊಂದು ಮುಖ್ಯವಾದ ಅಂಶವೆಂದರೆ ಅಪ್ರಿಯವಾದ ಸತ್ಯ, ಮೂಢನಂಬಿಕೆ. ಅಂಧಶ್ರದ್ಧೆ, ಡಂಬಾಚಾರಗಳನ್ನು ನಿರ್ಭಿಡೆಯಿಂದ ಹೇಳುವ ಎದೆಗಾರಿಕೆ, ಧಾರ್ಮಿಕ ವಲಯದ ಚಿಂತನೆಗಳನ್ನು ನಡೆಸುವಾಗ ಇಂತಹ ಮಾತುಗಳು ಮುಖ್ಯವಾಗುತ್ತವೆ.

ಮಲೆಯೂರು ಗುರುಸ್ವಾಮಿ ಅವರದು ವಿಶಿಷ್ಟ ಜೀವನಶೈಲಿ. ನೇರ ಸರಳ ಮತ್ತು ವಿಮರ್ಶಾತ್ಮಕ ಎಂದು ಅದನ್ನು ಹೇಳಬಹುದು. ಮೌನ ಮತ್ತು ಅರ್ಥವಾಗದ ಭಾಗಗಳು ಅದರಲ್ಲಿ ಇದ್ದಿರಬಹುದು. ಊಟೋಪಚಾರದಿಂದ ಬರವಣಿಗೆಯವರೆಗೆ ಇದರ ವ್ಯಾಪ್ತಿ: ಬದುಕನ್ನು ಬದಲಾಯಿಸಿ ಬಿಡುವ ಛಲವೇನು ಅವರದಲ್ಲ: ಸಾಧ್ಯವಾದರೆ ತಾವೇ ಬದಲಾಗಲು ಹೆಜ್ಜೆ ಇಡುವ ಪ್ರವೃತ್ತಿ ಅವರು ಯಾವುದಕ್ಕೂ ನೇರ ಅಂಟಿಕೊಂಡವರಲ್ಲ: ಹಾಗೆಂದು ಯಾವುದನ್ನೂ ಬಿಟ್ಟವರೂ ಅಲ್ಲ. ಜೀವನ ಹೇಗೆ ಇರಲಿ ಅದನ್ನು ಸಹೃತ್‌ಗೊಳಿಸುವತ್ತ ಅವರ ಒಲವು. ಅದನ್ನು ನಿರ್ದಿಷ್ಟ ರೀತಿಗೆ ಬಗ್ಗಿಸಲು ಹೋರಾಡುವ

ಜಾಯಮಾನ ಅವರದಲ್ಲ. ಎಷ್ಟು ಸಿಕ್ಕಿದರೆ ಅಷ್ಟು. ಬೆಟ್ಟಕ್ಕೆ ಹೆಣಗುವವರಲ್ಲ. ಅಷ್ಟರ ಮಿತಿಯಲ್ಲಿಯೇ ಸಂತೋಷವನ್ನು ಹುಟ್ಟಿಹಾಕಿ ಕೊಳ್ಳುವುದರಲ್ಲಿ ಅವರು ಧೀರರು.

ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿರುವ ಮಲೆಯೂರು ಗುರುಸ್ವಾಮಿ ಅವರು ಒಂದು ರೀತಿ ಸಶಕ್ತ ನಕ್ಷತ್ರದಂತೆ ಅವರ ವ್ಯಕ್ತಿತ್ವ, ಇವರು ಹುಟ್ಟಿದ ಅಥವಾ ಜನ್ಮ ಪಡೆದ ಸ್ಥಳ ಪುಟ್ಟಗ್ರಾಮ. ಮಲೆಯೂರು ಸಾಹಿತ್ಯ ಪ್ರಪಂಚಕ್ಕೆ ತನ್ನದೇ ಆದ ಘನತೆಯನ್ನು ಹೊಂದಿರುವ ಐತಿಹಾಸಿಕ ಸ್ಥಳವಾಗಿದೆ. ಕನ್ನಡದ ಆದಿಯಿಂದಲ್ಲ ಧರ್ಮ, ಕಲೆ, ಸಾಹಿತ್ಯ, ಸಿದ್ಧಾಂತ, ಜ್ಯೋತಿಷ್ಯ, ಆಯುರ್ವೇದ, ಮೊದಲಾದ ಸಮಗ್ರ ಗ್ರಂಥರಚನೆಗಳಿಗೆ ಆಗರವಾಗಿ ಸಾವಿರಾರು ವರ್ಷಗಳಿಗೂ ಹಿಂದೆ ಪ್ರಸಿದ್ಧಿ ಪಡೆದ ವಿದ್ಯಾಕ್ಷೇತ್ರ, ಈ ಸ್ಥಳದ ಪ್ರಮುಖ ಚಿಂತಕರಾಗಿ ಮಲೆಯೂರು ಗುರುಸ್ವಾಮಿ ಅವರು ಪ್ರಸ್ತುತ ಈ ಶತಮಾನದ ಅಪೂರ್ವ ವ್ಯಕ್ತಿ. ಸಾಹಿತ್ಯ ಸಂಸ್ಕೃತಿಗಳ ಸಮನ್ವಯತೆಯನ್ನು ಮೈಗೂಡಿಸಿಕೊಂಡು ನಾಡಿನಾದ್ಯಂತ ಪ್ರಚಾರ ಪ್ರಸಾರ ಪ್ರಚುರಪಡಿಸಿದ ಇವರು ಗಡಿನಾಡಿನ ಕರ್ನಾಟಕದ ಅತ್ಯಂತ ಹಿಂದುಳಿದ ಚಾಮರಾಜನಗರ ಜಿಲ್ಲೆಯ ಕನ್ನಡ ಗಡಿಯ ಗೌರವ ರಕ್ಷೆಯಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ, ಕೇರಳ, ತಮಿಳುನಾಡು ಈ ಮೂರು ರಾಜ್ಯಗಳ ಗಡಿಪ್ರಾಂತ್ಯದಲ್ಲಿನ ಚಾಮರಾಜನಗರದ ಸ್ಥಾನ ಅತೀ ಹೆಚ್ಚಿನ ಜವಾಬ್ದಾರಿ ಮತ್ತು ಗೌರವ ಪೂರ್ಣವಾದ ಸ್ಥಾನವನ್ನು ಗಳಿಸಿಕೊಡುವುದಾಗಿದೆ. ಈ ಸ್ಥನದಿಂದ ಆಯ್ಕೆಯಾದ ಇವರು ಸಾಹಿತ್ಯಕ್ಕಷ್ಟೇ ಅಲ್ಲ, ಸಾಮಾಜಿಕ, ಸಂಸ್ಥೆಗಳಿಗೂ, ರಾಜಕೀಯ ಕ್ಷೇತ್ರಗಳಿಗೂ ಸಾಂಸ್ಕೃತಿಕ ಕೇಂದ್ರಗಳಿಗೂ ಅನೇಕ ರೀತಿಯಿಂದ ಸಹಯೋಗ ನೀಡುತ್ತಾ ಇಲ್ಲಿಯ ಸರ್ವತೋಮುಖ ಅಭಿವೃದ್ಧಿಗೆ ತಮ್ಮ ಅನುಪಮ ಸೇವೆಯನ್ನು ನೀಡಿರುತ್ತಾರೆ ಎಂಬುದನ್ನು ನಾವು ನೋಡಬಹುದಾಗಿದೆ.

ಸಮಾಜದಲ್ಲಿನ ಯಾವುದೇ ಒಬ್ಬ ವ್ಯಕ್ತಿ ನಾನು ಎಷ್ಟು ವರ್ಷ ಬದುಕಿದೆ ಎನ್ನುವುದಕ್ಕಿಂತ, ಆತ ತನ್ನ ಬದುಕಿನ ಜೀವನದ ಅವಧಿಯಲ್ಲಿ ಏನೆಲ್ಲಾ ಒಳಿತು ಮಾಡಿದೆ ಎಂಬುದು ಮುಖ್ಯವಾಗಿರುತ್ತದೆ. ತಮಗಾಗಿ ಹುಟ್ಟಿದರು ತಮ್ಮನ್ನೇ ತ್ಯಾಗ ಮಾಡಿಕೊಂಡು ಬದುಕಿ ದಂತಕಥೆಯಾದವರಿದ್ದಾರೆ; ಸ್ವಾರ್ಥಪರರಾಗದೆ ಸಾಂಸ್ಕೃತಿಕ ಪರಂಪರೆಯನ್ನು ವಿಸ್ತರಿಸಿದ್ದಾರೆ. ಇನ್ನೂ ಕೆಲವರು ತಮ್ಮನ್ನೂ ಸಂತೈಸಿಕೊಂಡು ನೆಲದ ಮೇಲೆ ಮಾನವೀಯತೆ ಚಿತ್ರಿಸಿದ್ದಾರೆ. ನಿಜವಾದ ಅರ್ಥದಲ್ಲಿ ಮಾನವರಾಗಿ ಬದುಕಿದ್ದಾರೆ. ಉಳಿದ ಬಹುಪಾಲು

ಜನ ಒಂದಿಷ್ಟು ಸಂಪತ್ತನ್ನು ಸಂಗ್ರಹಿಸಿರುತ್ತಾರೆ. ತಮ್ಮ ಅಸ್ತಿತ್ವವೆ ಅಂತಹವರಿಗೆ ತಿಳಿದಿರುವುದಿಲ್ಲ. ಈ ಮೇಲೆ ತಿಳಿಸಿದ ಮೊದಲು ಅಥವಾ ಕೊನೆಯ ಪಂಕ್ತಿಯಲ್ಲಿ ನಿಲ್ಲದೆ, ತಮ್ಮ ಅರ್ಥಪೂರ್ಣ ಬದುಕಿನ ಔಪಚಾರಿಕ ಹಾಗೂ ಅನೌಪಚಾರಿಕ ಸಂದರ್ಭದಲ್ಲಿ ಮಾನವೀಯತೆಗೆ ಅಂಟಿಕೊಂಡವರು ಗೊಡ್ಡು ಸಂಪ್ರದಾಯವನ್ನು ಬುದ್ಧಿ ಪ್ರಧಾನವಾಗಿ ತಿರಸ್ಕರಿಸಿ ಮಲೆಯೂರು ಗುರುಸ್ವಾಮಿ ಅವರು ವೈಚಾರಿಕ ಹೆಜ್ಜೆಗಳನ್ನಿರಿಸಿದವರು. ಚಾಮರಾಜನಗರ ಜೈನಪರಂಪರೆಯ ಕೇಂದ್ರ ಕನಕಗಿರಿಯ ಸೆರಗಂಚಿನ ಮಲೆಯೂರಿನವರಾದ ಗುರುಸ್ವಾಮಿ ಅವರು ಜೈನರ ಅಹಿಂಸಾ ತತ್ವಗಳನ್ನು ಮೈಗೂಡಿಸಿಕೊಂಡ, ಭಕ್ತಿಭಂಡಾರಿ ಬಸವಣ್ಣನವರ ವಚನಗಳ ಕಸವನ್ನುಂಡು ಕಂಗೊಳಿಸಿದ ಅಮೃತಲತೆ, ಈ ಅಧ್ಯಾಯದಲ್ಲಿ ಜೈನಧರ್ಮದ ತತ್ವಸಿದ್ದಾಂತಗಳು ಹೇಗೆ ಮೂಡಿ ಬಂದಿದೆ ಎಂಬುದನ್ನು ತಿಳಿಯಬಹುದಾಗಿದೆ. 'ಮಲೆಯೂರು ಗುರುಸ್ವಾಮಿ ಅವರು ಈ ಮಹತ್ಸಾಧಕರನ್ನು ಕುರಿತು ಗಾಢವಾಗಿ ಅಧ್ಯಯನ ಮಾಡಿದವರು, ಜೊತೆಜೊತೆಯಲ್ಲಿ ಜೈನಧರ್ಮದ ತತ್ವಸಿದ್ಧಾಂತಗಳು ಅವರನ್ನು ಪ್ರಭಾವಿಸಿದ್ದವು. ತಾನು ಮೇಲ್ವರ್ಗದ ಕುಟುಂಬದಲ್ಲಿ ಜನ್ಮವೆತ್ತಿದರೂ, ನಾಡಿನ ದುರ್ಬಲರ ಪರವಾಗಿಯೇ ಸದಾ ತುಡಿಯುವ ಮನಸ್ಥಿತಿ ಹೊಂದಿರುವ ಮಲೆಯೂರು ಗುಡಿ-ಗೋಪುರಗಳಿಂದ ದೂರ ನಿಂತು ಗೊಡ್ಡು ಸಂಪ್ರದಾಯಗಳನ್ನು ತೂರಿಬಿಟ್ಟವರು. ಸಮತೆಯ ತತ್ವವನು ವಿಚಾರಕ್ಕೆ ಸೀಮಿತಗೊಳಿಸಿದ ಆಚರಣೆಗೆ ತಂದುಕೊಂಡವರು.

ಚಾಮರಾಜನಗರ ಜಿಲ್ಲೆ ಕರ್ನಾಟಕದಲ್ಲೇ ಅತ್ಯಂತ ಹಿಂದುಳಿದ ಜಿಲ್ಲೆಯಾದರೂ ಸಾಹಿತ್ಯದ ಸೊಗಡು ಸಾಕಷ್ಟು ಜನಜನಿತವಾಗಿರುವುದನ್ನು ನೋಡಬಹುದಾಗಿದೆ. ಈ ಭಾಗದಲ್ಲಿ ದಟ್ಟವಾಗಿ ಜನಪದವನ್ನು ಹಾಸಿಕೊಂಡಿರುವ ದೇಶಿಪರಂಪರೆಯ ಸೊಗಡಿನ ಜಿಲ್ಲೆ, ವಾರಗಟ್ಟಲೆ, ತಿಂಗಳುಗಟ್ಟಲೆ, ಹಾಡಿದರೂ ಮುಗಿಯದ ಜನಪದ ಕಲಾವಿದರು ಮಂಟೇಸ್ವಾಮಿ, ಮಾದೇಶ್ವರರು ತಿರುಗಾಡಿದ ಈ ನೆಲದಲ್ಲಿ ನೆಲೆಸಿದ್ದಾರೆ.

ಇಂತಹ ಜನಪದ ಹೂದೋಟದಲ್ಲಿ ಜನ್ಮ ಪಡೆದ ಶ್ರೀ ಮಲೆಯೂರು ಗುರುಸ್ವಾಮಿ ಅವರು ಚಾಮರಾಜನಗರದ ಜಿಲ್ಲೆಯ ಇತಿಹಾಸದ ಎಳೆ ಎಳೆಯನ್ನು ಬಿಡಿಸಬಲ್ಲ ನಮ್ಮೊಳಗಣ ಶ್ರೇಷ್ಠ ಸಂಶೋಧಕರು, ತಮ್ಮ ಅಧ್ಯಾಪಕ ವೃತ್ತಿ ಮತ್ತು ಸಾಹಿತ್ಯ ಎರಡರಲ್ಲೂ ಸೈ ಎನಿಸಿಕೊಂಡೇ ಮುನ್ನೆಡದವರು, ಇವರ ಕೃತಿಗಳು ಮೌಲಿಕ ಕೃತಿಗಳು ಅದರಲ್ಲೂ

ಕಾದಂಬರಿಗಳು ಉತ್ತಮ ಕೃತಿಗಳಾಗಿ ಜನಪದದ ಶೈಲಿಯಲ್ಲಿ ಮುಡಿಬಂದಿರುವುದು ಇವುಗಳ ವಿಶೇಷವಾಗಿದೆ. ಇವರ ಮೂರು ಕಾದಂಬರಿಗಳಲ್ಲೂ ಲೇಖಕರ ಹೃದಯ ವೈಶಾಲತೆ, ಮಾನವೀಯತೆ ಮತ್ತು ಸಮಷ್ಠಿ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ಮಲೆಯೂರು ಜೈನರ ಪುಣ್ಯಕ್ಷೇತ್ರಗಳಲ್ಲಿ ಒಂದೆನಿಸಿ ಭಾರತ ದೇಶದ ಚರಿತ್ರೆಯಲ್ಲಿ ಅಜರಾಮರವಾಗಿದೆ. ಕನಕಗಿರಿಯ ದಕ್ಷಿಣ ಪಾರ್ಶ್ವದಲ್ಲಿ ಹಿಂದೆ ಛಲದಂಕಪುರ ಎನ್ನುವ ಊರು ಇತ್ತಂತೆ. ಈ ಹೆಸರೇ ಮಗು ಅವರ ಮೊದಲ ಕಾದಂಬರಿ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'ಯಲ್ಲಿ ಬಂದಿದೆ. ಈ ಬಾರಿಗೆ ಒಂದು ಸಹಸ್ರ ವರ್ಷ ತುಂಬಿದ ಕಾರಣಕ್ಕಾಗಿ ಊರಿಗೆ ಏಳಿಗೆ ಕಡಿಮೆ ಎನ್ನುವ ಹಿನ್ನೆಲೆಯಲ್ಲಿ ಈಗಿರುವ ಸ್ಥಳದಲ್ಲಿ ಊರು ನಿರ್ಮಾಣವಾಗಿ, ಮಲೆಯು(ಬೆಟ್ಟ) ಪಕ್ಕದ ಊರು 'ಮಲೆಯೂರು' ಎಂದಾಯಿತು. ಕನಕಗಿರಿ ಜೈನರ ದಿಗಂಬರ ಪಂಥದ ಅನುಯಾಯಿಗಳ ಧರ್ಮಕ್ಷೇತ್ರ. ಕೊಳ್ಳೇಗಾಲದ ಸಮೀಪದ ಬಸ್ತಿಪುರದಿಂದ ತೀರ್ಥಂಕರರು ಹೊರಟು ಬಂದು ಇಲ್ಲಿ ನೆಲೆನಿಂತರು ಎಂಬುದಾಗಿ ಕನಕಗಿರಿ ಕ್ಷೇತ್ರದ ಮಾಹಿತಿಗಳು ತಿಳಿಸುತ್ತದೆ. 'ಭುವನಕೀರ್ತಿ ಭಟ್ಟಾರಕ ಸ್ವಾಮಿಗಳು ಈಗ ಅಲ್ಲಿ ನೆಲೆಯೂರಿ ಪುಣ್ಯಕ್ಷೇತ್ರದ ಬೆಳವಣಿಗೆಗೆ ಕಾರಣರಾಗಿ ದೇಶದ ಹಲವು ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಮಲೆಯೂರಿನ ಕನಕಗಿರಿ ಕ್ಷೇತ್ರವೂ ಒಂದೆಂಬಂತೆ ಮಾಡುವಲ್ಲಿ ಶ್ರಮಿಸಿದ್ದಾರೆ. ಈಗೆ ಈ ಅಧ್ಯಾಯದಲ್ಲಿ ಗ್ರಾಮದ ಹಿನ್ನೆಲೆ ಅಲ್ಲಿನ ಸ್ಥಳದ ಮಹಿಮೆ, ಅಲ್ಲಿನ ಸಾಹಿತ್ಯ ಹಾಗೂ ಸಮಾಜಕ್ಕೆ ಈ ಭಾಗದ ಕೊಡುಗೆ ಏನು ಎಂಬುದನ್ನು ತಿಳಿಸುವುದಾಗಿದೆ. ಇಂದಿನ ದಿನಗಳಲ್ಲಿ ಮಲೆಯೂರು ಗ್ರಾಮ ರಾಜಕೀಯ ದೊಂಬರಾಟ ಅವ್ಯಾಹತವಾಗಿ ನಡೆಯುತ್ತಿದೆ. ಊರಿನ ಉದ್ಧಾರಕ್ಕಿಂತ ರಾಜಕೀಯ ಲೆಕ್ಕಾಚಾರಗಳೇ ಮುಖ್ಯವಾಗುತ್ತಿವೆ ಎಂಬುದನ್ನು ಲೇಖಕರಾದ ಮಗು ಅವರೇ ತಮ್ಮ ಅಭಿನಂದನ ಗ್ರಂಥದಲ್ಲಿ (ಮಹಾಮನ) ಹೇಳಿದ್ದಾರೆ. "ಆರುನೂರು ಅಡಿ ಭೂಮಿಯನ್ನು ಕೊರೆದರೂ ನೀರು ಸಿಕ್ಕದಿದ್ದರೂ, ತೆಂಗಿನ ಮರದಿಂದ ತೆಗೆಯುವ ನೀರಾಕ್ಕೇನೂ ಕೊರತೆ ಇಲ್ಲ. ಊರಿನ ಚಾವಡಿಯಲ್ಲಿಯೇ ತೀರ್ಮಾನವಾಗುತ್ತಿದ್ದ ಸಣ್ಣಪುಟ್ಟ ನ್ಯಾಯಗಳು ಈಗ ಪೊಲೀಸ್ ಸ್ಟೇಷನ್ ಹತ್ತುತ್ತವೆ. ಅಲ್ಲಿ ಎರಡು ಕಡೆಯುವರೂ ಹಣ ಮತ್ತು ಮಾನ ಎರಡನ್ನು ಕಳೆದುಕೊಂಡು ಪೆಚ್ಚು ಮೋರೆ ಹಾಕಿಕೊಂಡು ಹಿಂದಕ್ಕೆ ಬರುತ್ತಾರೆ. ರಾಜಕೀಯದ ಸೋಂಕು ಎಲ್ಲರಿಗೂ ತಗುಲಿದೆ" ಎಂದು ಹೇಳಿರುವುದನ್ನು ನಾವು ನೋಡಬಹುದಾಗಿದೆ.[೧]

---

೧. ಮಹಾಮನೆ, ಅಭಿನಂದನಾ ಗ್ರಂಥ, ಸಂಪಾದಕರು, ಸೋಮಶೇಖರ್ ಬಿಸಲ್ವಾಡಿ, ಪು. ೧೯

ಮಗು ಅವರು ಮೈಸೂರು ಚಾಮರಾಜನಗರ ಅವಳಿ ಜಿಲ್ಲೆಗಳ ಬಗೆಗೆ ವಿಶೇಷ ಮಮತೆಯನ್ನು ಬಂದಿರುವ ವ್ಯಕ್ತಿ ಎನ್ನಬಹುದಾಗಿದೆ. ಏಕೆಂದರೆ ಇವರ ಕಾದಂಬರಿಗಳು ಹಾಗೂ ಇನ್ನಿತರ ಕೃತಿಗಳನ್ನು ಅವಲೋಕಿಸಿದಾಗಿ ಸಾಮಾನ್ಯವಾಗಿ ಇವರ ಎಲ್ಲ ಕೃತಿಗಳ ವಿಷಯ ವಿಚಾರವು ಈ ಭಾಗದ ವಿಷಯಪೂರಕವಾಗಿರುವುದನ್ನು ನೋಡಬಹುದಾಗಿದೆ. ಈ ಅಧ್ಯಾಯದಲ್ಲಿ ಹೆಚ್ಚಾಗಿ ಲೇಖಕರ ಬಗ್ಗೆ ಹೆಚ್ಚಿನ ವಿಷಯ-ವಿಚಾರಗಳನ್ನು ಹೇಳುತ್ತಾ ಹೋಗುತ್ತೇನೆ. ಮ.ಗು ಅವರು ಮೂರು ಕಾದಂಬರಿಗಳನ್ನು ಬರೆದಿದ್ದಾರೆ. ಈ ಮೂರು ಕಾದಂಬರಿಗಳನ್ನು ಅವಲೋಕಿಸಿದಾಗಿ ಈ ಲೇಖಕರು ಓರ್ವ ದಾರ್ಶನಿಕ ದೃಷ್ಟಿಯ ಕಾದಂಬರಿಕರರಾಗಿಯೂ ಪ್ರಸಿದ್ಧರು ಎಂಬುದು ತಿಳಿಯುತ್ತದೆ. ಈ ಕಾದಂಬರಿಗಳಲ್ಲಿ ಬರುವ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮತ್ತು ರಾಜಕೀಯ ಸ್ಥಿತ್ಯಂತರಗಳನ್ನು ಆಳವಾಗಿ ಬಲ್ಲವರಾಗಿದ್ದು ಇಂತಹ ವಿಚಾರ-ಧಾರೆಗಳನ್ನು ತಮ್ಮ ಕೃತಿಗಳಲ್ಲಿ ದರ್ಶನಗೈದಿದ್ದಾರೆ. ರಸಋಷಿ, ವರಕವಿ, ಯುಗದಕವಿ, ಮಹಾಕವಿ ಕುವೆಂಪು ಅವರ ಕಾವ್ಯದರ್ಶನ ಮತ್ತು ಕ್ರಾಂತಿದರ್ಶನದ ಬಗೆಗೆ ವಿಶೇಷ ಆಸಕ್ತಿಯನ್ನು ತಳೆದಿರುವ ಲೇಖಕರು ಅವನ್ನು ತಮ್ಮ ಮೌಲ್ಯಯುತ ಬದುಕಿನ ದೇದೀಪ್ಯಮಾನವಾದ ಕಿರಣಗಳೆಂದು ಭಾವಿಸುತ್ತಾರೆ. ಚಾರಿತ್ರಿಕ ವಿಷಯ ಸಂಗತಿಗಳನ್ನು ಹೃದಯವಾಗಿ ಮನಂಬುಗುವಂತೆ ಚಿತ್ರಿಸಿ ಓದುಗರ ಚಿತ್ತ ಭಿತ್ತಿಯನ್ನು ಒಳಹೊಕ್ಕರು. ಸಂಸಕವಿಯು ಮೈಸೂರು ಯದುಕುಲ ಬಗೆಗೆ ತಾಳಿದ್ದ ವಿಶೇಷ ಅಧ್ಯಯನಾಸ್ಥೆಯ ದ್ಯೋತಕವಾಗಿ ನಾಟಕ ಸಾಹಿತ್ಯವು ಒಡಮೂಡಿದಂತೆ ಮಗು ಅವರ ಯದುವಂಶದ ಬಗೆಗಿನ ಆಸಕ್ತಿಮನಸೆಳೆಯುತ್ತದೆ. ಮೈಸೂರು ಅರಸು ಚಿಕ್ಕದೇವರಾಜನ ವ್ಯಕ್ತಿತ್ವ ಅನುಪಮ ಹಾಗೂ ಅಸಾಧಾರಣವಾದುದು, ಧೀರೋದಾತ್ತದೆಯಿಂದ ಕೂಡಿದುದು. ಕಡುವೈರಿಗಳು ಹೂಡುವ ರಾಜತಂತ್ರ, ಪ್ರತಿತಂತ್ರ, ಕುತಂತ್ರಗಳನ್ನು ತನ್ನ ರಾಜವ್ಯೂಹದ ಆಯುಧದಿಂದ ಬೇಧಿಸಿ ಭೇದಿಸಿದ ಮುತ್ಸದ್ಧಿಯವನು. ತನ್ನ ಅಜೇಯ ಪೌರುಷ-ಪರಾಕ್ರಮವನ್ನು ಸಹಜ ರಾಜತಾಂತ್ರಿಕ ಸ್ತರಗಳಲ್ಲಿ ಮೆರೆದವನು. ತನ್ನ ಸಾಮಾನ್ಯ ನಾಡಜನರ ಒಳಿತನ್ನೇ ಬಯಸಿ ಅವರೊಡನೆ ಬೆರೆತು ಒಂದಾದವನು. ಸುವರ್ಣ ಸಿಂಹಾಸನದ ಗದ್ದುಗೆಯನ್ನೇರಿದರೂ ಪ್ರಜಾವತ್ಸಲನಾಗಿ ರಾರಾಜಿಸಿದವನು, ಮಾನವೀಯತೆಯನ್ನು ಮೆರೆದ ಉಜ್ವಲ ಪುರುಷನವನು, ಲೇಖಕರು ಈ ಎಲ್ಲ ಅಂಶಗಳನ್ನು ಮಥಿಸಿ, ಎಕ್ಕಿ ಸಾಣೆ ಹಿಡಿದು ಅಕ್ಷರಗಳಲ್ಲಿ ಒಡಮೂಡಿಸಿದ್ದಾರೆ. ತಮ್ಮ ಚಾರಿತ್ರಿಕ ಕೃತಿಯಲ್ಲಿ 'ಅಪ್ರತಿಮವೀರ' ಕಾದಂಬರಿಯೂ ಹಳೆಯ ಮೈಸೂರು ಪ್ರಾಂತ್ಯವನ್ನಾಳಿದ ಮಹಾರಾಜರುಗಳಲ್ಲಿ ಒಬ್ಬರು

ಪ್ರಸಿದ್ಧ ಚಿಕ್ಕದೇವರಾಜೊಡೆಯರ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಗತಿಗಳ ಪೂರಿತ ಮಾರ್ಮಿಕ ಸಂಶೋಧನಾತ್ಮಕ ರಚನೆ. ಇದು ಮ.ನ.ಮೂರ್ತಿ ಅವರ 'ಚಿಕ್ಕದೇವರಾಜ' ಕೃತಿಯ ಮುಂದುವರೆದ ಭಾಗದಂತಿದ್ದು ಸತ್ಯ ಘಟನೆಗಳನ್ನು ಬೆನ್ನುಹತ್ತಿ ರಚಿಸಿದ ಸಮರ್ಥ ಚಾರಿತ್ರಿಕ ಪ್ರಸಿದ್ಧ ಕಾದಮಬರಿಯಾಗಿದೆ. ಚಿಕ್ಕದೇವರಾಯನು ಎಂತಹ ವಿಶಿಷ್ಟ ಧೀಮಂತ ನಾಡಪ್ರೇಮಿ ಎಂಬುದನ್ನು ಅಪ್ರತಿಮವೀರ ಕಾದಂಬರಿ ಭದ್ರಪಡಿಸಿದೆ. 'ಚಿಕ್ಕದೇವ ಬೂಪ ಮನೆಯಲ್ಲಿ ದೀಪ' ಎಂಬ ವ್ಯಾಖ್ಯೆ ಆತನ ಯಸಸ್ವೀ ಆಡಳಿತ ಕ್ರಮವನ್ನು ಅಣುರಣಿಸಿತು. ಅಂದು ಪುಂಖಾನುಪುಂಖವಾಗಿ ಘಟಿಸಿಹೋದ ಜೈನ-ವೀರಶೈವ-ವೈದಿಕ ಮತಗಳ ಸಂಘಷಗಳನ್ನು ದುಷ್ಪರಿಣಾಮಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಮ.ಗು ಅವರ ಕೊಡುಗೆ ಮತ್ತು ಸ್ಥಾನವನ್ನು ಭದ್ರಪಡಿಸಿರುವ ಕ್ರತಿ ಇದಾಗಿದೆ.

ಹದಿನೈದನೆಯ ಶತಮಾನದಲ್ಲಿ ಆಗಿಹೋದ ಮಹಾನ್ ಸಂತ, ಸಮಾಜ ಸುಧಾರಕ ಹಾಗೂ ಒಬ್ಬ ಮಹಾನ್ ದಾರ್ಶನಿಕ ಸಿದ್ಧಪುರುಷ ಶ್ರೀ ಮಲೆಯ ಮಹದೇಶ್ವರರು ಕಾಡಿನ ಜನರಲ್ಲಿ ಬೀಡುಬಿಟ್ಟು ಮಡುಗಟ್ಟಿದ್ದ ಮೌಢ್ಯ, ಕಂದಾಚಾರಗಳನ್ನು ಬುಡಸಮೇತ ಕಿತ್ತು ಹಾಕಿದವರು; ಅಹಿಂಸಾ ಧರ್ಮವನ್ನು ಪ್ರತಿಪಾದಿಸಿ ಜಾತ್ಯತೀತವಾಗಿ ಮೆರೆದವರು. ಮಲೆಯ ಮಹದೇಶ್ವರ ಒಬ್ಬ ಕಾಯಕ ಜೀವಿ, ಜನಪದ ಬೀರು ಚಾರಿತ್ರಿಕ ಮೇರು ಪುರುಷ. ಹಾಗೆ ಇಲ್ಲಿನ ಲೇಖಕರಾದ ಮಲೆಯೂರು ಗುರುಸ್ವಾಮಿ ಅವರು ಅಂತಹ ಮಹಾನ್ ವ್ಯಕ್ತಿಯನ್ನು ತಮ್ಮ 'ಮಹಾಯಾತ್ರಿಕ' (೧೯೮೯) ಬೃಹತ್ ಹಾಗೂ ಮಹತ್ ಕಾದಂಬರಿಯಲ್ಲಿ ಚಿನ್ಮಯ ಸ್ವರೂಪವಾಗಿ ಚಿತ್ರಿಸಿದ್ದಾರೆ. ಮಹದೇಶ್ವರರು ಮಲೆನಾಡು ಬೀಡುಗಳಲ್ಲಿ ವಾಸಿಸುತ್ತಿದ್ದವರ ಬದುಕನ್ನು ಹಸನುಗೊಳಿಸಲು ದಲಿತೋದ್ಧಾರ, ಹರಿಜನೋದ್ಧಾರ, ಗಿರಿಜನೋದ್ಧಾರ ಮತ್ತು ಸಮಾಜೋದ್ಧಾರ ಹಾಗೂ ಪರಿವರ್ತನೆಯ ಹಿನ್ನೆಲೆಯಲ್ಲಿ ಕಾರ್ಯವೆಸಗಿದವರು. ಈ ಕಾದಂಬರಿಯಲ್ಲಿ ಮಹಾಮಹಿಮನು ಬೋಧಿಸಿದ ಅಹಿಂಸಾ ಧರ್ಮಪಾಲನೆ ಮತ್ತು ಮೌಢ್ಯ ನಿರ್ಮೂಲನಾ ಕಾರ್ಯಕ್ರಮಗಳು ಮತ್ತು ಅನುಸರಿಸಿದ ಜಾತ್ಯಾತೀತತೆಯನ್ನು ವಿಶದವಾಗಿ ಕಾಣಬಹುದಾಗಿದೆ. ಒಟ್ಟಿನಲ್ಲಿ ಮಲೆಯ ಮಹಾದೇಶ್ವರರ ಸಾಧನೆಯ ಮಾರ್ಗವನ್ನು ತಮ್ಮ ಒಳಗಣ್ಣಿನ ನೋಟದಿಂದ ದರ್ಶಿಸಿ ಸರಳ ಶೈಲಿ ಹಾಗೂ ಜನಪದದಲ್ಲಿ ಎಲ್ಲ ವರ್ಗದ ಜನತೆಗೆ ಅರ್ಥವಾಗುವ ಗ್ರಾಮೀಣ ಶೈಲಿಯ ಮಾತುಗಳ ಹಾಗೂ ಗ್ರಾಮೀಣ ಜನತೆಗೆ ಅರ್ಥವಾಗುವ

ಆಡುಭಾಷೆಯಲ್ಲಿ ಲೇಖಕರು ಬರೆದಿದ್ದಾರೆ ಎಂಬುದನ್ನು ಈ ನಿಬಂಧದ ಈ ಅಧ್ಯಾಯದಲ್ಲಿ ನೋಡಬಹುದಾಗಿದೆ.

ಈ ಅಧ್ಯಾಯದಲ್ಲಿ ಲೇಖಕರ ಸಾಹಿತ್ಯ ನಿರ್ಮಿತ ವಿಚಾರ ಪ್ರಚೋದಕವೇ ಹೊರತು ಪ್ರಚಾರ ಸಾಧಕವಲ್ಲ ಎಂಬುದನ್ನು ನಾವು ತಿಳಿಯಬಹುದು. ಲೇಖಕರಾದ ಮ.ಗು ಅವರ ಸಾಹಿತ್ಯ ಕೊಡುಗೆ ಎಂದಿಗೂ ಗಟ್ಟಿಯಾಗಿ ನಿಲ್ಲುವಂತಹುದು. ವೈಚಾರಿಕ ನೆಲೆಯಲ್ಲಿಯೇ ನಿಂತು ಚಿಂತನೆಗೈದು ಅಧ್ಯಾತ್ಮವನ್ನು ಅನುಸರಿಸಿ ಪಸರಿಸುವ ಪ್ರಗತಿಪರ ನಿಲುವು ಅವರದು. ಸಾಧು ಸಂತರ ಸಾಧನೆಗಳನ್ನು ಪವಾಡಗಳ ಹಿನ್ನೆಲೆಯಲ್ಲಿ ನೋಡುವ ಭಾವುಕ ಸ್ಥಿತಿಯನ್ನುಳ್ಳವರಾಗದೆ ಆ ಮಹಾಮಹಿಮರು ತಮ್ಮ ಜೀವಿತಾವಧಿಯಲ್ಲಿ ಜನಮಾನಸದಲ್ಲಿ ಬೆರೆತು ಒಂದಾಗಿ ಗೈದ ಒಳಿತನ್ನು ದಾಖಲಿಸುವ ನಿರ್ವ್ಯಾಜ್ಯ ಮನೋವಾಂಛೆಯನ್ನುಳ್ಳವರು, ಅವರ ಬರಹ ಕಾಲ್ಪನಿಕ ಕಥಾವಸ್ತುಗಳ ರೇಖೆಗಳನ್ನು ಮೀರಿದುದು. ಮೊದಲಿನಿಂದಲೂ ಕನ್ನಡನಾಡಿನ ಚರಿತ್ರೆಯ ಬಗೆಗೆ ವಿಷಯ ಹಾಗೂ ಅಪಾರ ಜನಪರ ಕಾಳಜಿ ಮತ್ತು ಅಧ್ಯಯನಾಸಕ್ತಿಯನ್ನು ಹೊಂದಿದವರು. ಅಂತೆಯೇ 'ಮಗು' ಅವರು ಮಂಟೇಸ್ವಾಮಿ ಹಾಗೂ ಮಲೆಯ ಮಹದೇಶ್ವರರಂತಹ ದಿವ್ಯಾತ್ಮರು ಸಂಚರಿಸಿದ ಪ್ರದೇಶದೆಲ್ಲೆಡೆ ವಿಹರಿಸಿ ಸಂತಸಗೊಂಡಿದ್ದಾರೆ. ಜೀವಿಗಳ ಕಷ್ಟಕೋಟಲೆಗಳನ್ನು ಮತ್ತು ಸಾಂಸ್ಕೃತಿಕ ಲೋಕವನ್ನು ವಿಸ್ತರಿಸಿದ್ದಾರೆ. ಯಾವುದೇ ಒಬ್ಬ ಸಂಶೋಧಕ ಅನ್ವೇಷಕನಿಗೆ ಒಂದು ವಿಷಯದಲ್ಲಿ ಭೇದವಿದ್ದಲ್ಲಿ ಚಿಂತನ ಮಂಥನವೇರ್ಪಟ್ಟು ಉಪಯೋಗವಾಗಬಲ್ಲುದು. ಐತಿಹಾಸಿಕ ಸತ್ಯ ಹೊರಹೊಮ್ಮಬಹುದು ಎಂಬುದು ಅವರ ದೃಢ ಅಭಿಪ್ರಾಯ. ಅದನ್ನು ಮುಕ್ತವಾಗಿ ಯುಕ್ತವಾಗಿ ಶಕ್ತವಾಗಿ ಸ್ವಾಗತಿಸುತ್ತಾರೆ ಕೂಡಾ. ಇದು ಸತ್ಯಶೋಧನೆಗೆ ಉತಮ ಮಾದರಿ ಎನ್ನುತ್ತಾರೆ. ಅನಿಶ್ಚಿತ ವಿಷಯಗಳ ಬಗೆಗೆ ಸಮೂಹ ಸನ್ನಿ ಕೂಡದು ಎನ್ನುತ್ತಾರೆ. ಯಾವುದೇ ವ್ಯಕ್ತಿಯು ತಾನು ತುಸುಮಟ್ಟಿಗಾದರೂ ಅರಿವನ್ನು ಹೊಮದಿರಬೇಕೆಂಬುದನ್ನು ಮತ್ತು ಅದರ ಅಗತ್ಯವನ್ನು ಮನಗಂಡಿದ್ದಾರೆ. ಮಗು ಅವರ ಬರಹಗಳಲ್ಲಿ ಸಾಂದರ್ಭಿಕವಾಗಿ ಅಲ್ಲಲ್ಲಿ ಮಿಂಚುವ ಗಾದೆ ಮಾತುಗಳು ಮತ್ತು ನಾಣ್ಣುಡಿಗಳು ವಚನ ಸಾಹಿತ್ಯದ ವಿಚಾರಗಳು ಎಲ್ಲ ವರ್ಗದ ಜನತೆಯ ಪ್ರೀತಿಯನ್ನು ಎಲ್ಲಾ ವರ್ಗದ ಜನತೆಯ ಮನಸ್ಸನ್ನು ಸೆಳೆಯುವ ಅವರ ಆಕರ್ಷಿತವಾದ ಮಾತುಗಾರಿಕೆ. ಮಾತುಗಾರಿಕೆ ಎಂದಾಗ ಪ್ರತಿಯೊಬ್ಬ ವ್ಯಕ್ತಿಯ ಮಾತುಗಾರಿಕೆ ಸಭೆ-ಸಮಾರಂಭಗಳಲ್ಲಿ ಮಾತನಾಡುವವರನ್ನು ನಾವು ಕೇಳಿದ್ದೇವೆ. ಆದರೆ

ಮಲೆಯೂರು ಗುರುಸ್ವಾಮಿ ಅವರ ಮಾತುಗಾರಿಕೆ, ವಿಭಿನ್ನವಾಗಿರುತ್ತದೆ. ಅವರು ಮಾತನಾಡುವ ಶೈಲಿ ಕೆಲವು ಪದಗಳನ್ನು ಮತ್ತೊಮ್ಮೆ ಮಗದೊಮ್ಮೆ ಒತ್ತಿ ಒತ್ತಿ ಹೇಳುತ್ತಿರುತ್ತಾರೆ. ಕೇಳುಗರಿಗೆ ಒಂದು ರೀತಿಯ ಆಶ್ಚರ್ಯ ಹಾಗೂ ರೋಮಾಂಚನವಾಗುತ್ತದೆ. ಒಟ್ಟಾರೆಯಾಗಿ ಮಗು ಅವರ ಮಾತುಗಾರಿಕೆ ಎಷ್ಟು ಕೇಳಿದರೂ ಅದು ಅತೃಪ್ತಿದಾಯಕ ಎನಿಸುತ್ತದೆ.[೨]

ಈ ನಿಬಂಧದಲ್ಲಿ ಒಟ್ಟು ಮೂರು ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ಗ್ರಾಮೀಣ ಬದುಕಿನ ಚಿತ್ರಣ, ಇತಿಹಾಸ, ಪ್ರಕೃತಿಪ್ರೇಮ, ಅಧ್ಯಾತ್ಮಶಕ್ತಿ ಇನ್ನೂ ಮುಂತಾದ ವಿಚಾರಗಳು ಹೇಗೆ ಮೂಡಿಬಂದಿದೆ ಎಂಬುದರ ತೌಲನಿಕ ಅಧ್ಯಯನ ಈ ಅಧ್ಯಯನ ಉದ್ದೇಶವಾಗಿದೆ. ಅನಂತರ ಒಟ್ಟಾರೆಯಾಗಿ ಎಲ್ಲಾ ಅಧ್ಯಾಯಗಳ ಸಾರ-ಸಂಗ್ರಹವನ್ನು ಪ್ರಸ್ತುತಪಡಿಸಲಾಗಿದೆ.

ಕೊನೆಯದಾಗಿ ಪ್ರಸ್ತುತ ಸಂದರ್ಭದಲ್ಲಿ ಈ ಸಂಶೋಧನೆಯ ಉದ್ದೇಶ, ಮಹತ್ವ ಪ್ರಾಮುಖ್ಯತೆಗಳನ್ನು ಕುರಿತಂತೆ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೨. ಮಹಾಮನೆ, ಅಭಿನಂದನಾ ಗ್ರಂಥ, ಸಂಪಾದಕರು, ಸೋಮಶೇಖರ್ ಬಿಸಲ್ವಾಡಿ, ಪು. ೫೦–೫೧

ಅಧ್ಯಾಯ ಎರಡು

ಮಲೆಯೂರು ಗುರುಸ್ವಾಮಿ ಅವರ ಬದುಕು ಬರಹ

ಮಗು ಎಂಬ ಸಂಕ್ಷಿಪ್ತ ನಾಮದಿಂದ ಪ್ರಖ್ಯಾತವಾಗಿರುವ ಪ್ರೊ. ಮಲೆಯೂರು ಗುರುಸ್ವಾಮಿ ಅವರು ಯಾವುದೇ ಸಾಹಿತ್ಯ ಪಂಥಗಳಲ್ಲಿ ಗುರುತಿಸಿಕೊಳ್ಳದೆ, ಸಾಹಿತ್ಯಕ್ಕಷ್ಟೆ ಮತ್ತು ಬದುಕಿಗಷ್ಟೆ ಬದ್ಧರಾಗಿ ಬರೆಯುವ ಲೇಖಕರಲ್ಲಿ ಒಬ್ಬರಾಗಿದ್ದಾರೆ.

ಮಗು ಅವರ ವೈಯಕ್ತಿಕ ಬದುಕನ್ನ ನೋಡುವುದಾದರೆ ಅದು ಸ್ವಾರಸ್ಯವೂ, ಸಾಹಸವೂ ಆಗಿರುವಂಥದ್ದು, ಶಿವಣ್ಣ ಮರಮ್ಮ ದಂಪತಿಗಳಿಗೆ ಮೂರು ಜನ ಗಂಡುಮಕ್ಕಳು, ಮೊದಲನೆಯ ಮಗ ಎಂ.ಎಸ್.ಮಹದೇವಪ್ಪ ಎರಡನೆಯವರು ಎಂ.ಎಸ್.ಗುರುಸಿದ್ದಪ್ಪ ಮೂರನೆಯ ಹಾಗೂ ಕೊನೆಯ ಮಗನಾಗಿ ಜನಿಸಿದವರೆ ಗುರುಸ್ವಾಮಿ ಅವರು. ದುರಾದೃಷ್ಟವಶಾತ್ ಇವರು ಒಂದು ವರ್ಷದ ಮಗುವಾಗಿದ್ದಾಗಲೆ ತಂದೆಯನ್ನು ಕಳೆದುಕೊಂಡರು. ಧೃತಿಗೆಡದ ತಾಯಿ ಮರಮ್ಮ ಮಗನ ಇಂದಿನ ಕೀರ್ತಿಗೆ ಮುನ್ನುಡಿ ಬರೆದಂತೆ ತನ್ನ ತವರಾದ ದೇವನೂರಿನಲ್ಲಿ ವಾಸಕ್ಕೆ ಬಿಟ್ಟು ಶಾಲೆಗೆ ಸೇರಿಸಿದರು. ಪ್ರಸಿದ್ಧ ಸಾಹಿತಿ 'ದೇವನೂರ ಮಹಾದೇವ' ಅವರು ಅಲ್ಲಿ ಇವರ ಸಹಪಾಠಿಯಾಗಿದ್ದರು. ಆಗಲೇ ಇವರಿಬ್ಬರು ಸಾಹಿತ್ಯದ ಗಾಳಿಯನ್ನು ಜೊತೆಜೊತೆಯಾಗಿ ಉಸಿರಾಡಿರಲೂಬಹುದು.

ಮಲೆಯೂರು ಗುರುಸ್ವಾಮಿ ಅವರು ೦೧-೧೦-೧೯೪೭ರಲ್ಲಿ ಚಾಮರಾಜನಗರ ಜಿಲ್ಲೆಯ ಜೈನರ ಪ್ರಸಿದ್ಧ ಸ್ಥಳ 'ಕನಕಗಿರಿ' ಎಂಬ ಬೆಟ್ಟದ ಬುಡದ ಮಗ್ಗುಲಲ್ಲಿ ಕೃಷಿ ಬದುಕಿನ ಅನೇಕ ಸಮಸ್ಯೆಗಳನ್ನು ತನ್ನ ಒಡಲಲ್ಲಿರಿಸಿಕೊಂಡು ನೆಮ್ಮದಿಯಾಗಿ ಮಲಗಿರುವ ಪುಟ್ಟಗ್ರಾಮ. ಮಲೆಯೂರು ಗುರುಸ್ವಾಮಿ ಎಂಬ ಹೆಸರಿನಿಂದಲೇ 'ಮಲೆಯೂರು' ಜನಮಾನಸದಲ್ಲಿ ಗುರುತಿಸಿಕೊಂಡಿದೆ ಎಂದರೆ ಬಹುಶಃ ಅತಿಶಯೋಕ್ತಿಯಾಗಬಹುದು.

ಚಾಮರಾಜನಗರ ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲೇ ಶ್ರೇಷ್ಟಸ್ಥಾನದಲ್ಲಿರುವ ಕೆಲವೇ ಕೆಲವರಲ್ಲಿ ಮಗು ಅವರು ಒಬ್ಬರು, ತಾವು ಜನ್ಮತಾಳಿದ ಊರಿನ ಹೆಸರನ್ನು ತಮ್ಮ ನಾಮಾಂಕಿತಕ್ಕಂಟಿಸಿಕೊಂಡು ಜೀವನದಲ್ಲಿ ಅವರು ಏರಿದ ಮೆಟ್ಟಿಲುಗಳು ಏಳು-ಬೀಳುಗಳು ಅಪಾರ, ಅದೊಂದು ಸೋಲು-ಗೆಲುವಿನ ಹಾದಿ ಎನ್ನಬಹುದು.

ಸುಮಾರು ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಜೆ.ಎಸ್.ಎಸ್.ಸಂಸ್ಥೆಯಲ್ಲಿ ಕನ್ನಡ ಸಾಹಿತ್ಯದ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳ ನೆಚ್ಚಿನ ಗುರುಗಳು ಚಾಮರಾಜನಗರ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಿರಂತರವಾಗಿ ಮೂರು ಭಾರಿ ಆಯ್ಕೆಯಾಗಿ ಸಾಹಿತ್ಯಾಸಕ್ತರಲ್ಲಿ 'ಹ್ಯಾಟ್ರಿಕ್' ಅಧ್ಯಕ್ಷರು ಎಂದೇ ಖ್ಯಾತರಾದವರು.

ಮಲೆಯೂರು ಗುರುಸ್ವಾಮಿಯವರ ಸೃಜನಶೀಲ ಕೃತಿಗಳು ಮಹಾಯಾತ್ರಿಕ, ಅಪ್ರತಿಮವೀರ, ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ, ಇವು ಕಾದಂಬರಿಗಳು, 'ಖಾಸಗಿ ಬದುಕಿನ ಕಾಮಪ್ರೇಮ' ಇತ್ಯಾದಿ (ಕವನ ಸಂಕಲನ) ಮಾತೆಂಬುದು ಜ್ಯೋತಿರ್ಲಿಂಗ (ವಚನ ಸಾಹಿತ್ಯ) ಶ್ರೀ ಕಾರ್ಯಸ್ವಾಮಿ ಮಠ (ಕ್ಷೇತ್ರ ಚರಿತ್ರೆ) ಶರಣ ಕಿರಣ (ಶರಣರ ವ್ಯಕ್ತಿಚಿತ್ರ) ಪ್ರಭುಲಿಂಗಲೀಲೆ (ವಿಮರ್ಶಾಕೃತಿ) ದೇವಲಾಪುರದ ನಂಜುಂಡಕವಿ.

ಸಂಪಾದಿತ ಕೃತಿಗಳು:

- ಮೂಡಲ ಸೀಮೆಯ ಕಥೆಗಳು (ಚಾಮರಾಜನಗರ ಜಿಲ್ಲೆಯ ಕಥೆಗಳು)
- ಕಪಿಲಾ ನದಿಯ ಎಡಬಲದಿ (ನಂಜನಗೂಡು ತಾಲ್ಲೂಕಿನ ಮಾಹಿತಿಕೃತಿ)
- ಕಾಡಂಚಿನ ಕೋಗಿಲೆಗಳ ಕಲರವ (ಚಾಮರಾಜನಗರ ಜಿಲ್ಲೆಯ ಕವನಗಳು)
- ಹೆಜ್ಜೆಗೆ (ಹೆಜ್ಜಿಗೆ ಎಂ.ಲಿಂಗಣ್ಣನವರ ಸಂಸ್ಮರಣ ಗ್ರಂಥ)
- ಛಂದೋನಿಜಗುಣಿ (ಕುಮಾರ ನಿಜಗುಣರ ಅಭಿನಂದನಾ ಗ್ರಂಥ)
- ರಾಜಪಥ (ಬಿ.ವಿ.ವೈಕುಂಠರಾಜು ಅಭಿನಂದನಾ ಗ್ರಂಥ)
- ಸೋಮಸಿರಿ
- ಶಿವಪ್ರಭೆ(ಕ್ಯಾತನಹಳ್ಳೀ ಶ್ರೀ ಶಿವಪ್ರಭು)
- ಹೊನ್ನುಹೊಳೆ (ಚಾ.ನಗರ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ನೆನಪಿನ ಗ್ರಂಥ)
- ಗ್ರಂಥಲಯಾಂತರಂಗ ವಿಚಾರತರಂಗ (ವಿಚಾರ ಸಂಕಿರಣದ ಕೃತಿ – ಇತರರೊಡನೆ)
- ಶಿವಸಂಪದ (ಪ್ರಸಾದ ಸಂಚಿಕೆಗಳ ವಿಶೇಷ ಲೇಖನಗಳ ಸಂಕಲನ)
- ಸ್ಥಿತಪ್ರಜ್ಞ (ಡಾ. ಬಸವರಾಜಯ್ಯ ಅವರ ಅಭಿನಂದನ ಗ್ರಂಥ)
- ವೈದ್ಯವಸಂತ (ಡಾ. ಎಸ್.ವಸಂತಕುಮಾರ್ ಅವರ ಅಭಿನಂದನಾ ಗ್ರಂಥ)
- ಸುವರ್ಣ ಸೌರಭ (ಜೆ.ಎಸ್.ಎಸ್. ಮಹಾವಿದ್ಯಾಪೀಠದ ಚರಿತ್ರೆ)

- ಕನ್ನಡದಲ್ಲಿ ಧಾರ್ಮಿಕ ನಿಯತಕಾಲಿಕೆಗಳು (ವಿಚಾರಸಂಕಿರಣದ ಕೃತಿ ಇತರರೊಡನೆ)
- ವಚನ ವಾಙ್ಮಯ ಮತ್ತು ಸಂಸ್ಕೃತ ಸಾಹಿತ್ಯ (ವಿಚಾರಸಂಕಿರಣದ ಕೃತಿ)
- ಮೈಸೂರು ದರ್ಶನ – ಭಾಗ ೨, ೩, ೪ (ಸಂಪಾದಿತ ಕೃತಿ – ಇತರರೊಡನೆ)
- ಚಾಮರಾಜನಗರದ ಜಿಲ್ಲೆಯ ಪ್ರಾತಿನಿಧಿಕ ಕಥೆಗಳು(ಕಸಾಪ)
- ಅರಮನೆ ಶ್ರೀ ಪಂಚಗವಿ ಮಠದ ಶ್ರೀಗೌರೀಶಂಕರ ಸ್ವಾಮಿಗಳ ಸಮಗ್ರ ಸಾಹಿತ್ಯ
- ನೆನಪು ದಿವ್ಯಾನುಭವ
- ಒಡನಾಡಿ (ಗೊ.ರು.ಪರಮೇಶ್ವರಪ್ಪ ಅಭಿನಂದನಾ ಗ್ರಂಥ)
- ಅಕ್ಕ (ಜಗದಂಬಾ ಮಲ್ಲೇದೇವರು ಅಭಿನಂದನಾ ಗ್ರಂಥ)

ಜಾನಪದ : *ಚಿಕ್ಕದಣ್ಣಾಯಕ ಚೆನ್ನಬಸವಣ್ಣ (ಸಂಪಾದಿತ ಕೃತಿ ಇತರರೊಡನೆ)

ಸಾಕ್ಷ್ಯಚಿತ್ರ ಸಾಹಿತ್ಯ : *ಸಂಚಿಯ ಹೊನ್ನಮ್ಮ (ಭರತೀಯ ಭಾಷಾ ಸಂಶೋಧನಾ ಕೇಂದ್ರಕ್ಕಾಗಿ)

*ಕವಿ ದೇವಚಂದ್ರ (-- " --)

* ಗದ್ದಿಗೆ ಕೆಂಡಗಣ್ಣಸ್ವಾಮಿ (ಖಾಸಗಿಯವರಿಗಾಗಿ)

ಸಂಪಾದಕರು :

- 'ಪ್ರಸಾದ' ದ್ವೈಮಾಸಿಕ ಪತ್ರಿಕೆ (ಜೆ.ಎಸ್.ಎಸ್. ಮಹಾವಿದ್ಯಾಪೀಠ)
- ಅಧ್ಯಕ್ಷರು, ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಮೂರು ಅವಧಿಗೆ)
- ಅಧ್ಯಕ್ಷರು, ಮೈಸೂರು ಜಿಲ್ಲಾ ಶಿಕ್ಷಣ ಸಾಹಿತ್ಯ ಪರಿಷತ್ (ಒಂದು ಅವಧಿಗೆ)

ಪುರಸ್ಕಾರ :

- "ಮಹಾಮನ" ಅಭಿನಂದನಾ ಗ್ರಂಥ
- ಮಹಾಕವಿ ಷಡಕ್ಷರ ದೇವಸ್ಮಾರಕ ಪ್ರಶಸ್ತಿ
- ಚಾಮರಾಜನಗರ ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿ
- ರೋಟರಿ (ಪೂರ್ವ) ರಾಜ್ಯೋತ್ಸವ ಪ್ರಶಸ್ತಿ

- ಸದಸ್ಯರು, ಜಾನಪದ ಸಂಶೋಧನಾ ಕೇಂದ್ರ, ಮಲೆಮಹದೇಶ್ವರ ಬೆಟ್ಟ
- ಸದಸ್ಯರು, ಕರ್ನಾಟಕ ರಾಜ್ಯ ಗೆಜೆಟಿಯರ್
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೨೦೧೦)
- ಪ್ರಾಧ್ಯಾಪಕರು, ಬಸವಪೀಠ, ಮೈಸೂರು ವಿಶ್ವವಿದ್ಯಾನಿಲಯ (೨೦೧೨)
- ಸಪ್ನ ಬುಕ್‌ಹೌಸ್ ರಾಜ್ಯೋತ್ಸವ ಪ್ರಶಸ್ತಿ, ಬೆಂಗಳೂರು (೨೦೧೪)

ಹೀಗೆ "ಮಲೆಯೂರು ಗುರುಸ್ವಾಮಿ ಅವರ ಸಾಧನೆ ಘನವಾದದ್ದು, 'ಕಾವ್ಯ' ಕ್ಷೇತ್ರ, ಕಾರ್ಯಕ್ಷೇತ್ರ ಎರಡರಲ್ಲಿ ಪ್ರಸಿದ್ಧರು, 'ಇಂತಹ ಸವ್ಯಸಾಚಿ' ಅಪರೂಪ, ಮಲೆಯೂರರ ಬರವಣಿಗೆ ವಿಫಲವೇನಲ್ಲ. ಆದರೆ ಸತ್ವಯುತವಾದದ್ದು ಮತ್ತು ವೈವಿಧ್ಯವುಳ್ಳದ್ದು" (ಪುಟ ಸಂಖ್ಯೆ ೭೭)

ಪ್ರಸ್ತುತ, ಮಗುರವರ ಸಾಂಸಾರಿಕ ಬದುಕು ತುಂಬ ನೆಮ್ಮದಿಯಿಂದ ಕೂಡಿರುವಂತದ್ದು. ಕೊಡಗಿನ ಮೂಲದ ವಿದ್ಯಾವಂತ ಕುಟುಂಬದ ಕೆ.ಎಸ್.ಜಯಂತಿ ಎಂಬುವರ ಜಜತೆ ೧೯೮೧ರಲ್ಲಿ ಇವರಿಗೆ ಮದುವೆಯಾಯಿತು. ಶ್ರೀಮತಿಯವರು ಇಂಗ್ಲಿಷ್ ಪ್ರಾಧ್ಯಾಪಕರು, ಇಂಗ್ಲಿಷ್ ಎಂದರೇ ಗ್ರಾಮೀಣ ಯುವಕರಿಗೆ ಭಯ. ಈ ಭಯವನ್ನು ಹೋಗಲಾಡಿಸಿ ಅನೇಕ ಗ್ರಾಮೀಣರಿಗೆ ಆಂಗ್ಲ ಭಾಷೆಯನ್ನು ಓದುವಂತೆ ಪ್ರೇರೇಪಿಸಿ ಓದಿಸಿದವರು ಇವರು. ಇವರ ಒತ್ತಾಸೆಯಿಂದ ಇಂದು ಈ ಭಾಗದ ಅನೇಕ ಯುವಕರು ಇಂಗ್ಲಿಷ್‌ನಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ. ಶ್ರೀಮತಿ ಜಯಂತಿ ಅವರು ಬಂಧು-ಬಾಂಧವರ ಜೊತೆ ಆತ್ಮೀಯ ಸಂಬಂಧ ಇಟ್ಟುಕೊಂಡಿರುವ ದೊಡ್ಡ ಮನಸ್ಸಿನವರು. ಈ ವಿಚಾರದಲ್ಲಿ ಗುರುಸ್ವಾಮಿಗಳು ತುಂಬಾ ಭಾಗ್ಯವಂತರು. ಇವರ ಪಾಲಿಗೆ 'ಅನನ್ಯ' ಒಬ್ಬಳೆ ಒಬ್ಬಳು ಮಗಳಿದ್ದಾಳೆ.

ಚಾಮರಾಜನಗರ ಜಿಲ್ಲೆಯ ಜೈನಕಾಶಿ ಮಲೆಯೂರು, ಮಲೆಯೂರು ಹಡೆದ ಇಬ್ಬರು ಖ್ಯಾತನಾಮರಲ್ಲಿ ಒಬ್ಬರು 'ರಾಜವಳಿಕತೆ'ಯ ದೇವಚಂದ್ರ, ಇನ್ನೊಬ್ಬರು 'ಮಹಾಯಾತ್ರಿಕದ

ಶ್ರೀ ಮಗು ಅವರು. ಶ್ರೀಯುತ ಮಲೆಯೂರು ಗುರುಸ್ವಾಮಿ ಅವರು ನೇರ ನಡೆನುಡಿಗೆ ಹೆಸರಾದವರು. ಎಲ್ಲರ ಜೊತೆಯಲ್ಲಿಯೂ ಆತ್ಮೀಯವಾಗಿ ಮಾತನಾಡುವ, ಬೆರೆಯುವ ಸಹೃದಯರು. ಅವರ ಸ್ನೇಹಕ್ಕೆ ವಯಸ್ಸು, ಅಂತಸ್ಸು, ಜಾತಿಮತಗಳ ಅಂತರವಿಲ್ಲ, ಯಾರೇ ಆದರೂ ಕೆಲವೇ ನಿಮಿಷ ಅವರೊಡನೆ ಇದ್ದರೆ ಆತ್ಮೀಯರಾಗಿ ಬಿಡುತ್ತಾರೆ. ಅವರ ಕಷ್ಟಸುಖಗಳಲ್ಲಿ ಭಾಗಿಯಾಗುವ ಬಂಧುಗಳಾಗಿ ಬಿಡುತ್ತಾರೆ. ಮಗು ಅವರ ಅಂತರಂಗ ಅಷ್ಟು ಪರಿಶುದ್ಧವಾದದು ಎಂದು ಹೇಳಬಹುದು. ಮಲೆಯೂರು ಗುರುಸ್ವಾಮಿ ಅವರದು ಉಪಕಾರ ಪ್ರವೃತ್ತಿಯ ಮನೋಭವ ಒಡನಾಡಿಗಳು ತಮ್ಮ ವಿದ್ಯಾರ್ಥಿಗಳುಅವರ ಮಿತ್ರರು ಕಷ್ಟದಲ್ಲಿ ಇರುವವರನ್ನು ಅವರು ಎಂದೂ ಸಹಿಷಲಾರರು. ಸ್ನೇಹಿತರು ಕಷ್ಟದಲ್ಲಿ ಸಿಲುಕಿದಾಗ ಅವರಿಗೆ ಸಹಾಯ ಹಸ್ತ ನೀಡುವುದು ಅವರ ಸ್ವಭಾವ. ಶ್ರೀಯುತ ಗುರುಸ್ವಾಮಿ ಅವರ ಕೈ ತೂತು, ಹಣ ಅವರಲ್ಲಿ ಕೂಡುವುದಿಲ್ಲ ಎಂದು ಅವರ ಹತ್ತಿರದ ಸ್ನೇಹಿತರು ಆಗಾಗ ಖಾಸಗಿಯಾಗಿ ಮಾತನಾಡಿಕೊಳ್ಳುವುದುಂಟು, ಪರರ ಕಷ್ಟಕ್ಕಾಗಿ ಹಲವಾರುಮ್ಮೆಲಿ ಒಡಾಡಿ ಅವರಿಗೆ ನೆರವಾದ ಅನೇಕ ನಿದರ್ಶನಗಳನ್ನು ಅವರ ಹತ್ತಿರ ಮಿತ್ರರೊಬ್ಬರಿಂದ ನಾನು ಕೇಳಿದ್ದೇನೆ. ಅಂತಹ ಘಟನೆಗಳನ್ನು ಶ್ರೀಯುತರು ಬಹಳ ರಸವತ್ತಾಗಿ ಹೇಳುತ್ತಾರೆ.

ಇಂದು ಒಪೆಲ್ ಅಸೆಂಟ್ ಕಾರುಗಳ ಒಡೆಯನಾಗಿ ಮಲೆಯೂರು ಗುರುಸ್ವಾಮಿ ಅವರನ್ನು ಅಲ್ಲಿ ಇಲ್ಲಿ ಕಂಡಾಗ ಕೇವಲ ಹುಸಿನಗುವನ್ನು ಚೆಲ್ಲಿ ಬಂದ ವೇಗದಲ್ಲಿಯೇ ಮುಂದಕ್ಕೆ ಹೋಗಿ ಬಿಡುವ ವ್ಯಕ್ತಿಯೊಬ್ಬನಿಗೆ ಲೇವಾದೇವಿಗಾರರೊಬ್ಬರಿಂದ ಕೇವಲ ಎರಡು ಸಾವಿರ ರೂಪಾಯಿಗಳ ಸಾಲವನ್ನು ಕೊಡಿಸಿ ಕೊಡುವುದಕ್ಕೆ ಹೋಗಿದ್ದು; ಅಂದು ಮಂಗಳವಾರವಾದ ಕಾರಣಕ್ಕಾಗಿ ಹಣಕೊಡಲು ಸತಾಯಿಸಿ ಕೊನೆಗೆ ರಾತ್ರಿ ಎಂಟು ಗಂಟೆಗೆ ಆತ ಕೊಟ್ಟಿದ್ದು, ಅಷ್ಟುದೂರ ಬಂದನಂತರ ಸ್ಕೂಟರ್ ಮುಂದಕ್ಕೆ ಹೋಗದೆ ನಿಂತುಕೊಂಡಾಗ ರಿಪೇರಿಯ ಅ ಆ ಇ ಈ ಸಹ ಗೊತ್ತಿರದ ಮಗು ಅವರು ಇಡೀ ರಾತ್ರಿ ಸುಮಾರು ೨೦ ಕಿ.ಮೀ. ದೂರದಲ್ಲಿದ್ದ ನಂಜನಗೂಡಿಗೆ ಸ್ಕೂಟರ್ ತಳ್ಳಿಕೊಂಡು ತಲುಪಿದ್ದು, ಅಲ್ಲಿನ ಮೆಕ್ಯಾನಿಕ್ ಒಬ್ಬ ಕಿಕ್ಕರ್‌ಗೆ ಒದ್ದಾಗ ಅದು ಒಂದೇ ಸಲ ಸ್ಟಾರ್ಟ್ ಆದದ್ದು.

ಹೊಸ ಸ್ಕೂಟರ್ ಆದ್ರೂ ಯಾಕೆ ನಮಗೆ ಅದು ಕೈಕೊಟ್ಟಿತ್ತು ಎಂದು ಕೇಳಿದಾಗ, ಆ ಮೆಕ್ಯಾನಿಕ್ ಹಿಂಡಿ ಹಿಪ್ಪೆಯಾಗಿದ್ದ ಇವರ ಮುಖವನ್ನು ನೋಡಿ ಪಕ್ಕನೆ ನಕ್ಕು, ಏನಿಲ್ಲಾ ಸಾರ್ ಪೆಟ್ರೋಲ್ ರಿಸರ್ವ್‌ಗೆ ಬಂದಿತ್ತು. ಅದನ್ನು ನೋಡಿ ನಾಬ್ ಅನ್ನು ತಿರುಗಿಸದೆ ಸುಮ್ಮನೆ

ಕಾಲುಗಟ್ಟಿಯಿದೆ ಎಂದು ಒದ್ದರೆ ಅದು ಹೇಗೆ ಸ್ಟಾರ್ಟ್ ಆಗುತ್ತಾ ಸಾರ್ ಎಂದು ಹೇಳುತ್ತಾ ಮತ್ತಷ್ಟು ಜೋರಾಗಿ ನಕ್ಕದ್ದನ್ನು, ಮಗು ಅವರು ಬಹಳ ಸ್ವಾರಸ್ಯಕರವಾಗಿ ಹೇಳುತ್ತಾ ಆ ಮೆಕ್ಯಾನಿಕ್‌ಗಿಂತಲೂ ಜೋರಾಗಿ ಮೈಯೆಲ್ಲಾ ಕುಲುಕಿಸಿಕೊಂಡು ನಕ್ಕದನ್ನು ನೆನಸಿಕೊಂಡರೆ ನನಗೆ ಈಗಲೂ ನಗು ಒತ್ತರಿಸಿಕೊಂಡು ಬರುತ್ತದೆ (ಡಾ. ಸಿ.ಬಿ.ಪ್ರಭುದೇವಸ್ವಾಮಿ ಅವರು 'ಮಹಾಮನ' ಎಂಬ ಅಭಿನಂದನ ಗ್ರಂಥದಲ್ಲಿ ತಮ್ಮ ಲೇಖನದಲ್ಲಿ ಹೇಳಿದ್ದಾರೆ). ಇಂದು ಶ್ರೀಮಂತಿಕೆಯಿಂದ ಮರೆಯದನ್ನು ಹೇಳುವಾಗಲೂ 'ಮಗ' ಅವರಲ್ಲಿ ಯಾವುದೇ ಅಸಹನೆ, ಅತೃಪ್ತಿ ಗೋಚರವಾಗದ ಕೇವಲ Informal ಆಗಿ ಮಾತನಾಡುವುದನ್ನು ನೋಡಿದಾಗ ಇವರ ಚಿತ್ತಸಮತೆಯ ಬಗ್ಗೆ ಗೌರವ ಭಾವನೆ ತುಂಬಿ ಬರುತ್ತದೆ.

ಮಗು ಅವರು ಅಧ್ಯಾಪಕ ವೃತ್ತಿಯಲ್ಲಿರುವಾಗ ಅವರ ವಿದ್ಯಾರ್ಥಿಗಳು ಸಂಕಷ್ಟದಲ್ಲಿದ್ದು ತೊಂದರೆಗಳನ್ನು ಹೇಳಿಕೊಂಡಾಗ ಎಷ್ಟೋ ವಿದ್ಯಾರ್ಥಿಗಳಿಗೆ ಫೀ ಕಟ್ಟಿರುವುದುಂಟು. ಅನೇಕ ವಿದ್ಯಾರ್ಥಿಗಳಿಗೆ ಗ್ರಂಥಾಲಯದಲ್ಲಿ ಪುಸ್ತಕ ಕೊಡಿಸಿ ಆ ಪುಸ್ತಕ ವಾಪಸ್ಸಾಗದಿದ್ದಾಗ ಗ್ರಂಥಾಲಯಕ್ಕೆ ಅವರ ಕೈಯಿಂದ ಹಣವನ್ನು ಕಟ್ಟಿರುವುದುಂಟು ಇಂತಹ ಅನೇಕ ಘಟನೆಗಳು ಸಾಕಷ್ಟು ಇವೆ. ಪರರ ಚಿಂತೆ ನಮಗೇಕೆ ಎಂದು ನಿರ್ಲಿಪ್ತರಾಗಿರುವ ಜನರ ಮಧ್ಯೆ ಇವರೊಬ್ಬ ಅಂತಃಕರಣವುಳ್ಳ ಕರುಣಾಮಯಿ ಆಗಿದ್ದಾರೆ.

ಮಲೆಯೂರು ಗುರುಸ್ವಾಮಿ ಅವರ ಪೂರ್ವಜರು ಗುರುಭಕ್ತ ರೈತ ಕುಟುಂಬಕ್ಕೆ ಸೇರಿದವರು. ದೇವನೂರು ಗುರುಮಲ್ಲೇಶ್ವರರ ನೇರ ಶಿಷ್ಯರು, ಸ್ವಾಮಿಯವರ ಕಾದಂಬರಿಗಳಲ್ಲಿ ಗುರುಮಲ್ಲೇಶ್ವರರು, ಮಹದೇಶ್ವರ ಮುಂತಾದ ಶರಣರುಗಳು ವಸ್ತುವಾಗಿದ್ದಾರೆ. ಜೆ.ಎಸ್.ಎಸ್. ಮಹಾಸಂಸ್ಥೆಯ ಹೆಮ್ಮೆಯ ಧಾರ್ಮಿಕ ಪತ್ರಿಕೆ ಪ್ರಸಾದದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಇದರಲ್ಲಿನ ಸಂಪಾದಕೀಯಗಳು ಶ್ರೀಯುತರ ಪ್ರಖರ ವೈಚಾರಿಕತೆಗೆ ಸಾಕ್ಷಿಯಾಗಿವೆ. ಶರಣರ ಬಗೆಗಿನ ಸಂಶೋಧನೆ ಇವರ ಆಸಕ್ತಿಯ ವಿಷಯ. ಶರಣ ತತ್ವಗಳ ಬಗೆಗೆ ನಿರರ್ಗಳವಾಗಿ ಮಾತನಾಡುತ್ತಾರೆ.

ಚಿಕ್ಕವಯಸ್ಸಿನಿಂದಲೂ ಮಗು ಅವರು ಬೆಳೆಸಿಕೊಂಡು ಬಂದ ಮನೋಧರ್ಮ 'ವೈಚಾರಿಕತೆ' ಯಾವುದೇ ವಿಷಯವನ್ನು ಸತ್ಯಾಸತ್ಯತೆಯ ಒರೆಗಲ್ಲಿಗೆ ಹಚ್ಚದೆ ಒಪ್ಪುವ ಸ್ವಭಾವದವರಲ್ಲ. ಸಹಜವಾಗಿಯೆ ಇವರಿಗೆ ದೇವರು ಧರ್ಮ ಇವುಗಳಲ್ಲಿ ನಂಬಿಕೆಯೂ ಇಲ್ಲ, ತಿರಸ್ಕಾರವೂ ಇಲ್ಲ. ಶ್ರೀಯುತರಿಗೆ ದೇವರು ಧರ್ಮದ ವಿಷಯದಲ್ಲಿ ದ್ವಂದ್ವವಿದೆ

ಎನ್ನುವವರಿಗೆ ಅವರ ನೇರ ಉತ್ತರ ಶರಣರನ್ನು ಧರ್ಮಗುರುಗಳನ್ನು ಅದರ ತತ್ವಗಳಿಗಾಗಿ ಗೌರವಿಸುತ್ತೇನೆ, ಅಷ್ಟೇ ಅಂಧಶ್ರದ್ಧೆ, ಅಂಧಾಭಿಮಾನದಿಂದಲ್ಲ. ಶರಣರ ತತ್ವಗಳನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ನನ್ನ ಭಾಷಣಗಳಲ್ಲಿ ಸಾಮಾನ್ಯರಿಗೆ ತಿಳಿಸುವ ದೃಷ್ಟಿಯಿಂದ ಹೇಳುತ್ತಾ ಬಂದಿದ್ದೇನೆ. "ಪ್ರಪಂಚದ ಯಾವುದೇ ಧರ್ಮ ಅದು ಎಷ್ಟೇ ಶ್ರೇಷ್ಠವಾದುದ್ದಾಗಿರಲಿ ಅದಕ್ಕೆ ತನ್ನದೇ ಮಿತಿ ಇದ್ದೇ ಇರುತ್ತೆ. ಇನ್ನು ದೇವರ ಕಲ್ಪನೆಯಂತೂ ಮನುಷ್ಯನ ಭಯದ ಹಾಗೆಯೇ ಚಿಂತನೆಯ ಮಿತಿಯ ಸಂಕೇತವೇ ಆಗಿದೆ. ಈ ಜಗತ್ತಿನ ಬದುಕನ್ನು ನಿಯಂತ್ರಿಸುವ, ನಿರ್ದೇಶಿಸುವ ಯಾವುದೇ ಒಂದು ಶಕ್ತಿ ಇದೆ ಎಂದು ನಾನು ನಂಬುವುದಿಲ್ಲ. ಇಡೀ ಸೃಷ್ಟಿಯ ಘಟನಾವಳಿಗಳು ಒಂದು ಪ್ರಕ್ರಿಯೆ ಅಷ್ಟೆ. ಇದು 'ಮಗು' ಅವರ ಸ್ಪಷ್ಟ ನಿಲುವು. ಶರಣರನ್ನು ಅವರ ವಚನಧಾರೆಗಳನ್ನು ಪರಿಚಯಿಸುವ ಸಲುವಾಗಿ 'ಮಾತೆಂಬುದು ಜ್ಯೋತಿರ್ಲಿಂಗ' ಪುಸ್ತಕವನ್ನು ಅಚ್ಚುಹಾಕಿಸಿ ಉಚಿತವಾಗಿ ಹಂಚಿದ್ದಾರೆ. ಎಲ್ಲ ಧರ್ಮಗಳನ್ನು ಎಲ್ಲರ ಅಭಿಪ್ರಾಯವನ್ನು ಗೌರವಿಸುವುದು ಅವರ ದೊಡ್ಡ ಗುಣ. ಹಾಗೆಯೇ ತಪ್ಪು ಎನಿಸಿದ್ದನ್ನು ನೇರವಾಗಿ ಹೇಳಿಬಿಡುವ, ಸ್ವಭಾವ ಅವರದು ಧರ್ಮಗುರು–ಗಳಾಗಿರಬಹುದು, ರಾಜಕಾರಣಿಗಳಾಗಿರಬಹುದು, ಸ್ನೇಹಿತರಾಗಿರಬಹುದು.

ಪ್ರತಿಭಾವಂತರಾದ ಮಲೆಯೂರು ಗುರುಸ್ವಾಮಿ ಅವರು ಹಣ, ಆಸ್ತಿ, ಸಂಪತ್ತುಗಳನ್ನು ಮೈಲಿಗೆಯಂತೆ ಕಾಣುತ್ತಾರೆ. ಹಣವಂತೂ ಅವರಿಗೆ ಕೇವಲ ಉದರ ಪೋಷಣೆಗಾಗಿ. ತಮ್ಮ ಪ್ರತಿಭೆಯನ್ನು ಹಣವನ್ನಾಗಿ ಪರಿವರ್ತಿಸಿಕೊಳ್ಳುವುದು ಅವರಿಗೆ ಇಷ್ಟವಾಗದು. ಹಣದ ಶೇಖರಣೆ, ಆಸ್ತಿ ಮಾಡುವುದು ಏಕೋ ಏನೋ ಅವರಿಗೆ ಹಿಡಿಸಲಾರದು ಎಂದು ಹೇಳಬಹುದಾಗಿದೆ. ಶ್ರೀಯುತರು ಉತ್ತಮ ವಾಗ್ಮಿಗಳು, ಉತ್ತಮ ಭಾಷಣಕಾರರು, ಧಾರ್ಮಿಕ, ಸಾಮಾಜಿಕ, ರಾಜಕೀಯ ಯಾವುದೇ ವಿಷಯವಾದರೂ ಎಳೆಎಳೆಯಾಗಿ ಬಿಡಿಸಿ ಎಲ್ಲರಿಗೂ ಅರ್ಥವಾಗುವ ಲಲಿತ ಶೈಲಿಯಲ್ಲಿ ಸರಾಗವಾಗಿ ಮಾತನಾಡಬಲ್ಲರು. ಹದವಾಗಿ ಹಾಸ್ಯ ಬೆರಸಿ, ಸಂದರ್ಭಕ್ಕೆ ತಕ್ಕಹಾಗೆ ಉದಾಹರಣೆ ಸಹಿತ ಮಾತನಾಡಿ ಜನರನ್ನು ಮೆಚ್ಚಿಸುವುದು ಇವರಿಗೆ ಸಿದ್ಧಿಸಿದೆ. ಇವರು ಭಾಷಣದಲ್ಲಿ ಕೊಡುವ ಉದಾಹರಣೆಗಳು ತುಂಬ ಸೊಗಸಾಗಿ, ರಸವತ್ತಾಗಿ ಕೂಡಿರುತ್ತವೆ. ಅಲ್ಲೇ ಇವರ ಭಾಷಣದ ವರ್ಚಸ್ಸು ನಿಂತಿರುವುದು ಎಂದು ಹೇಳಬಹುದು. ಜನ ಮಂತ್ರಮುಗ್ಧರಾಗಿ ಎಷ್ಟು ಹೊತ್ತಾದರೂ ಇವರ ಭಾಷಣವನ್ನು ಕೇಳುತ್ತಾರೆ. ನುಡಿದಂತೆ ನಡೆಯುವುದು, ನಡೆದಂತೆ ನುಡಿಯುವುದು ಇವರ

ಜೀವನ ಮೌಲ್ಯವನ್ನು ಹೆಚ್ಚಿಸಿದೆ ಎಂಬುದನ್ನು ತಿಳಿಯಬಹುದಾಗಿದೆ. ದೀನದಲಿತರ ಬಗ್ಗೆ ಮಾನವ ಧರ್ಮದ ಬಗ್ಗೆ ಉದ್ಧಾರದ ಮಾತುಗಳನ್ನು ಆಡುವವರಿಗೆ ಕೊರತೆಯಿಲ್ಲ. ಶ್ರೀಯುತರು ಆಚರಣೆ ಮಾಡಿ ತೋರಿಸಿದ ಆದರ್ಶ ವ್ಯಕ್ತಿ. ಅವರ ಖಾಸಗಿ ಬದುಕನ್ನು ಬಲ್ಲವರಿಗೆ ಈ ಅಂಶ ತಿಳಿದದ್ದೇ ಆಗಿದೆ. ಇದು ಸಾಮಾನ್ಯರಿಗೆ ಸಾಧ್ಯವಾಗದ ವಿಷಯ. ಸಂತ ಹೃದಯದವರಿಗೆ ಮಾತ್ರ ಸಾಧ್ಯವಾಗುವಂತಹದು.

ಶ್ರೀಯುತರು ಜೀವನ ನಿರ್ವಹಣೆಗೆ ಆರಿಸಿಕೊಂಡ ಉದ್ಯೋಗ ಅಧ್ಯಾಪಕ ವೃತ್ತಿ, ಸುಮಾರು ಮೂರು ದಶಕಗಳಿಗೂ ಹೆಚ್ಚು ಅಧ್ಯಾಪಕ ವೃತ್ತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಯಶಸ್ವಿ ಪ್ರಾಧ್ಯಾಪಕರಾಗಿ ವೃತ್ತಿಯಿಂದ ನಿವೃತ್ತರಾಗಿದ್ದಾರೆ. ಶ್ರೀಯುತರ ಬೋಧನಾಶೈಲಿ ಮೆಚ್ಚುವಂತಹದು, ವಿಷಯ ಪ್ರತಿಪಾದನೆಯ ದಾಟಿ, ಮಾತಿನ ಸರಣಿ, ಉಚ್ಚಾರಣೆ, ಹಾವಭಾವ, ದೇಹಭಾಷೆ, ಮಾಂತ್ರಿಕ ನಗು, ತಿಳಿಹಾಸ್ಯ ವಿದ್ಯಾರ್ಥಿಗಳನ್ನು ಸದಾ ಆಕರ್ಷಿಸುತ್ತಿತ್ತು. ಶ್ರೀಯುತರು ಬೋಧನೆಯನ್ನು ಕೇಳುವ ಉದ್ದೇಶದಿಂದಲೇ ದೂರದ ಊರಿಂದ ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳು ತರಗತಿಗೆ ಬಂದು ಕೂರುತ್ತಿದ್ದದುಂಟು. ಇವರ ಹಾಜರಾತಿ ಪುಸ್ತಕದಲ್ಲಿ ೭೦ ವಿದ್ಯಾರ್ಥಿಗಳಿದ್ದರೆ ತರಗತಿಯಲ್ಲಿ ೮೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇರುತ್ತಿದ್ದರು. ಹಾಗಾಗಿ ಶ್ರೀಯುತರು ಹಾಜರಾತಿಯ ಪುಸ್ತಕ ತೆಗೆದು ಹಾಜರಾತಿ ಹಾಕುತ್ತಿರಲಿಲ್ಲ, ತರಗತಿಯಲ್ಲಿ ವಿಜ್ಞಾನವನ್ನು ಅಧ್ಯಯನ ಮಾಡುವವರ ಸಾಮಾಜಿಕ ಜವಾಬ್ದಾರಿ ಎಂತದು ಎನ್ನುವುದನ್ನು ಕುರಿತು ಅವರು ಮಾತನಾಡುತ್ತಿದ್ದರಂತೆ. ಒಂದು ಗಂಟೆ ನಿರರ್ಗಳವಾಗಿ ಮಾತನಾಡಿದ ನಂತರ ಇನ್ನೇನು ಬೆಲ್ಲು ಹೊಡೆಯಬೇಕು ಎನ್ನುವಷ್ಟರಲ್ಲಿ ಇಷ್ಟೆಲ್ಲವನ್ನೂ ನಿಮಗೆ ಏಕೆ ಹೇಳಿದೇನೆಂದರೆ, ವಿಚಾರವಾದಿ ಹೆಚ್.ನರಸಿಂಹಯ್ಯನವರ ಪ್ರಬಂಧವೊಂದು ನಿಮಗೆ ಪಠ್ಯವಾಗಿದೆ. ನರಸಿಂಹಯ್ಯನವರಲ್ಲಿ ವಿಜ್ಞಾನ ಹಾಗೂ ಮಾನವೀಯತೆ ಹೇಗೆ ಮಿಳಿತವಾಗಿದ್ದವು ಎನ್ನುವುದನ್ನು ತಿಳಿಸಲು ಇಷ್ಟೆಲ್ಲಾ ಹೇಳಬೇಕಾಯಿತು. ಸಾಹಿತ್ಯದ ತರಗತಿಗಳ ಬಗ್ಗೆ ವಿಜ್ಞಾನವನ್ನು ಅಧ್ಯಯನ ಮಾಡುವ ನಿಮ್ಮ ಧೋರಣೆ ಏನಿರುತ್ತದೆ ಎಂದು ನನಗೆ ಗೊತ್ತು, ನನ್ನ ಗರಗತಿಯಲ್ಲಿ ಅಟೆಂಡೆನ್ಸ್ ಕಂಪಲ್ಸರಿ ಏನಿಲ್ಲ. ಪಠ್ಯಪುಸ್ತಕ ಕೈಯಲ್ಲಿ ಇದ್ದರೆ ಒಳ್ಳೆಯದು. ಆದರೆ ಅಟೆಂಡೆನ್ಸ್‌ಗಾಗಿ ದೇಹವನ್ನು ಇಲ್ಲಿ ಕೂರಿಸಿ... ಮನಸ್ಸು ಟೌನ್ ಕಡೆ ವಾಕಿಂಗ್ ಹೋಗೋದು ಬೇಡ, ಹಾಗಿದ್ದರೆ ದೇಹವನ್ನೂ ಕರೆದುಕೊಂಡು ಹೋಗಿಬಿಡಿ ಎಂದು ಹೇಳುತ್ತಾ ನಗು ನಗುತ್ತಲೇ ತರಗತಿಯಿಂದ

ಹೊರನಡೆದರು. ಅಂದಿನ ಆ ಕನ್ನಡ ತರಗತಿ ನಮಗೆ ಎಂದು ಸಿಕ್ಕಿರದ ವಿಶೇಷವಾದದೊಂದು ಅನುಭವವನ್ನು ತಂದುಕೊಟ್ಟತ್ತು ಎಂದು ಬಿ.ನಂಜುಂಡಸ್ವಾಮಿ ಅವರು ತಮ್ಮ ಲೇಖನದಲ್ಲಿ 'ಮಹಾಮನ' ಎಂಬ ಮಗು ಅವರ ಅಭಿನಂದನ ಗ್ರಂಥದಲ್ಲಿ ಹೇಳಿದ್ದಾರೆ.

"ಸಾಹಿತ್ಯ ಕ್ಷೇತ್ರದಲ್ಲಿ ಮ.ಗು. ಎಂಬ ಕಾವ್ಯನಾಮದಿಂದ ಕತೆ, ಕವನ, ಕಾದಂಬರಿ, ಪುಸ್ತಕ, ಸಂಪಾದನೆ, ಜಾನಪದ, ಅನುವಾದ, ಶರಣ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ ಐತಿಹಾಸಿಕ ಕಾದಂಬರಿಗಳು ಹೆಸರು ಮಾಡಿವೆ. ಇವರ ಐತಿಹಾಸಿಕ ಕಾದಂಬರಿಗಳನ್ನು ಕುರಿತು ಮಾತನಾಡುತ್ತಿದ್ದ ವಿಮರ್ಶಕರೊಬ್ಬರ ಮಾತಿದು "ಪುಟ್ಟಸ್ವಾಮಯ್ಯ, ಮಾಸ್ತಿ, ತ.ರಾ.ಸು. ನಂತರ ಬಂದ ಐತಿಹಾಸಿಕ ಕಾದಂಬರಿಗಳಲ್ಲಿ ಶ್ರೀಯುತರ ಕಾದಂಬರಿಗಳು ಉತ್ತಮ ಸ್ಥಾನವನ್ನು ಪಡೆದಿವೆ" ಎಂದಿದ್ದಾರೆ. ನನಗೆ ತಿಳಿದಂತೆ ಕೃತಿ ರಚನೆಗೆ ಮುನ್ನ ಶ್ರೀಯುತರು ಬಹಳ ಸಿದ್ದತೆ ನಡೆಸುತ್ತಾರೆ. ಇತಿಹಾಸದ ಸಂಶೋಧನೆ, ಸಂದರ್ಶನ ಕ್ಷೇತ್ರ ಪರಿಶೀಲನೆಗಳ ಬಗೆಗೆ ಟಿಪ್ಪಣಿ ಮಾಡಿಕೊಂಡ ಅನಂತರವೇ ಬರವಣಿಗೆಗೆ ಕೂರುತ್ತಾರೆ. ಇವರ 'ಮಹಾಯಾತ್ರಿಕ' ಕಾದಂಬರಿಯ ವಿಷಯವನ್ನು ನಾನು ಕೇಳುವಾಗ ಜೆ.ಎಸ್.ಎಸ್. ಮಹಾವಿದ್ಯಾಪೀಠ ಮೈಸೂರಿಗೆ ಹೋಗಿದ್ದೆ ಆವಾಗ ನಾನು ಎರಡನೇ ಬಾರಿ ಸಂದರ್ಶನಕ್ಕೆ ಹೋಗಿದ್ದಾಗ ಈ 'ಮಹಾಯಾತ್ರಿಕ' ಕಾದಂಬರಿ ರಚನೆ ಮಾಡುವಾಗ ಸುಮಾರು ೬೦೦ ರಿಂದ ೭೦೦ರಷ್ಟು ಪುಟಗಳ ಟಿಪ್ಪಣೆಗಳನ್ನು ಬರೆದುಕೊಂಡು ಈ ಕಾದಂಬರಿಯನ್ನು ರಚಿಸಿದೆ ಎಂದು ಹೇಳುತ್ತಿದ್ದರು.

ಈ 'ಮಹಾಯಾತ್ರಿಕ' ಕಾದಂಬರಿಯನ್ನು ಅವರ ಅಧ್ಯಾಪಕ ವೃತ್ತಿಯಲ್ಲಿ ಬರೆದಿದ್ದಾರೆ. ಶ್ರೀಯುತರ ಮತ್ತೊಂದು ವಿಷಯವನ್ನು ನಾನು ಸಂದರ್ಶನದ ವೇಳೆ ಕೇಳಿ ತಿಳಿದೆ. ಶ್ರೀಯುತರ ಬರೆದ ಮಹಾಯಾತ್ರಿಕ ಕಾದಂಬರಿಯು ಮೈಸೂರು ವಿಶ್ವವಿದ್ಯಾನಿಲಯದ್ದಲಿ ಮರುವರ್ಷವೇ ಪಠ್ಯವಾಗಿ, ಇವರೇ ತರಗತಿಯಲ್ಲಿ ಬೋಧನೆ ಮಾಡಿದರಂತೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ ಇದೊಂದು ಅಪರೂಪ ತಾನು ಬರೆದ ಕೃತಿಯನ್ನು ನಾನೇ ತರಗತಿಯಲ್ಲಿ ಪಾಠಮಾಡುವ ಅವಕಾಶ ಸಿಕ್ಕಿದ್ದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿತು ಎಂಬ ವಿಚಾರವನ್ನು ನಾನು ಇವರ ಸಂದರ್ಶನದ ವೇಳೆಯಲ್ಲಿ ಕೇಳಿ ತಿಳಿದೆ.

'ಅನುರೂಪ' ಎಂಬ ಮಾತು ಗುರುಸ್ವಾಮಿ ಹಾಗೂ ಜಯಂತಿ ದಂಪತಿಗಳನ್ನು ನೊಡಿಯೇ ಹುಟ್ಟಿರಬೇಕು. ದಂಪತಿಗಳಿಬ್ಬರೂ ಪರೋಪಕಾರವೆ ತಮ್ಮ ಧ್ಯೇಯವಾಗಿ

ಬದುಕಿದ್ದಾರೆ. ಇಷ್ಟು ಸಾಲದೆಂಬಂತೆ ತಮ್ಮ ಮರಣಾನಂತರ ತಮ್ಮ ಶರೀರಗಳನ್ನು ವೈದ್ಯಕೀಯ ಅಧ್ಯಯನಕ್ಕಾಗಿ ದಾನ ಮಾಡಿರುವುದು ಅವರನ್ನು ನಿಜ ಅರ್ಥದಲ್ಲಿ 'ವಿಶ್ವಮಾನವ' ಆದರ್ಶ ವ್ಯಕ್ತಿಗಳನ್ನಾಗಿಸದೆ 'ಪರೋಪಕಾರಾರ್ಥಂ ಇದಂ ಶರೀರಂ' ಎನ್ನುವ ಮಾತನ್ನು ಅಕ್ಷರಶಃ ಪಾಲಿಸಿದ್ದಾರೆ.[೩]

ಒಟ್ಟಾರೆಯಾಗಿ ಮಿತ ಸಂಸಾರದ ಸುಖದಲ್ಲಿ ಶ್ರೀಯುತರು ಮಲೆಯೂರಿನ ಜೊತೆ ಅಮಿತವಾದ ದೇಹ ಆತ್ಮಗಳ ಸಂಬಂಧವನ್ನು ಹೊಂದಿದ್ದಾರೆ. ಕನಕಗಿರಿಯ ಮಡಿಲಲ್ಲಿ ಮೈ ಹರಡಿರುವ, ಪುಣ್ಯವಂತ ಜನರು ನಡೆದಾಡಿದ ಮಲೆಯೂರು, ಗುರುಸ್ವಾಮಿಗಳಿಗೆ ಜನ್ಮಕೊಟ್ಟಿದ್ದಕ್ಕೆ ಸಾರ್ಥಕವಾಗಿದೆ.

---

೩. ಮಹಾಮನೆ, ಅಭಿನಂದನಾ ಗ್ರಂಥ, ಸಂಪಾದಕರು, ಸೋಮಶೇಖರ್ ಬಿಸಲ್ವಾಡಿ, ಪುಟ ಸಂಖ್ಯೆ ೧೦೭.

ಅಧ್ಯಾಯ ಮೂರು

ಗ್ರಾಮೀಣ ಬದುಕಿನ ಚಿತ್ರಣ

"ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ" – ಮಲೆಯೂರು ಗುರುಸ್ವಾಮಿ ಅವರ ಮೊದಲ ಕಾದಂಬರಿ. ಇದು ಉತ್ಖನನ ಎನ್ನುವ ಹೆಸರಿನಲ್ಲಿ ಮರು ಮುದ್ರಣಗೊಂಡಿದೆ. ಐತಿಹಾಸಿಕ ಕಾದಂಬರಿ ಎಂಬ ಶೀರ್ಷಿಕೆಯನ್ನೇನೂ ಒಳಗೊಂಡಿಲ್ಲ. ಆದರೆ ಇತಿಹಾಸದ ಪುಟಗಳಿಗೆ ಸೇರದೇ ಹೋಗಿರುವ ಟಿಪ್ಪಣಿಯೊಂದನ್ನು ಸೇರಿಸುವ ಪ್ರಯತ್ನವನ್ನು ಈ ಕಾದಂಬರಿ ಮಾಡುತ್ತದೆ. ಇದು ಉತ್ಖನನ ಎನ್ನುವ ಹೆಸರಿನಲ್ಲಿ ಎರಡನೆಯ ಮುದ್ರಣಗೊಂಡಿದೆ. ಕಾದಂಬರಿಯ ಶೀರ್ಷಿಕೆಯಲ್ಲಿರುವ ವ್ಯಂಗ್ಯವನ್ನು ಗಮನಿಸಬೇಕು. ರಾಜ–ಮಹಾರಾಜರ ಕಾದಂಬರಿ, ನಾಟಕ ಇತ್ಯಾದಿಗಳೆಂದು ಪರಿಭಾವಿಸುವ ವಲಯದಲ್ಲಿ ಈ ಕಾದಂಬರಿ ತನ್ನದೇ ಆದ ರೀತಿಯಲ್ಲಿ ಇತಿಹಾಸ, ಆ ಇತಿಹಾಸ ಸಾಹಿತ್ಯವಾಗುವ ಸಂಧರ್ಭವೊಂದನ್ನು ಆ ಸಂಧರ್ಭದ ಮೇಲು–ಮಧ್ಯಮ–ಕೆಳವರ್ಗಗಳ ಒಂದು ಜೀವಂತ ಪ್ರಕ್ರಿಯೆಯಾಗಿ ಅಭಿವ್ಯಕ್ತಿಸಲು ಪ್ರಯತ್ನಿಸುತ್ತದೆ. ಇತಿಹಾಸ ಎನ್ನುವುದಕ್ಕೆ ಹೊಸ ವ್ಯಾಖ್ಯಾನವನ್ನು ಪಡೆದುಕೊಳ್ಳುತ್ತದೆ.

ಇತಿಹಾಸದ ಎಳೆಗಳು ಇಲ್ಲಿ ಕಾದಂಬರಿ ರೂಪ ಪಡೆದಿದೆ. ಗ್ರಾಮ್ಯ ಪರಿಸರದ ಚಿತ್ರಗಳಿವೆ. ಗ್ರಾಮೀಣ ಬದುಕಿನ ಎಲ್ಲ ಆಗು ಹೋಗುಗಳಿಗೆ ಇಲ್ಲಿ ಕಲಾತ್ಮಕ ಸ್ಪರ್ಶ ದೊರೆತಿದೆ, ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಗಳ ಬದುಕು ಹೇಗಿದೆ ಎಂಬುದನ್ನು ಕಾದಂಬರಿಕಾರರು ವಿಶ್ಲೇಷಿಸಿದ್ದಾರೆ. ಇಲ್ಲಿನ ಪಾತ್ರಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಲೇಖಕರು ಕಂಡಿರಿಸಿದ್ದಾರೆ.

ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆ ಇಲ್ಲ ಎನ್ನುವ ದೂರು ಬಹಳ ಕಾಲದ್ದು, ರಾಜ, ರಾಜ್ಯ, ಯುದ್ಧಗಳು, ಇಸವಿಗಳು ಇವುಗಳು ಮಾತ್ರ ನಾವು ಕಂಡಿರುವ ಇತಿಹಾಸದಲ್ಲಿ ಬರಲು ಸಾಧ್ಯವಿದೆ. ಈ ಹಿನ್ನಲೆಯಲ್ಲಿಯೇ ಇತಿಹಾಸ ಮತ್ತು ಸಾಹಿತ್ಯದ ನಡಿವಿನ ಸಂಬಂಧ ಹಲವು ಪ್ರಶ್ನೆಗಳನ್ನು ಒಳಗೊಂಡು ಸಂಕೀರ್ಣವಾದುದಾಗಿದೆ. ಯಾವುದು ಇತಿಹಾಸ? ಇತಿಹಾಸದ ಘಟನೆಯೊಂದನ್ನು ಕೃತಿಯಾಗಿಸುವಾಗ ಕೃತಿಕಾರ ಎದುರಿಸಬೇಕಾದ ಸವಾಲುಗಳು ಯಾವುವು? ಕೃತಿಕಾರ ಇತಿಹಾಸಕ್ಕೆ ವಿಧೇಯನಾಗಿ ಯಥಾಸ್ಥಿತಿಯನ್ನೇ ಪ್ರತಿಬಿಂಬಿಸಬೇಕೆ? ಆ ಇತಿಹಾಸ ಸತ್ಯವೆ? ನಂಬಲಾರ್ಹವೇ? ಪ್ರಶ್ನೆಗಳು ಹೀಗೇ ಮುಂದುವರಿಯುತ್ತವೆ.

ಇತಿಹಾಸವೊಂದು ಸಾಹಿತ್ಯದ ರೂಪ ತಾಳುವಾಗ ಏಳಬಹುದಾದ ಈ ದ್ವಂದ್ವಗಳ ನಡುವೆ ನಿಲ್ಲಬಹುದಾದ ತತ್ವವನ್ನು "ಒಂದು ಕೃತಿ ತಾನು ಚಿತ್ರಿಸುತ್ತಿರುವ ನಿರ್ದಿಷ್ಟಕಾಲದ, ನಿರ್ದಿಷ್ಟ ಸಮಾಜದ ಮೇಲು–ಮಧ್ಯಮ ಕೆಳವರ್ಗಗಳ ನಡುವಿನ ಪರಸ್ಪರ ಕ್ರಿಯೆ(Interaction)ಯನ್ನು ಸೃಷ್ಟಿಸುವುದರ ಮೂಲಕ ಐತಿಹಾಸಿಕ ಸಾಂಗತ್ಯವನ್ನು ಸಾಧಿಸಬೇಕಾಗುತ್ತದೆಯೇ ವಿನಾ ಇತಿಹಾಸದಲ್ಲಿ ಪ್ರಸಿದ್ಧವಾದ ಹೆಸರುಗಳನ್ನು ಕೇವಲ ಬಳಸುವುದರ ಮೂಲಕ ಅಥವಾ ನಡೆದ ಘಟನೆಗಳ ದಿನಾಂಕವನ್ನು ಸರಿಯಾಗಿ ಹೇಳುವುದರ ಮೂಲಕ ಅಥವಾ ಐತಿಹಾಸಿಕವಾಗಿ ನಡೆಯಿತೆನ್ನಲಾದ ಘಟನೆಯನ್ನು ಪುನರಪಿ ಹೇಳುವುದರ ಮೂಲಕ ಅಲ್ಲ" ಎಂದು ಗುರುತಿಸಬಹುದು.

ಬಹುತೇಕ ಸಂದರ್ಭಗಳಲ್ಲಿ ಇತಿಹಾಸ ಆ ಕಾಲದ ರಾಜರ, ಮತ್ತವರ ವೈಭವೀಕರಿಸಿದ ಜೀವನಗಳ ಪ್ರತಿಬಿಂಬಗಳೇ ಆಗಿರುತ್ತವೆ. ಆದರೆ ಅದು ಸೀಮಿತ ದೃಷ್ಟಿಕೋನ. ಭೂತ, ವರ್ತಮಾನ, ಭವಿಷ್ಯತ್ತನ್ನು ಬೆಸೆಯುವ ಐತಿಹಾಸಿಕ ಪ್ರಕ್ರಿಯೆ ಆ ಪರಿಮಿತಿಯನ್ನು ಮೀರುವ ಆದರ್ಶವಾಗಿದೆ. ಇತಿಹಾಸವನ್ನು ಶೋಧಕ ಕಣ್ಣುಗಳಿಂದ ನೋಡಬೇಕು. ಭೂತಕಾಲವನ್ನು ವರ್ತಮಾನದಲ್ಲಿ ಜೀವಂತವಾಗಿ ಹರಿಯುತ್ತಿರುವ ಪರಂಪರೆಗೆ ಜೋಡಿಸುವಂತಹ ಒಳನೋಟಗಳನ್ನು ಹೊಂದಿರಬೇಕು.

ಒಂದು ಕಾಲದ ಸನ್ನಿವೇಶ, ಆದರ್ಶ, ಮೌಲ್ಯ, ಪರಿಮಿತಿ, ವ್ಯವಸ್ಥೆ ಎಲ್ಲವನ್ನು ಏಕಕಾಲಕ್ಕೆ ವಿಶ್ಲೇಷಿಸುವ, ವಿವೇಚಿಸುವ ಉದ್ದೇಶವನ್ನು ಒಳಗೊಂಡಿರಬೇಕು. ಇದು ಪ್ರಾಯಶಃ ಎಲ್ಲರೂ ಒಪ್ಪಿರುವ ಐತಿಹಾಸಿಕ ಕಾದಂಬರಿಯೊಂದರ ಆದರ್ಶ ರೂಪ.

'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಇತಿಹಾಸವನ್ನು ವಿಸ್ತೃತ ದೃಷ್ಟಿಕೋನದಿಂದ ನೋಡಿದುದರ ಫಲವಾಗಿ ಮೂಡಿ ಬಂದ ಕೃತಿಯಾಗಿದೆ. ಅದಕ್ಕೆ ಐತಿಹಾಸಿಕ, ಸಾಮಾಜಿಕ ಕಾದಂಬರಿ ಎಂದು ಗುರುತಿಸಬೇಕಾದ ಹಂಗೇನೂ ಇಲ್ಲ. ಕುಟ್ಟಾಣಿಯೊಂದರ ಮೇಲಿನ ಕೆತ್ತನೆಯ ಕಲಾತ್ಮಕತೆಗೆ ಮಾರು ಹೋಗಿ ಅದರ ಜಾಡು ಹಿಡಿದು ಸಾಗುವ ಲೇಖಕ/ನಿರೂಪಕನಿಗೆ ಇತಿಹಾಸದಲ್ಲಿ ನಡೆದಿರಬಹುದಾದ ದೊಡ್ಡದೊಂದು ಜೀವನ ಸಂಘರ್ಷವೇ ತೆರೆದುಕೊಳ್ಳುತ್ತದೆ. ಆ ಜೀವನ ಸಂಘರ್ಷದ ಕೇಂದ್ರದಲ್ಲಿ ಸಾಕಮ್ಮ ಮತ್ತು ಚಿನ್ನಪ್ಪರ ಬದುಕು ಇದೆ. ಇಲ್ಲಿನ ಜೀವನ ಸಂಘರ್ಷದಲ್ಲಿ ಸಾಮಾನ್ಯರ ಜೀವನ ತಮಗರಿವಿಲ್ಲದಂತೆಯೇ ಅಸಾಮಾನ್ಯ ಜೀವಂತಿಕೆಯ ಕಡೆಗೆ ಹರಿಯುವ,

ಅಸಾಮಾನ್ಯರೆನ್ನಿಸಿಕೊಂಡು ಸಾಮಾನ್ಯರ ಭಯ. ಭಕ್ತಿಗಳಿಗೆ. ಸೇವೆಗಳಿವೆ ಒಳಗಾದವರ ಬದುಕು ಪ್ರಜ್ಞಾಪೂರ್ವಕವಾಗಿಯೇ ಪತನದ ಕಡೆಗೆ ಹರಿಯುವ

ಪ್ರಕ್ರಿಯೆಯನ್ನು ಕಾಣಬಹುದು. ಮೇಲುನೋಟಕ್ಕೆ, ಕಾದಂಬರಿ ಸಾಕಮ್ಮ, ಚೆನ್ನಪ್ಪರ ಮುಗ್ಧ ಪ್ರೇಮ, ಜೀವನದ ಸಂಘರ್ಷದ ಕುಲುಮೆಯಲ್ಲಿ ಬೆಂದು ಸೋಲದೆ ಪಕ್ವಗೊಂಡು ಸಾಫಲ್ಯ ಪಡೆದುದರ ಒಂದು ಚಿತ್ರಣವನ್ನು ಕೊಡುತ್ತಿರುವ ಅನುಭವ ಮೂಡಿಸಿದರೂ ಕಾದಂಬರಿಯನ್ನು ಒಳಹೊಕ್ಕು ಆಳವಾಗಿ ನೋಡಿದಾಗ ಅದು ಬೇರೆಯದೇ ಅನುಭವವನ್ನು ಮೂಡಿಸುತ್ತದೆ.

ಕಾದಂಬರಿ "ಬೇರೆಯೆ ಸೀಮೆಯೆ ವಿಷಯ ಗೊತ್ತಿಲ್ಲ!' ಎಂಬ ಒಂದು ಪುಟ್ಟವಾಕ್ಯದಿಂದ ಆರಂಭಗೊಳ್ಳುವುದು, ಅದು ತಾನು ಚಿತ್ರಿಸುತ್ತಿರುವ ಲೋಕದ ಸತ್ಯ, ಪ್ರಾಮಾಣಿಕತೆಗಳ ಬಗೆಗೆ ಅಪರೋಕ್ಷವಾಗಿ ಪ್ರಮಾಣವನ್ನು ಮಾಡುವಂತಹ ಒಂದು ವಾಕ್ಯವೇ ಆಗಿದ್ದು ತನ್ನ ಹಿಂದೆ ಅರ್ಥ ಪರಂಪರೆಯನ್ನೇ ಒಳಗೊಂಡಿರುವ ಭಾವನೆಯನ್ನು ಹುಟ್ಟು ಹಾಕುತ್ತದೆ. ಕಾದಂಬರಿಯ ಮೊದಲ ಅಧ್ಯಾಯ ಅರಮನೆ ಸಾಕಜ್ಜಿ, ದೊಡ್ಡಮನೆ ಸಾಕಜ್ಜಿ, ಪಟ್ಟಣದ ಸಾಕಜ್ಜಿ, ಸಾಹುಕಾರ ಸಾಕಜ್ಜಿ ಎಂಬಿತ್ಯಾದಿ ನಾನಾ ರೀತಿಯಲ್ಲಿ ಮೂಡಲ ಸೀಮೆಯ ಜನ ಗುರುತಿಸುತ್ತಿರುವ ಸಾಕಜ್ಜಿಯ ದೊಡ್ಡಮನೆ, ಅದರೊಳಗಿನ ಐಷಾರಾಮದ ವಸ್ತುಗಳು, ಗಂಡ, ಮಕ್ಕಳು, ಸೊಸೆಯರು, ಮೊಮ್ಮಕ್ಕಳು-ಇವೆಲ್ಲದರೊಂದಿಗೆ ಸಮೃದ್ಧ ಮತ್ತು ಅರ್ಥಪೂರ್ಣ ಜೀವನ ಸಾಗಿಸುತ್ತಾ ಬದುಕಿರುವ ಸಾಕಜ್ಜಿಯ ಚಿತ್ರಣವನ್ನು ಕೊಡುತ್ತದೆ. ಅವಳ ವ್ಯಕ್ತಿತ್ವದ ಮತ್ತೊಂದು ಮುಖ್ಯ ಅಂಶವೂ ಇಲ್ಲಿಯೇ ಗುರುತಾಗುತ್ತದೆ. ಅದು ಅವಳಿಗಿರುವ ಕತೆ ಹೇಳುವ ಕಲೆಯದು. "ಆದರೆ ಆಕೆ ಹೇಳುತ್ತಿದ್ದ ಕತೆ ಚರಿತ್ರೆಯ ಯಾವ ಪುಟ್ಟದಲ್ಲಿಯೂ ಸಿಕ್ಕುತ್ತಿರಲಿಲ್ಲ" ಎಂಬ ಮಾತು ಅಲ್ಲಿ ಬರುತ್ತದೆ. ಆ ಮಾತು ಮುಂದೆ ಅವಳು ಚರಿತೆಯೊಂದರ ಟಿಪ್ಪಣಿಯಾಗುವ ಹಿನ್ನಲೆಯಲ್ಲಿ ಹೆಚ್ಚು ಸಾಂಕೇತಿಕತೆಯ ಒಳಗೊಳ್ಳುತ್ತದೆ.

ಸಾಕಮ್ಮನನ್ನು ಕೇಂದ್ರವಾಗಿಟ್ಟುಕೊಂಡೇ ಕಾದಂಬರಿಯಲ್ಲಿ ಮೂರು ಮುಖ್ಯ ಎಳೆಗಳು ಸಂಚಲಿಸುತ್ತವೆ. ಮೊದಲನೆಯ ಎಳೆ ಛಲದಂಕಪುರದ ಗ್ರಾಮೀಣ ನಿಸರ್ಗಲೋಕದಲ್ಲಿ ತೆರೆದುಕೊಳ್ಳುತ್ತದೆ. ಆ ಲೋಕ ಅತ್ಯಂತ ಮುಗ್ಧವಾದದ್ದು, ಆದರ್ಶವಾದದ್ದು, ಸಹಜವಾದದ್ದು,

ಸರಳವಾದದ್ದು. ಅವೆಲ್ಲದರ ಮೂರ್ತರೂಪಾಗಿ ದಾನಪ್ಪಗೌಡರು, ಸಾಕಮ್ಮ, ಚಿನಪ್ಪ, ಅಯ್ಯನವರು. ಮಠ–ಈ ಎಲ್ಲವೂ ಮೂಡಿಬರುತ್ತದೆ.

ದಾನಪ್ಪಗೌಡರಿಗೆ ಹೆಂಡತಿಯಿಲ್ಲ ಎಂಬ ದುಃಖವಿಲ್ಲ. ಸಾಕಮ್ಮನಿಗೆ ಅವ್ವನಿಲ್ಲ ಎಂಬ ದುಃಖವಿಲ್ಲ. ಚಿನ್ನಪ್ಪನಿಗೆ ತಾನು ಅವ್ವ ಅಪ್ಪನ ಬಳಿಯಿಲ್ಲ ಎಂಬ ದುಃಖವಿಲ್ಲ. ನಿಸರ್ಗ ಕೊಡುತ್ತಿರುವ ಎಲ್ಲ ಸುಖವನ್ನೂ ಸಣ್ಣ ಸಣ್ಣ ವಸ್ತುಗಳಿಂದಲೂ ಪಡೆದುಕೊಳ್ಳುವ ಆ ಲೋಕದಲ್ಲಿ ಮುಂದೆ ಉಂಟಾಗಬಹುದಾದ ಆಘಾತ, ಆತಂಕಗಳ ಅರಿವೂ ಇಲ್ಲ. ಸಾಕಮ್ಮ ಚಿನ್ನಪ್ಪರ ಮುಗ್ಧ ಸೌಂದರ್ಯ, ಬುದ್ಧಿವಂತಿಕೆ, ರಂಗೋಲಿ, ಓದು, ಚಟ, ಹಾಲು ಕರೆಯೋದು, ಪೂಜೆ ಮಾಡೋದು, ಹೂ ಕುಯ್ಯೋದು, ಸಣ್ಣ ಪುಟ್ಟ ಆಸೆಗಳ ಈಡೇರಿಕೆಯಲ್ಲಿಯೇ ಸಮೃದ್ಧ ಸುಖ ಕಾಣುವುದು, ಜೀವನವನ್ನು ಒಗಟ್ಟು, ಗಾದೆ ಮಾತುಗಳ ಮೂಲಕವೇ ಅರ್ಥೈಸುತ್ತಾ ಅರಿಯುವುದು. ಒಟ್ಟಾರೆ ಒಂದು ಸುಂದರ ಸಹಜ ಸರಳ ಲೋಕವದು.

ಆ ಲೋಕದ ಮೇಲೆ ಒಂದು ದೊಡ್ಡ ವಿಪತ್ತನ್ನು ತೋರುವ ಮೂಲಕವೇ ಎರಡನೆಯ ಎಳೆ ಕಾದಂಬರಿಯಲ್ಲಿ ಪ್ರವೇಶಿಸುತ್ತದೆ. ಸಾಕಮ್ಮ ಚಿನ್ನಪ್ಪರಲ್ಲಿ ಅದೇ ತಾನೇ ಮೂಡುತ್ತಿರುವ ಪರಸ್ಪರ ಆಕರ್ಷಣೆ ದಾನಪ್ಪಗೌಡರಲ್ಲಿ ಮಗಳ ಮದುವೆಯ ಆಸೆಯನ್ನು ಮೂಡಿಸುತ್ತದೆ. ಅವರು ಸಂಪೂರ್ಣವಾಗಿ ನಂಬಿದ್ದ ಮಠದ ಅಯ್ಯನವರು 'ಕರಿಮಣಿ ಕೂಟ' ವೇ ಹೊಂದುವುದಿಲ್ಲವೆಂದು ಹೇಳುವುದೂ ಆ ಆಸೆಯನ್ನು ಅಲ್ಲಿಯೇ ಕಮರಿಸಿ ಬಿಡುತ್ತದೆ. ಒಂದಷ್ಟು ದಿನ ಕಳೆಯುವುದರಲ್ಲಿ ಸಾಕಮ್ಮನ ಅಪೂರ್ವ ಸೌಂದರ್ಯಕ್ಕೆ ಪ್ರತಿಫಲದಂತೆ ಅರಮನೆಯ ಕಡೆಯ ಸಂಬಂಧವೊಂದು ಹುಡುಕಿ ಬಂದಾಗಲಂತೂ ದಾನಪ್ಪಗೌಡರ ವ್ಯಕ್ತಿತ್ವವೇ ಬದಲಾಗುತ್ತದೆ. ಸರಳತೆಯ ಎಡೆಯಲ್ಲಿ ಪ್ರತಿಷ್ಠೆ ಬಂದು ಕೂರುತ್ತದೆ.

ಅರಮನೆಯ ಕಡೆಯ ಜನ ಸಾಕಮ್ಮನನ್ನು ನೋಡಲು ಬರುವುದರೊಂದಿಗೆ ಛಲದಂಕಪುರದ ಇಡೀ ವಾತಾವರಣ ಬದಲಾಗಿ ಬಿಡುತ್ತದೆ. ಮುಗ್ಧ ಲೋಕದ ಮೇಲೆ ದಾಳಿ ಮಾಡುವ ಅರಮನೆಯ ಪ್ರತಿಷ್ಠಿತ ಲೋಕ ಅತ್ಯಂತ ಭಿನ್ನವಾದುದು. ಈ ತನಕ ಕಾದಂಬರಿ ಚಿತ್ರಿಸುವ ಪ್ರೀತಿ, ವ್ಯಾತ್ಸಲ್ಯ, ವಿಶ್ವಾಸ, ನೀತಿ, ನ್ಯಾಯ, ಸರಳ, ಸಹಜತೆಗಳಿಗೆ ವಿರುದ್ಧವಾದ ಲೋಕವದು. ರಾಜತ್ಯ, ಅರಮನೆ, ಅನೀತಿ, ಕ್ರೌರ್ಯ, ಕುಟಿಲತೆ– ಇತ್ಯಾದಿ

ನೇತ್ಯಾತ್ಮಕ ಗುಣಗಳಿಂದಲೇ ತುಂಬಿ ಹೋದ ಕೃತಕ, ಮೋಹಕ ಜಗತ್ತದು. ಅದರ ಕೇಂದ್ರವಾಗಿ, ಆ ಎಲ್ಲಾ ಗುಣಗಳ ಮೂರ್ತ ರೂಪಾಗಿ ಪುಟ್ಟತಾಯಮ್ಮ ಬರುತ್ತಾಳೆ.

ಸಾಕಮ್ಮ, ಅರಮನೆಯೊಂದಿಗಿನ ಸಂಬಂಧ ಹೊಂದಿದವರ ಸಂಬಂಧ ಹೊಂದುವುದರ ಮೂಲಕ ಛಲದಂಕಪುರದಲ್ಲಿ ಒಂದು ಹೊಸ ಅಧ್ಯಾಯವೇ ತೆರೆದುಕೊಳ್ಳುತ್ತದೆ. ಅರಮನೆಯ ಜಗತ್ತನ್ನು ದೂರದಿಂದಲೂ ಕಂಡಿರದ ಸಾಕಮ್ಮನನ್ನು ಒಳಗೊಂಡ ಜಗತ್ತು, ತಮ್ಮ ಕಣ್ಣೆದುರೇ ಅದು ಪುಟ್ಟತಾಯಮ್ಮ ಮತ್ತು ವೀರಪ್ಪನ ಮೂಲಕ ತೆರೆದುಕೊಂಡಾಗ ಆ ಮುಗ್ಧಲೋಕ ಸಂಪೂರ್ಣವಾಗಿ ಅದಕ್ಕೆ ಶರಣಾಗಿ ಬಿಡುತ್ತದೆ. ಅಲ್ಲಿ ಸಾಕಮ್ಮ ಚಿನ್ನಪ್ಪನ ಪ್ರೀತಿ ಗೌಣವಾಗಿ ಮರೆಯಾಗಿ ಬಿಡುತ್ತದೆ. ಪ್ರೀತಿ, ವಿಶ್ವಾಸಗಳ ಸ್ಥಳವನ್ನು ಪ್ರತಿಷ್ಠೆ ಆವರಿಸಿಕೊಳ್ಳುತ್ತದೆ. ಈ ಬದಲಾವಣೆಗಳೆಲ್ಲಾ ದಾನಪ್ಪಗೌಡರಲ್ಲಿಯೇ ಮೊದಲು ಕಾಣಿಸಿಕೊಂಡು ಬಿಡುವುದು ಮುಂದಿನ ಎಲ್ಲ ದುರಂತಗಳು ಜವಾಬ್ದಾರಿಯನ್ನು ಹೊರಲೇಬೇಕಾದ ಸ್ಥಾನದಲ್ಲಿ ಅವರನ್ನು ಇರಿಸಿ ಬಿಡುತ್ತದೆ. ಜ್ಯೋತಿಷ್ಯದ ಹಿನ್ನಲೆಯಲ್ಲಿ, ತಾವು ನುಡಿದದ್ದು ಸುಳ್ಳಾಗಿ ಸಾಕಮ್ಮ ವೀರಪ್ಪನನ್ನು ಕಳೆದುಕೊಂಡು ವಿಧವೆಯಾದಾಗ ಅಯ್ಯನವರು ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಪ್ರಾಯಶಃ ಆ ಜವಾಬ್ದಾರಿಯ ಪಾತ್ರವೂ, ಅವರ ಅನಿರೀಕ್ಷಿತ ಮರಣದಲ್ಲಿ ಇದ್ದಿರ ಬಹುದಾದ ಸಾಧ್ಯತೆಯನ್ನು ಅಲ್ಲಿಗಳೆಯಲಾಗುವುದಿಲ್ಲ.

ಚಿನ್ನಪ್ಪನನ್ನು ನೆನೆಯುತ್ತಾ ಅಳುತ್ತಲೇ ತಾಳಿಗೆ ಕೊರಳೊಡ್ಡಿ ಹೊಸ ಸಂಬಂಧವನ್ನು ಒಪ್ಪಿಕೊಳ್ಳುವಲ್ಲಿ ಅರಮನೆಯ ಸೆಳೆತ ಮತ್ತು ವೀರಪ್ಪನ ರೂಪು ಸಾಕಮ್ಮನನ್ನೂ ಕಾಡಿದ್ದನ್ನು ಮರೆಯಲಾಗುವುದಿಲ್ಲ.

ರಾಜತ್ವ ಮತ್ತೆ ಅರಮನೆಯ ವಿಷಯವಾಗಿ ಛಲದಂಕಪುರದ ಗ್ರಾಮೀಣ ಮುಗ್ಧಲೋಕ ತೋರುವ ಅಪಾರ ಭಯ, ಭಕ್ತಿ, ಗೌರವ ಅನನ್ಯವಾದದ್ದು. ಕಾದಂಬರಿ ಆ ವಿಷಯವನ್ನು ಪವಾಡ ಸದೃಶ ಜನಪದ ಪರಸಂಗದಂತೆಯೇ ಅತ್ಯಂತ ವಿಶಿಷ್ಟವಾಗಿ ಚಿತ್ರಿಸುತ್ತಿದೆ. ಆ ಚಿತ್ರಣದಲ್ಲಿ ಅಪೂರ್ವ ತಲ್ಲೀನತೆಯೂ ಇದೆ. ಅರಮನೆಯವರು, ಮಹಾರಾಜರು, ಮಹಾರಾಣಿಯವರು ಬರುತ್ತಾರೆಂದು ಊರಿನ ಸಕಲರೂ ಸಕಲವೂ ಸಿದ್ಧಗೊಳ್ಳುತ್ತಾರೆ, ಸಿದ್ಧಗೊಳ್ಳುತ್ತದೆ. ವರ್ಗ, ವರ್ಣ, ಮೇಲು, ಕೀಲೂ ಎಂಬ ಅಂತರವಿಲ್ಲದೆ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ರಾಜನ ಆಗಮನವನ್ನು ನಿರೀಕ್ಷಿಸಿ

ತಯಾರಾಗುತ್ತಾರೆ. ಅಂದಿನಿಂದಲೇ ಸಾಕಮ್ಮ, ದಾನಪ್ಪಗೌಡರು, ವೀರಪ್ಪ ಎಲ್ಲರೂ ಬದುಕಿರುವಾಗಲೇ ಮೂಡಲ ಸೀಮೆಯ ತುಂಬಾ ಹರಡಿಕೊಂಡಿದ್ದ ಗಾದೆಗಳಲ್ಲಿ, ನುಡಿಗಟ್ಟುಗಳಲ್ಲಿ ಸಾಂದರ್ಭಿಕ ಉದಾಹರಣೆಗಳಲ್ಲಿ ಸೇರಿ ಹೋಗುತ್ತಾರೆ.[೪] ಈ ಕಾದಂಬರಿಯಲ್ಲಿ 'ರಾಜದೃಷ್ಟಿ' ಅಥವಾ ರಾಜ ಮನೆತನದ ಪ್ರಸ್ತಾಪವು ಬರುತ್ತದೆ.

ದಾನಪ್ಪಗೌಡರ ಮಗಳ ಮದುವೆಗೆ ಮಹಾರಾಜರೂ, ಮಹಾರಾಣಿಯವರೂ ಬರುತ್ತಾರೆ ಎಂಬ ಸುದ್ದಿ ಹೇಗೋ ಏನೊ ಆ ಒಂದು ಹರಿದಾರಿ ಫಾಸಲೆಯಲ್ಲೆಲ್ಲಾ ಹಬ್ಬಿ ಬಿಟ್ಟಿತ್ತು.

ಮಹಾರಾಜರು, ಮಹಾರಾಣಿಯವರೂ ಬರುತ್ತಾರೆ ಎಂದ ಮೇಲೆ ಕೇಳಬೇಕೆ!

ಅವರು ಯಾವ ಹಾದಿಯಲ್ಲಿ ಛಲದಂಕಪುರಕ್ಕೆ ಬರಬಹುದು ಎಂದು ಜನ ತಮ್ಮ ತಮ್ಮಲೇ ಚರ್ಚಿಸಿದರು. ಏನು ಚರ್ಚಿಸಿದರೂ ಅವರಿಗೆ ಯಾವ ಹಾದಿಯೂ ಹೊಳೆಯಲ್ಲಿಲ್ಲ ಊರ ಹಿರಿಯರು ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ಮಹಾರಾಜರು ಬರೋ ಹಾದಿ ನಿಗಧಿ ಮಾಡಾಕ ನಾವ್ಯಾರು? ಅವರು ಮಹಾರಾಜರು! ಯಾವ ಹಾದಿಯಲ್ಲಿ ಬೇಕಾದರೂ ಬರಬಹುದು!!

ಜನ "ಹೌದು ಹೌದು" ಎಂದು ಗೋಣು ಹಾಕಿದರು.

ಸರಿ, ಶುರುವಾಯಿತು;

ಸುತ್ತ ಮುತ್ತಣ ಊರುಗಳಿಂದ ಛಲದಂಕಪುರಕ್ಕೆ ಸೇರುವ ಎಲ್ಲಾ ಮಾರ್ಗಗಳು ಮಟ್ಟಸವಾಗಲು ತೊಡಗಿದುವು. ರಾಜರ ಕಣ್ಣಿಗೆ ತಮ್ಮ ಕೊಳಕು ಮನೆಗಳು ಬೀಳ ಭಾರದೆಂದು ಅವರದು ಇವರದು ಎಂದು ಲೆಕ್ಕ ಹಾಕದೆ ಎಲ್ಲರೂ, ಎಲ್ಲರ ಮನೆಗಳಿಗೂ ಸುಣ್ಣ ಬಣ್ಣ ಬಳಿದರು. ಊರ ಸುತ್ತಿನ ನೂರಾರು ಮಾವು, ಹೊಂಗೆ ಮರಗಳು ತಮ್ಮ ಹಸಿರನ್ನು ಕಳೆದು ಕೊಂಡರೂ, ಊರ ಬೀದಿಗಳಿಗೆ ತೋರಣವಾಗಿ ಲಕಲಕ ಹೊಳೆದುವು. ಕಾಡಿನ ಹಸಿರು ಊರನ್ನೆಲ್ಲಾ ಮುಚ್ಚಿಕೊಂಡಿತು.

ಛಲದಂಕಪುರದ ಜನರಿಗಂತೂ ಸಾಕಮ್ಮನ ಮದುವೆಗಿಂತ ಹೆಚ್ಚಾಗಿ ಮಹಾರಾಜರನ್ನು ಸ್ವಾಗತಿಸುವ ಸಮಸ್ಯೆಯೇ ದೊಡ್ಡದಾಯಿತು.

---

೪. ಮಹಾಮನೆ, ಅಭಿನಂದನಾ ಗ್ರಂಥ, ಡಾ॥ ಎಂ. ಎಸ್. ವೇದಾ, ಪುಟ ೫–೭.

"ಯಾವುದೊ ಜನ್ಮದ ಪುಣ್ಯ! ದೇವರು ನಮ್ಮ ಊರಿಗೆ ಬರುತ್ತಿದ್ದಾರೆ ಇನ್ನು ಮೇಲಾದರು ಮಳೆ ಬೆಳೆ ಸಲೀಸಾಗಿ ಆಗಬಹುದು" ಎಂದು ಅಂದುಕೊಂಡು ಒಣಗಿದ ಭೂಮಿಯ ಮೇಲೆಲ್ಲಾ ಬೇಕು ಬೇಕಾದ ಬೆಳೆಗಳನ್ನು ಕಲ್ಪಿಸಿಕೊಂಡು ಉರಿಯುವ ಆಕಾಶವನ್ನೂ, ಒಣಗಿದ ಭೂಮಿಯನ್ನು ಮತ್ತೆ ಮತ್ತೆ ನೋಡುತ್ತಾ ನಾಳಿನ ಸುಖವನ್ನು ಇಂದೆ ತುಂಬಿಕೊಂಡು ಹುಮ್ಮಸ್ಸು ಪಡೆಯುತ್ತಿದ್ದರೂ ಊರ ಜನ.

"ಒಂದು ಊರಿಗೆ ಮಹಾರಾಜರು ಬರೋದು ಅಂದರೆ ಸುಮ್ಮನಾಗಲಿಲ್ಲ. ಅವರ ದೃಷ್ಟಿ ತಡಕೊಳ್ಳುಬೇಕಾದರೂ ಊರಿನ ಜನರ ಮಾತಿರಲಿ, ದೇವರುಗಳಿಗೂ ಶಕ್ತಿ ಬೇಕು. ಅವರು ದೃಷ್ಟಿ ಅಂದರೆ ಏನು ಸಾಮಾನ್ಯವಲ್ಲ! ಊರು ಉರಿದು ಹೊಗುತ್ತೆ ಗೊತ್ತಾ. ಊರೊಳಗೆ ಪಂಚ ಕಲಶದ ಗೋಪುರದ ದೇವಸ್ಥಾನವಿರಬೇಕು, ಅಂಕದ ಬಾಗಿಲಿಗೆ ವಿಶೇಷ ಪೂಜೆಯಾಗಬೇಕು. ಅದ್ಯಾವುದೋ ಊರಲ್ಲಿ ಹೀಗೆಯೆ ಮಹಾರಾಜರು ಬರಿಗಣ್ಣಲ್ಲಿ ಬಬ್ಬಳು ಗರ್ಭಿಣಿ ಹೆಂಗಸನ್ನು ದೃಷ್ಟಿಸಿಕೊಂಡು ನೋಡಿದರಂತೆ. ಆಕೆಗೆ ನಿಂತ ಕಡೆಯೇ ಮೈ ಇಳಿದು ಹೋಯ್ತಂತೆ. ಆದ್ದರಿಂದ ಸುಮ್ಮ ಸುಮ್ಮನೆ ಹುಡುಗಾಟ ಆಡಿ ಊರನ್ನು ಹಾಳೂ ಮಾಡಿಕೊ ಬ್ಯಾಡಿ".

ಊರಿನ ಶ್ಯಾನುಭೋಗರ ಈ ಹೊಸ ಮಾತುಗಳು ಊರಿನವರ ಮನಸ್ಸಿನಲ್ಲಿ ಸಹಜವಾಗಿಯೆ ಹೊಸಾ ಭಯವನ್ನು ಬಿತ್ತಿ ಬಿಟ್ಟವು.

[ಕೃತಿ : ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ] ಮ. ಗು. ಪುಟ ಸಂಖ್ಯೆ : ೬೧. ೬೨.

ಈ ಪ್ರಸ್ತಾಪ ಸಾಕಮ್ಮನ ಬದುಕಿನಲ್ಲಿ ಮತ್ತು ಆ ಮೂಲಕ ಆ ಊರಿನ ಬದುಕಿನಲ್ಲಿ ಸಂಭವಿಸಲಿರುವ ದುರಂತಗಳ ಸರ ಮಾಲೆಯನ್ನು ಮೊದಲೇ ಕಂಡು ಬರುತ್ತದೆ. ಮಠದ ಸ್ವಾಮಿಗಳ ಮರಣ, ದಾನಪ್ಪ ಗೌಡರ ಮರಣ, ಹಾಗೂ ಮಠದ ಕಟ್ಟಡ ಕುಸಿದು ಬೀಳುವುದು ಇವುಗಳನ್ನೆಲ್ಲಾ ಈ ಹಿನ್ನಲೆಯಲ್ಲಿ ಗ್ರಹಿಸಬೇಕಾಗುತ್ತದೆ.

ಸಾಕಮ್ಮನ ಲೋಕ ಪ್ರೇಮದಲ್ಲಿ ಸಾಕಾರಗೊಂಡಿದ್ದರೆ ಅದಕ್ಕೆ ವಿರುದ್ಧವಾಗಿ ಅರಮನೆಯ ಜಗತ್ತು ಕಾಮದಲ್ಲಿ ರೂಪು ಪಡೆದುಕೊಳ್ಳುತ್ತದೆ. ಕಾಮದ ಕ್ರೌರ್ಯ ಮತ್ತು ಕುಟಿಲರೂಪದ ಕೇಂದ್ರ ಬಿಂದು ಇಲ್ಲಿ ಪುಟ್ಟತಾಯಮ್ಮನ್ನೇ ಆಗಿದ್ದಾಳೆ. ಸಾಕಮ್ಮನ ರೂಪವನ್ನೇ ಮಾನದಂಡವಾಗಿಸಿಕೊಂಡು ಕಾದಂಬರಿಯಲ್ಲಿ ಅರಮನೆಯವರೊಂದಿಗಿನ

ಸಂಬಂಧ ಸಾಧ್ಯವಾಗಿಸುವ ಹಿನ್ನಲೆಯಲ್ಲಿ, ಸಾಕಮ್ಮನ ರೂಪು ಕುರಿತಾದ ಪುಟ್ಟತಾಯಮ್ಮನ ಮೆಚ್ಚುಗೆಯಲ್ಲಿ ಪುಟ್ಟತಾಯಮ್ಮನ ದುರುದ್ದೇಶ ಕಾರ್ಯ ನಿರ್ವಹಿಸಿರುವುದನ್ನು ಗಮನಿಸಬೇಕು. ಒಂದು ಕಡೆ ಕಿರಿಯ ವಯಸ್ಸಿನಲ್ಲಿಯೇ ಹೆಂಡತಿ ಸತ್ತಿದ್ದರೂ ಮರುಮದುವೆಯಾಗದೆ ಬೇರೊಂದು ಹೆಣ್ಣನ್ನು ನೆನೆಸದೆ ಬದುಕುತ್ತಿರುವ ದಾನಪ್ಪಗೌಡರಿದ್ದರೆ ಇನ್ನೊಂದು ಕಡೆ ತನ್ನ ಸಂಪತ್ತಿನ ದಾಹಕ್ಕಾಗಿ ಗಂಡನಿದ್ದು ವಿವಾಹದ ಆಚೆಗೆ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವ ಪುಟ್ಟತಾಯಮ್ಮ ಇದ್ದಾಳೆ. ಅವಳ ದಾಹವನ್ನು ಗಂಡನ ಆತ್ಮಹತ್ಯೆಯ ಸಾವೂ ಸಹ ಹಿಂಗಿಸುವುದಿಲ್ಲ. ಅವಳ ದಾಹ ಅರಮನೆಯವರಿಗೆ ತನ್ನ ಸೊಸೆಯನ್ನು ಒಪ್ಪಿಸುವಷ್ಟು ತೀವ್ರವಾದುದಾಗಿದೆ. ಋತುಮತಿಯಾದ ಸೊಸೆಯನ್ನು ಪರರ ಹಾಸಿಗೆಗೆ ಕಳುಹಿಸಿ ಬಿಡುವ ಕ್ರೌರ್ಯತೆ ಅವಳದು. ಸಾಕಮ್ಮನ ಬದುಕಿನ ದುರಂತದ ನಿರ್ಣಾಯಕ ಸಂದರ್ಭಗಳಲ್ಲಿ ಪುಟ್ಟತಾಯಮ್ಮನ ಪಾತ್ರ ಹಿರಿದಾಗಿಯೇ ಕಾರ್ಯ ನಿರ್ವಹಿಸುತ್ತದೆ.

ಪುಟ್ಟತಾಯಮ್ಮನ ಗಂಡನ ಆತ್ಮಹತ್ಯೆ ಮತ್ತು ಮಗನ ದುರ್ಮರಣಗಳೊಂದಿಗೆ ಮಹಾರಾಜರು ಬೇಟೆಗಾಗಿ ಕಾಡಿಗೆ ಹೋಗುವುದು, ಕಾಡಿನಲ್ಲಿಯೇ ಅವರಿಬ್ಬರ ಮರಣ ಸಂಭವಿಸುವುದು ಕೇವಲ ಕಾಕತಾಳೀಯವಾಗುವುದಿಲ್ಲ. ಧ್ವನಿ ಪೂರ್ಣ ಸಾಂಕೇತಿಕತೆಯನ್ನು ಇಡಿಯಾಗಿ ಒಳಗೊಂಡಿದ್ದಾಗುತ್ತದೆ. ವ್ಯವಸ್ಥೆಯ ಬೇಟೆಯಲ್ಲಿ ಒಂದು ಕಡೆ ಸಾಕಮ್ಮ ಬಲಿಪಶುವಾದರೆ ಬೇಟೆಯ ವ್ಯವಸ್ಥೆಯನ್ನು ಬದಲಾಯಿಸಲು ಹೋಗುವ ವೀರಪ್ಪನ ಮಾನವೀಯತೆ ಹುಲಿಯ ಬಾಯಿಗೆ ಅವನನ್ನೇ ಬಲಿಯಾಗಿಸುತ್ತದೆ. ಈ ಸಂದರ್ಭ ಕಾದಂಬರಿಯ ಸಶಕ್ತ ಭಾಗವಾಗಿದೆ.

ಹೆಂಡತಿ ಋತಿಮತಿಯಾದ ಕೆಲವೇ ದಿನಗಳಲ್ಲಿ ವೀರಪ್ಪ ಬೇಟೆಗಾಗಿ ಮಹಾರಾಜರ ಜೊತೆ ಕಾಡಿಗೆ ಹೋಗಬೇಕಾಗುತ್ತದೆ. ಜ್ಯೋತಿಷ್ಯದ ಕಾರಣವಾಗಿ ಶೋಭನಶಾಸ್ತ್ರವು ಇನ್ನೂ ಆಗಿಲ್ಲ. ವೀರಪ್ಪ ಕಾಡಿಗೆ ಹೊರಡುವ ಮುನ್ನ ಬೇಟೆಯಲ್ಲಿ ಪ್ರಾಣ ಕಳೆದುಕೊಳ್ಳುವ ಪ್ರಾಣಿಗಳ ಬಗೆಗೆ ಸಾಕಮ್ಮ ದುಃಖ ವ್ಯಕ್ತ ಮಾಡುತ್ತಾಳೆ.

ಆ ರಾತ್ರಿಯಲ್ಲಾ ಆಕೆ ಕಣ್ಣು ಮುಚ್ಚದೆ ಹಾಸಿಗೆಯಲ್ಲಿ ಹೊರಳಾಡಿದಳು ಆಗಾಗ ಅವಳ ಕಣ್ಣುಗಳನ್ನು ಮಂಪರು ಮೂವರು ನಿದ್ದೆ ಕವಿಯುತ್ತಿದ್ದರೂ. ಆ ಕ್ಷಣದಲ್ಲಿ ಮನೆಯಲ್ಲಿದ್ದ

ಹುಲಿ, ಚಿರತೆಯ ಚರ್ಮದ ಬೊಂಬೆಗಳು ಜೀವಂತವಾಗಿ ಬಂದು ಘರ್ಜಿಸಿ ಮೈ ಮೇಲೆ ಬಿದ್ದಂತೆ ಭಾಸವಾಗಿ ಘಕ್ಕನೆ ಕಣ್ಣು ತೆರೆಸಿ ಬಿಡುವುವು.

ಮಾರನೆಯ ದಿನ ಬೆಳಿಗ್ಗೆ ವೀರಪ್ಪ ಶಿಕಾರಿಗೆ ಹೊರಟು ನಿಂತನು. ಹೊರಡುವಾಗ ತಂದೆಯ ಭಾವ ಚಿತ್ರಕ್ಕೆ ನಮಸ್ಕರಿಸಿದನು. ತಾಯಿಯ ಪಾದಗಳನ್ನು ಮುಟ್ಟಿದನು. ಶಿಕಾರಿಗೆ ಹೋಗುವಾಗಲೆಲ್ಲಾ ಆತನು ಹಾಗೆ ಮಾಡುತ್ತಿದ್ದನು. ಸಾಕಮ್ಮ ಎಲ್ಲವನ್ನೂ ಮೂಕ ಪ್ರೇಕ್ಷಕಳಾಗಿ ನೋಡುತ್ತಾ ನಿಂತಿದ್ದಳು.

ಹೆಂಡತಿಯ ಹತ್ತಿರಕ್ಕೆ ಬಂದು ವೀರಪ್ಪ "ನಾನು ಹೋಗಿ ಬರ್ತೇನೆ" ಎಂದನು ಕ್ಷೀಣವಾಗಿ.

ಸಾಕಮ್ಮನಿಗೆ ದುಃಖದ ಕಟ್ಟೆ ಒಡೆಯಿತು. ತನ್ನ ಪರಿಸರವನ್ನೆ ಮರೆತು ಮಕ್ಕಳಂತೆ ಅಳುವುದಕ್ಕೆ ಪ್ರಾರಂಭಿಸಿದಳು.

"ಏನೇ ಮಹಾರಾಯ್ತಿ ನಿನ್ನದು ಅಪಶಕುನ. ಅವನೇನು ಯುದ್ಧಕ್ಕೆ ಹೋಗ್ತಾನೇನು? ಎಲ್ಲರನ್ನೂ ಬಿಟ್ಟು ನಿನ್ನ ಗಂಡನೊಬ್ಬನನ್ನೆ ಹುಲಿ ಚಿರತೆ ಬಂದು ತಿಂದು ಬಿಡ್ತಾವೆ. ಇಲ್ಲಾ, ಪ್ರಪಂಚದಲ್ಲಿ ನಿನ್ನ ಗಂಡ ಒಬ್ಬನೆ ಏನು ಬೇಟೆಗೆ ಹೋಗೋನು? ನಿಮ್ಮ ಮಾವನವರು ಬೇಟೆಗೆ ಅಂತ ಹೋದರೆ ವಾರಗಟ್ಟಲೆ ಬರ್ತಿರಲ್ಲಿಲ್ಲ, ಆಗ ನಾನು ಒಂದು ದಿನ ನಿನ್ನ ಹಾಗೆ ಕಣ್ಣೀರು ಹಾಕ್ಲಿಲ್ಲ. ನಗು ನಗುತಾ ಕಳಿಸು" ಎಂದು ಪುಟ್ಟತಾಯಮ್ಮ ಗದರಿಕೊಂಡಳು.

ಸಾಕಮ್ಮನಿಗೂ ಮನಸ್ಸಿನಲ್ಲಿ ತನ್ನ ಗಂಡನನ್ನು ನಗುತಾ ನಗುತಾ ಕಳಿಸಿ ಕೊಡಬೇಕು ಅಂತ ಅನ್ನಿಸಿದರೂ ಅದು ಮಾತ್ರ ಸಾಧ್ಯವಾಗಲೇ ಇಲ್ಲ!

ಪುಟ್ಟತಾಯಮ್ಮ ಮುಂದೆ ಆಡಲಿರುವ ಕ್ರೌರ್ಯದ ಬೇಟೆಯಲ್ಲಿ ತಾನು ಬಲಿಯಾಗುವ ಅರಿವು ಅವಳಿಗಿಲ್ಲ. ಗಬ್ಬಕಟ್ಟಿದ ಆಡು, ಆಡುಗಳ ಆರ್ತನಾದ ವೀರಪ್ಪನನ್ನು ಕಾಡಿನ ಸುಂದರ ಬೆಳದಿಂಗಳ ಲೋಕದಿಂದ ಹೊರದೂಡುತ್ತದೆ. ಕಾಡಿನಲ್ಲಿ ಕುಳಿತು ತಾನಿರುವ ಸನ್ನಿವೇಶವನ್ನು ಕುರಿತು ತಳಮಳಕ್ಕೆ ಒಳಗಾಗುವ ವೀರಪ್ಪನಿಗೆ ಅರಮನೆಯಲ್ಲಿ ತನ್ನ ಬೆಳದಿಂಗಳಂತಹ ಪತ್ನಿಯನ್ನು ತನ್ನ ತಾಯಿಯೇ ಅತ್ಯಾಚಾರಕ್ಕೆ ಒಳಪಡಿಸುತ್ತಿರುವುದರ ಅರಿವಿಲ್ಲ. ಆ ಅರಿವಾಗದೆಯೇ ಅವನು ಮಡಿಯುವುದು ಅವನ ಮುಗ್ಧತೆ ಮತ್ತು ಮಾನವೀಯತೆಗಳಿಗೆ ದೇವರು ಕೊಟ್ಟ ವರವೇ ಆಗುತ್ತದೆ.

[ಕೃತಿ : ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ] ಮ. ಗು. ಪುಟ ಸಂಖ್ಯೆ : ೧೪೯

ಈ ಎರಡೂ ಘಟನೆಗಳ ಅನಂತರ ಸಾವಿನ ಸುಗ್ಗಿಯೇ ಆಗಿ ಹೋಗುತ್ತದೆ. ವೀರಪ್ಪನ ಸಾವು, ಪುಟ್ಟತಾಯಮ್ಮನ ಆತ್ಮಹತ್ಯೆ, ಅಯ್ಯನವರ ಸಾವು ಹೀಗೆ ಸರಣಿಯಾಗಿ ಸಾವು ಸಂಭವಿಸುತ್ತದೆ. ವ್ಯವಸ್ಥೆಯ ನೇರ ಕ್ರೌರ್ಯಕ್ಕೆ ಒಳಗಾಗಿರುವ ಸಾಕಮ್ಮನ ವ್ಯಕ್ತಿತ್ವ ಈ ಸಂದರ್ಭದಲ್ಲಿ ಗಟ್ಟಿಕೊಳ್ಳುವ ಬಗೆಯಂತೂ ಅದ್ಭುತವಾದುದು. ಛಿದ್ರಗೊಳ್ಳದ ಅಖಂಡ ಮುಗ್ಧತೆಯನ್ನು ಒಳಗೊಂಡಿರುವ ಸಾಕಮ್ಮನನ್ನು ತನ್ನ ಸಂಪತ್ತಿನ ದಾಹಕ್ಕೆ ಬಲಿಕೊಡುವ ಪುಟ್ಟತಾಯಮ್ಮ ತನ್ನ ಕರುಳ ಕುಡಿಯನ್ನೇ ಕಳೆದುಕೊಳ್ಳಬೇಕಾಗುತ್ತದೆ. ತಾವು ಜ್ಯೋತಿಷ್ಯ ಹೇಳಿದ ಮಾತನ್ನು ತಾವೇ ನುಂಗಬೇಕಾದ ಸ್ಥಿತಿಯಲ್ಲಿ ಅಯ್ಯಗಳ ಮರಣ ಹೊಂದುತ್ತಾರೆ.

ಗಂಡನ ಸಾವು, ಅತ್ತೆ, ಅಯ್ಯಗಳ ಸಾವು ಸಾಕಮ್ಮನನ್ನು ಅಲ್ಲಾಡಿಸಲು ಶಕ್ತವಾಗುವುದಿಲ್ಲ. ಕಾಯುವವರಾರಿಲ್ಲದೆ ಯಾರದೋ ಕಾಮದ ಕ್ರೌರ್ಯಕ್ಕೆ-ಅತ್ತೆಯೇ ಮಾಧ್ಯಮವಾಗಿ-ಒಳಗಾಗಿರುವ ಸಾಕಮ್ಮನ ಆ ಆಘಾತವನ್ನು ಸಾವುಗಳು ಸಹ ಸಡಿಲಿಸಲಾರದ ಪರಿಸ್ಥಿತಿ ಇದೆ. ಆದರೆ ಪುಟ್ಟತಾಯಮ್ಮ ಕಟ್ಟಿ ಬಯಸಿದ್ದ ಲೋಕವಾಗುತ್ತದೆ. ಸೃಷ್ಟಿ ಕ್ರಿಯೆ ಅಸಾಧ್ಯವಾದ ಬಂಜರು ಭೂಮಿಯಾಗುತ್ತದೆ. ಭೂತ, ವರ್ತಮಾನ, ಭವಿಷ್ಯತ್ ಮೂರು ಕಾಲಗಳಲ್ಲಿಯೂ ಆ ಲೋಕದ ಬಂಜೆತನವನ್ನು ಸಂಕೇತಿಸುವ ವ್ಯಕ್ತಿಯಾಗಿ ಪುಟ್ಟತಾಯಮ್ಮನ ತಮ್ಮ ಕುಮಾರಪ್ಪ ಬರುತ್ತಾನೆ. ಸಾಕಮ್ಮನ ಮದುವೆಯಲ್ಲಿ ಛಲದಂಕಪುರಕ್ಕೆ ಬರುವ ಆತನನ್ನು ಇಡೀ ಊರು ಅಚ್ಚರಿಯಿಂದ ನೋಡುತ್ತದೆ. ಛಲದಂಕಪುರದ ಜನ ಅಂತಹ ಮನುಷ್ಯನನ್ನೆ ಈ ಹಿಂದೆ ನೋಡಿಲ್ಲ. ಆತನ ನಪುಂಸಕತನ ಅವರ ಅನುಭವದಲ್ಲಿ ಇಲ್ಲವೇ ಇಲ್ಲ. ಅಂತಹ ಲೋಕದೊಡನೆ ಸಾಕಮ್ಮ ಸಂಬಂಧವನ್ನು ಯಾವುದೇ ವಾಂಛಲ್ಯವಿಲ್ಲದೆ ಕಳೆದುಕೊಳ್ಳುತ್ತಾಳೆ.

ಸಾಕಮ್ಮ ಛಲದಂಕಪುರಕ್ಕೆ ವಾಪಸ್ಸಾಗುವುದರೊಂದಿಗೆ ಕಾದಂಬರಿಯ ಮೂರನೆಯ ಎಳೆ ತೆರೆದುಕೊಳ್ಳುತ್ತದೆ. ಸಾಕಮ್ಮನ ಮೂಲಗುಂಪೇ ಆದ ಜೀವಂತಿಕೆ ಮತ್ತೆ ಹಿಂತಿರುಗ ತೊಡಗುತ್ತದೆ. ಸಾಕವ್ವ ಎಲ್ಲ ಕಳೆದುಕೊಂಡ ಅನಂತರವೂ ಬದುಕನ್ನು ಕಟ್ಟಿಕೊಳ್ಳುವ ಕ್ರಿಯೆ ಅನನ್ಯವಾದದ್ದು. ಅವಳ ಲೋಕದ ಸೃಷ್ಟಿಶೀಲತೆಯ ಸಂಕೇತವೇ ಅವಳಾಗಿದ್ದಾಳೆ. ಅವಳ ಬದುಕಿನ ಎಲ್ಲ ಅಘಾತಗಳನ್ನೂ ಅದು ಲಯ ಮಾಡಿ ಬಿಡುತ್ತದೆ. ಸಾಕಮ್ಮನ ಗಟ್ಟಿತನವನ್ನು ಅದರ ಹಿನ್ನಲೆಯನ್ನು ಅವಳ ಸುತ್ತಮುತ್ತಲಿನವರು ಗಮನಿಸುವುದೇ ಇಲ್ಲ. ಅವರು ಅದನ್ನು ಸಹಜವಾಗಿಯೇ ಸ್ವೀಕರಿಸುತ್ತಾರೆ.

ಮತ್ತೆ ಈ ಲೋಕದಲ್ಲಿಯೂ ಗಂಡು-ಹೆಣ್ಣಿನ ಸಂಬಂಧ ಕುರಿತಾದ ವಿಷಯಗಳು ಬಿಚ್ಚಿಕೊಳ್ಳುತ್ತವೆ. ಚಿನ್ನಪ್ಪ-ಗಿರಿಜೆಯರ ಸಂಬಂಧ ಊರವರು ಇರಬಹುದೆಂದು ಭಾವಿಸುವ ಗಿರಿಜೆಯ ತಾಯಿ ಮತ್ತು ದಾನಪ್ಪಗೌಡರ ನಡುವಣ ಸಂಬಂಧ, ತನ್ನ ಅಳಿಯನ್ನು ಮತ್ತೆ ಬುಟ್ಟಿಗೆ ಹಾಕಿಕೊಂಡು ಬಿಡುತ್ತಾಳೆಂದು ಚಿನ್ನಪ್ಪ-ಸಾಕಮ್ಮರಲ್ಲಿ ಊಹಿಸುಕೊಳ್ಳುವ ಗಿರಿಜೆಯ ತಾಯಿ ನಡುವೆ ಕಟ್ಟುವ ಸಂಬಂಧ. ಈ ಬಗೆಯ ಊಹಾ ಪೋಹಗಳನ್ನೇ ನಿಜವೆಂದು ನಂಬಿಕೊಂಡು ಭಲದಂಕಪುರದ ಜನ ಮಾತನಾಡಿಕೊಳ್ಳತೊಡಗುತ್ತಾರೆ. ಆ ಲೋಕದ ಮುಗ್ಧತೆಗೂ ಎಲ್ಲೊ ಒಂದು ಕಡೆ ಬಿರುಕುಂಟಾದ ಸತ್ಯವನ್ನು ಅಲ್ಲಗಳೆಯಲಾಗುವುದಿಲ್ಲ.

ಅನಿರೀಕ್ಷಿತವಾಗಿ ಉಂಟಾದ ಗಿರಿಜೆಯ ಮರಣ ದಾನಪ್ಪಗೌಡರಲ್ಲಿ ಮಗಳು ಮರು ಮದುವೆಯ ಆಸೆ ಮೂಡಿಸುತ್ತದೆ. ಅದು ಸಾಕಮ್ಮನ ಮನಸ್ಸಿನ ಮೂಲೆ ಸೇರಿದ್ದ ಆಘಾತವನ್ನು ಚೆನ್ನಪ್ಪನ ಪಾತ್ರ ಇದ್ದಕ್ಕಿದಂತೆ ಎತ್ತರಕ್ಕೆ ಬೆಳೆದು ಬೀಡುತ್ತದೆ. ಅವನು ಸಾಕಮ್ಮನಿಗೆ ಹೇಳುತ್ತಾನೆ. "ಸಾಕೂ ಅವರು ಕೆಡಿಸಿರೋದು ಪುಟ್ಟತಾಯಮ್ಮನ ಸೋಸೆನಾ, ನನ್ನ ಸಾಕೂನಲ್ಲ" ಆದರೆ ಭಲದಂಕಪುರ ಅವರಿಬ್ಬರ ಮರು ವಿವಾಹವನ್ನು "ಮುಂಡೆಮದುವೆ ಎಂದೇ ಪರಿಗಣಿಸುತ್ತವೆ. ಆ ಬಗೆಯ ವಿವಾಹ ಭಲದಂಕಪುರದಲ್ಲಿ ಮೂಡಿಸಿದ ಪರಿಣಾಮವನ್ನು ಕಾದಂಬರಿ ದಾಖಲಿಸುತ್ತದೆ.

ಸಾಕಮ್ಮ-ಚಿನ್ನಪ್ಪರ ಬದುಕಿನ ನಡೆಗಳು ಸಾಮಾನ್ಯರ ಬದುಕಿನಲ್ಲಿ ನಡೆದ ನಡೆಗಳಲ್ಲ ಅದರಲ್ಲಿಯೂ ಸಾಕಮ್ಮನ ಬದುಕಿನ ನಡೆಯಂತೂ ಆ ನಡೆಯಲ್ಲೂ ಗಡಿಕೊಂಡ ಸಾಕಮ್ಮನ ವ್ಯಕ್ತಿತ್ವವಂತೂ ಅವಳನ್ನು ಭಲದಂಕಪುರದ ಜನರ ಮನಸ್ಸಿನಲ್ಲಿ ಒಂದು ಅಲೌಕಿಕ ನೆಲೆಯಲ್ಲಿಯೇ ಇರಿಸಿ ಬಿಡುತ್ತದೆ. ಅದನ್ನು ವ್ಯಾಖ್ಯಾನಿಸುವ ಕಾದಂಬರಿಯ ಕೊನೆಯ ಆಧ್ಯಾಯ ಕಾದಂಬರಿಯಲ್ಲಿ ಹೀಗೆ ದಾಖಲಾಗುತ್ತದೆ. ಯಾರಿಗೂ ಹೇಳಬಾರದ ಒಂದು ಸುದ್ದಿಯಾಗಿ.

"ಪ್ರತಿ ಅಮಾವಾಸೆ ಹಾಗೂ ಹುಣ್ಣಿಮೆಯ ದಿನದಂದು ರಾತ್ರಿಕಲ್ಲು ನೀರು ಕರಗುವ ಹೊತ್ತಿನಲ್ಲಿ ಒಬ್ಬ ಮುನಿ ಸಾಕಜ್ಜಿಯ ಮನೆಯಲ್ಲಿ ಹುಟ್ಟಿದ ನಿರ್ವಾಣಕ್ಕೆ ಕೈಯಲ್ಲಿ ಬೆತ್ತ ಹಿಡಿದು ತಿರುಗಾಡುತ್ತಾನೆಂತೆ ಶಿವ ಪೂಜೆಯ ಮನೆಯಿಂದ ಮಹಾರಾಜನು ಕುದುರೆಯ ಮೇಲೆ ಕುಳಿತು ಹೊರಡುತ್ತಾರಂತೆ ಅವರ ಹಿಂದೆ ದಂಡು ದಾಳಿ ಎಲ್ಲಾ ನಡೆಯತ್ತವೆಯಂತೆ ಆ

ಸಂದರ್ಭದಲ್ಲಿ ಪೂಜೆಯ ಮನೆಯಲ್ಲಿ ಗಂಟೆಗಳ ಧ್ವನಿ ತಾನಾಗಿಯೆ ಆಗುತ್ತದೆಯಂತೆ, ಮನೆ ತುಂಬಾ ಧೂಪದ ವಾಸನೆ ತುಂಬುತ್ತದೆಯೆಂತೆ.

ಈ ದಂಡು ದಾಳಿಯ ಹಿಂದೆ ಬಿಳಿ ಸೀರೆ ಉಟ್ಟ ಬಂದು ಹೆಣ್ಣು ಒಂದೇ ಸಮ ಅಳುತ್ತಾ ಹೋಗುತ್ತಿರುತ್ತಾಳಂತೆ. ಅವಳ ಹಿಂದೆ ಕಾವಲಿಗೆ ಒಂದು ಸರ್ಪ ಇರುತ್ತದೆಯೆಂತೆ!!...... ಅಂತೆ......... ಅಂತೆ.......[ಪುಟ. ೨೨೭].

ಮನುಷ್ಯ ಕ್ಷುದ್ರತೆಯನ್ನು ಮಿರಲರಿಯದ ಸಾಮಾನ್ಯ ಜನ ಅದನ್ನು ಮಿರಿದ ಜನರನ್ನು ಪರಿಭಾವಿಸುವ ರೀತಿ ನಿರಂತರವಾಗಿ ಇದೇ ಆಗುತ್ತಾ ಬಂದಿದೆ.

ಇತಿಹಾಸ ಸಂದರ್ಭವೊಂದರಲ್ಲಿ ವ್ಯವಸ್ಥೆಯೊಳಗಾಗಿ ಕ್ಷುದ್ರತೆಯನ್ನು ಮೀರಿ ಮಾನವೀಯ ಘನತೆಯನ್ನು ಮೆರೆದ ಸಾಕಮ್ಮನ ಬದುಕನ್ನು ಸಾಹಿತ್ಯವಾಗಿಸುವಲ್ಲಿ ಮಲೆಯೂರು ಗುರುಸ್ವಾಮಿ ಅವರ ಕಲೆ, ನಿರೂಪಣೆ ಸೊಗಸಾದ ಸಾಮಾನ್ಯ ಜನಪದರ ಭಾಷೆಯ ಶೈಲಿ ಸರಳ ವಿಶಿಷ್ಟವಾದುದು. ಈ ಕಾದಂಬರಿಯಲ್ಲಿ ಗ್ರಾಮೀಣ ಜನತೆಯ ಚಿತ್ರಣವನ್ನು ಮನಮುಟ್ಟುವಂತೆ ಬದುಕನ್ನು ನೋಡುವ ವಿಸ್ತೃತ ದೃಷ್ಟಿಕೋನ ಈ ಎಲ್ಲ ಅಂಶಗಳೂ ಸಮಾನ ಪ್ರಾಧಾನ್ಯತೆಯನ್ನು ಗಳಿಸಿಕೊಂಡಿವೆ. ಮಲೆಯೂರು ಗುರುಸ್ವಾಮಿ ಅವರ ಪ್ರಥಮ ಕಾದಂಬರಿ ಎಂಬಲ್ಲಿನ ಯಾವ ಪರಿಮಿತಿಯನ್ನೂ ಒಳಗೊಳ್ಳದ ಕಾದಂಬರಿಯಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿ ಪಾತ್ರವಹಿಸಿವೆ.

ಅಧ್ಯಾಯ ನಾಲ್ಕು

ಐತಿಹಾಸಿಕ ಅಂಶಗಳು

ಮಲೆಯೂರು ಗುರುಸ್ವಾಮಿ ಅವರ ಮೂರು ಪ್ರಮುಖ ಕಾದಂಬರಿಗಳಲ್ಲಿ ಮೂರನೆಯ ಕಾದಂಬರಿಯೇ 'ಅಪ್ರತಿಮವೀರ' ಈ ಕಾದಂಬರಿಯನ್ನು ಅವರು ೧೯೯೭ರಲ್ಲಿ ರಚನೆ ಮಾಡಿದ್ದಾರೆ. ಇವರ ಮೂರು ಕಾದಂಬರಿಗಳು ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುವುದು ಒಂದು ವಿಶೇಷ. ಈ 'ಅಪ್ರತಿಮ ವೀರ' ಕಾದಂಬರಿಯಲ್ಲಿ ಚಿಕ್ಕದೇವರಾಜನು ಪ್ರಾರಂಭದಿಂದಲೂ ತನ್ನ ಕರುಳಿನ ಕುಡಿಯ ವ್ಯಾಮೋಹಕ್ಕೆ ಬಲಿಯಾಗಿ ಅಂತಿಮ ಕ್ಷಣದಲ್ಲಿ ನಿಸ್ಸಹಾಯಕನಂತೆ ನಿರ್ಧಾರ ಕೈಗೊಳ್ಳುವುದನ್ನು ನೋಡಬಹುದಾಗಿದೆ.

ಕನ್ನಡ ನವೋದಯದ ಕಾಲದಲ್ಲಿ ಐತಿಹಾಸಿಕ ಕಾದಂಬರಿಗಳು ಹೇರಳವಾಗಿ ರಚನೆಗೊಂಡಿದ್ದವು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮತ್ತಿತರ ಚಿಕ್ಕಪುಟ್ಟ ರಾಜವಂಶಗಳ ಕುರಿತು ಗಳಗನಾಥರು, ಬಿ.ಪುಟ್ಟಸ್ವಾಮಯ್ಯ, ವೀರಕೇಸರಿ, ಕೆ.ವಿ.ಅಯ್ಯರ್, ಅನಕೃ, ತರಾಸು, ಶ್ರೀನಿವಾಸರಾವ್ ಕೊರಟಿ, ಆನಂದಕಂದರೇ ಮೊದಲಾದ ಪ್ರಸಿದ್ಧರು ಬರೆದಿದ್ದಾರೆ.

ಚಿಕ್ಕದೇವರಾಜನ ಆಡಳಿತದ ಅವಧಿ ಸಾಹಿತಿಗಳಿಗೂ, ಸಂಶೋಧಕರಿಗೂ ತುಂಬಾ ಕುತೂಹಲವನ್ನು ಹುಟ್ಟಿಸುವಂತಹದು, ಚಿಕ್ಕದೇವರಾಜ ಒಡೆಯನ ಆಡಳಿತದ ಕಾಲ, ಮೈಸೂರು ಅರಸರ ಚರಿತ್ರೆಯಲ್ಲಿಯೇ ತುಂಬಾ ಗಮನಾರ್ಹವಾದದ್ದು. ಅನೇಕ ದೃಷ್ಟಿಗಳಿಂದ, ಚಿಕ್ಕದೇವರಾಜನು ಪಟ್ಟಕ್ಕೆ ಬಂದುದೇ ಒಂದು ವಿಶಿಷ್ಟ ಸನ್ನಿವೇಶದಲ್ಲಿ. ರಾಜಕೀಯ ಒತ್ತಡದಲ್ಲಿ ಈ ಹಿನ್ನಲೆಯಲ್ಲಿ ಶ್ರೀ ಮ.ನ.ಮೂರ್ತಿಯವರು 'ಚಿಕ್ಕದೇವರಾಜ' ಎನ್ನುವ ಕಾದಂಬರಿಯನ್ನು ಬರೆದಿದ್ದಾರೆ. ಇದರಲ್ಲಿ ಚಿಕ್ಕದೇವರಾಜನು ಹೇಗೆ ಪಟ್ಟಕ್ಕೆ ಬಂದನು ಎನ್ನುವ ಅಂಶದ ಮೇಲೆ ಮಾತ್ರ ಒತ್ತುಕೊಟ್ಟು ಅವನ ಆಡಳಿತದ ದಿನಗಳನ್ನು ಕುರಿತು ಮುಂದಿನ ಕಾದಂಬರಿಯನ್ನು ಬರೆಯುತ್ತೇನೆ ಎನ್ನುವ ಮಾತುಗಳನ್ನು ಆಡಿದ್ದಾರೆ, ಆದರೆ, ಆ ಎರಡನೆಯ ಕಾದಂಬರಿ ರಚಿತವಾದಂತೆ ಕಾಣಲಿಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ಶ್ರೀಯುತ ಮಗು ಅವರು ಕಾದಂಬರಿಯ ರಚನೆಗೆ ಕೈ ಹಾಕಿದೆ ಎಂದು ಹೇಳಿದ್ದಾರೆ.

ಚಿಕ್ಕದೇವರಾಜನ ಆಳ್ವಿಕೆ ಮೈಸೂರು ಇತಿಹಾಸದಲ್ಲೇ ರೋಮಾಂಚನಕಾರಿಯಾಗಿದೆ.. ಚಿಕ್ಕದೇವರಾಜನ ಯುದ್ಧಕೌಶಲ, ವೈಭವ ಸಾಹಿತ್ಯ ಲಲಿತಕಲೆಗಳ ಪರಿಪೋಷಣೆಗಳಿಂದ ಗಮನಾರ್ಹವಾದುದು. ಚಿಕ್ಕದೇವರಾಜ ಮೂವತ್ತೊಂದು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾನೆ. ಮೊಗಲ ಚಕ್ರವರ್ತಿಯೊಂದಿಗೆ ಸ್ನೇಹ, ಮರಾಠರೊಂದಿಗೆ, ಬಿಜಾಪುರ ಗೋಲ್ಕೊಂಡಾ ಸುಲ್ತಾನರೊಂದಿಗೆ ಯುದ್ಧೋದ್ಯೋಗದಲ್ಲಿದ್ದು, ಹರಿದು ಹಂಚಾಗಿದ್ದ ರಾಜ್ಯವನ್ನು ಕ್ರೂಢೀಕರಿಸುತ್ತಲೂ, ವಿಸ್ತರಿಸುತ್ತಲೂ ದಕ್ಷ ಆಡಳಿತದಿಂದ ರಾಜಶ್ರೇಷ್ಠನೆಂದು ತನ್ನ ಸಾಮರ್ಥ್ಯದಿಂದ ಅಪ್ರತಿಮವೀರ ಎನಿಸಿದ್ದಾನೆ. ಮಲೆಯೂರು ಗುರುಸ್ವಾಮಿ ಅವರು "ಅಪ್ರತಿಮವೀರ" ಕಾದಂಬರಿ ಈ ಚಿಕ್ಕದೇವರಾಜನ ಪಟ್ಟಾಭಿಷೇಕದಿಂದ ಆತನ ಮರಣದವರೆಗಿನ ವ್ಯಕ್ತಿ ಸಾಧನೆಯ ಸಮಗ್ರ ನೋಟವನ್ನು ಚಿತ್ರಿಸಿದೆ.

ಚಿಕ್ಕದೇವರಾಜ ಒಡೆಯರ ಮನೋಭಾವನೆ ಜನಪದರ ಬದುಕಿನ ಪದರ ಪದರಗಳನ್ನು ಸೂಕ್ಷ್ಮವಾಗಿ ನೋಡಬೇಕೆನ್ನುವುದು ನನ್ನ ಸಹಜ ಪ್ರವೃತ್ತಿಯೇ ಹೊರತು, ಕೀಳು ಅಭಿರುಚಿಯ ನಿತ್ಯ ವೃತ್ತಿಯಲ್ಲ ಎಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದ.

ಅಪ್ಪಾಜಿ (ಚಿಕ್ಕದೇವರಾಯ ಒಡೆಯರು) ಬೇರೆ ಬೇರ ಧರ್ಮದವರನ್ನು ಅತಿಯಾಗಿ ಹಚ್ಚಿಕೊಂಡಿದ್ದಾನೆ ಎಂದು ಜನರು ಅಪಪ್ರಚಾರ ಮಾಡುತ್ತಿದ್ದರು. ಏಕೆಂದರೆ ಮೈಸೂರು ಅರಸರು ಶ್ರೀವೈಷ್ಣವ ಧರ್ಮದ ಸಂಪ್ರದಾಯವನ್ನು ಪಾಲಿಸುತ್ತಿದ್ದರೂ, ಉಳಿದ ಶೈವ, ಜೈನ, ಧರ್ಮಗಳನ್ನು ಗೌರವದಿಂದ ಕಾಣುತ್ತಿದ್ದರು. ಅದು ಚಿಕ್ಕದೇವರಾಜ ಸಾಮಾನ್ಯ ಗುಣವೇನು ಆಗಿರಲಿಲ್ಲ. ಒಮ್ಮೆ ಶ್ರವಣಬೆಳಗೊಳದ ಜೈನರ ಸಮೂಹ ನಿಯೋಗವೊಂದು ಅಪ್ಪಾಜಿಯ ಬಳಿ ಬಂದು ಗೊಮ್ಮಟೇಶ್ವರ ಮಹಾಸ್ವಾಮಿಯ ಮಹಾಮಸ್ತಕಾಭಿಷೇಕಕ್ಕೆ ಸಹಾಯವನ್ನು ಕೇಳಿದಾಗ ಅಪ್ಪಾಜಿ ಬೊಕ್ಕಸದಿಂದ ಹೆಚ್ಚಿನ ದ್ರವ್ಯವನ್ನು ಕೊಡಿಸಿದ್ದನು.

ಚಿಕ್ಕ ವಯಸ್ಸಿನಿಂದಲೂ ಚಿಕ್ಕದೇವರಾಜರಿಗೆ ಜೈನ ಕಾವ್ಯಗಳ ಬಗ್ಗೆ ಜೈನ ಧರ್ಮದ ಬಗ್ಗೆ ಏನೋ ಒಂದು ರೀತಿಯ ಕುತೂಹಲ ಬೆಳೆದುಬಿಟ್ಟಿತು. 'ಹೊರಗೆ ಕಾಣುವ ನದಿಗೆ ಒಡ್ಡು ಕಟ್ಟಬಹುದೇ ಹೊರತು. ಭೂಗರ್ಭದ ಜಲಕ್ಕೆ ಒಡ್ಡು ಕಟ್ಟಲಾಗುವುದಿಲ್ಲ'.

ಚಿಕ್ಕದೇವರಾಜನ ಕಾಲದಲ್ಲಿ ಮೈಸೂರು ಚರಿತ್ರೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಸಂಗ್ರಹಿಸಿಡಲಾಗಿತ್ತಾದರೂ, ಟೀಪೂವಿನ ಕಾಲದಲ್ಲಿ ಅವು ಬಹುಪಾಲು ನಷ್ಟಗೊಂಡಿರುವ ಬಗ್ಗೆ ತಿಳಿಯುತ್ತದೆ. ಚಿಕ್ಕದೇವರಾಜನ ಆಡಳಿತಾವಧಿಯ ನಿರೂಪಣೆಯಲ್ಲಿಯೂ ವಿವಾದಾಸ್ಪದ

ಅಂಶಗಳು ಇದ್ದೇ ಇದೆ. ಚಿಕ್ಕದೇವರಾಜ ಒಡೆಯನು, ದೊಡ್ಡದೇವರಾಜ ಒಡೆಯರನ್ನು ಕೊಲ್ಲಿಸಿ ಪಟ್ಟಕ್ಕೆ ಬಂದನೇ, ಅಥವಾ ಅವರೇ ಸ್ವಯಿಚ್ಛೆಯಿಂದ ಅಧಿಕಾರ ಹಸ್ತಾಂತರಿಸಿದರೇ? ಶಿವಾಜಿಯಂತಹ ಯುದ್ಧ ದೈತ್ಯನನ್ನು ಚಿಕ್ಕದೇವರಾಜನು ಸೋಲಿಸಿ ಹಿಮ್ಮೆಟ್ಟಿಸಿದುದು ನಿಜವೇ? ಅಥವಾ ಇದು ಕನ್ನಡ ನಾಡಿನ ಚರಿತ್ರೆಕಾರರು ಮಾತ್ರ ಬರೆಯುವ ಕೇವಲ ಅಭಿಮಾನದ ಮಾತೆ? ಈ ಕಾಲ ಜೈನ, ಬ್ರಾಹ್ಮಣ ಮತ್ತು ವೀರಶೈವಧರ್ಮಗಳ ಸಂಘರ್ಷದ ಕಾಲವಾಗಿತ್ತೇ? ಮೂಲಭೂತವಾಗಿ ಧರ್ಮಭೀರುವಾಗಿದ್ದ ಚಿಕ್ಕದೇವರಾಜ, ರೈತರ ದಂಗೆಯ ಸಂದರ್ಭದಲ್ಲಿ ನೂರಾರು ಜನ ಜಂಗಮರನ್ನು ಕೊಲ್ಲಿಸುವಷ್ಟು ಕ್ರೂರನಾಗಿದ್ದನೇ? ಹಾಗೂ ಇದು ಪ್ರಧಾನಿಯಾದ ವಿಶಾಲಾಕ್ಷ ಪಂಡಿತನ ಷಡ್ಯಂತ್ರವೇ ಹಾಗಾದರೆ ಅದಕ್ಕೆ ಚಾರಿತ್ರಿಕವಾದ ಕಾರಣವಾದರೂ ಏನು ಇರಬಹುದು. ಈ ಅವಧಿಯಲ್ಲಿ ಬಂದಂತಹ ಎಲ್ಲ ಕವಿಗಳೂ ತಮ್ಮ ಕೃತಿಗಳಲ್ಲಿ ರಾಜನ ವಂಶಾವಳಿಯನ್ನು ಏಕರೂಪದಲ್ಲಿ ಬರೆದಿರುವುದಕ್ಕೆ ಕಾರಣವಾದರೂ ಏನು? ಹಾಗೂ ಎಲ್ಲ ಕೃತಿಗಳಲ್ಲಿಯೂ ರಾಜನ ವಂಶಾವಳಿಯನ್ನು ಬರೆಯುವ ಅವಶ್ಯಕತೆಯಾದರೂ ಏನಿತ್ತು? ಈ ಅರಸರು ಕೀಳು ಕುಲದವರು ಎಂದು ಅಲ್ಲಲ್ಲಿ ಕೇಳಿಬರುತ್ತಿದ್ದ ಒಡಕುಮಾತುಗಳನ್ನು ಜನಮನದಿಂದ ಕಿತ್ತು ಹಾಕಿ, ಅವರು ಉಚ್ಚವರ್ಣದವರು ಎಂದು ಪ್ರತಿಷ್ಠಾಪಿಸುವುದೇ ಅದರ ಉದ್ದೇಶವಾಗಿತ್ತೇ? ಚಿಕ್ಕದೇವ ರಾಜನು ಕೇವಲ ಮಂತ್ರಿಗಳ ಕೈಗೊಂಬೆಯಾಗಿದ್ದನೇ ಅಥವಾ ಸ್ವಾಭಿಮಾನಿಯಾಗಿದ್ದನೇ? ಸಂಚಿಯ ಹೊನ್ನಮ್ಮನಿಗೂ ಅವನಿಗೂ ಇದ್ದಂತಹ ಸಂಬಂಧದ ಸ್ವರೂಪ ಎಂತಹದು, ತನ್ನ ಮಗನಾದ ಇಮ್ಮಡಿ ಕಂಠೀರವನು ದೈಹಿಕವಾಗಿ ದುರ್ಬಲನಾಗಿದ್ದು, ಅವನು ಮುಂದೆ ಸಮರ್ಥವಾಗಿ ರಾಜ್ಯಾಡಳಿತವನ್ನು ನಿರ್ವಹಿಸಲಾರ ಎನ್ನುವುದನ್ನು ತಿಳಿದೂ, ಚಿಕ್ಕದೇವರಾಜನು ಮಗನನ್ನೇ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸುವಷ್ಟು ಮಾನಸಿಕವಾಗಿ ದುರ್ಬಲನಾಗಿದ್ದನೇ? ಹಾಗಾದ ಮೇಲೆ ಅವನಿಗೆ ಇದ್ದಂತಹ 'ಅಪ್ರತಿಮವೀರ' ಎನ್ನುವ ಬಿರುದು ಎಷ್ಟರಮಟ್ಟಿಗೆ ಸಾರ್ಥಕವಾಗುತ್ತದೆ. (ಬರಹಗಾರನ ಬರಹ ಅಪ್ರತಿಮವೀರ) – ಇತಿಹಾಸ ಸಂಶೋಧಕರಿಗೆ ಈ ಹಲವು ಅಂಶಗಳಲ್ಲಿ ಚಾರಿತ್ರಿಕ ಸತ್ಯಶೋಧನೆಗೆ ಇನ್ನೂ ಅವಕಾಶಗಳಿದ್ದೇ ಇವೆ. ಆದರೆ ಚಾರಿತ್ರಿಕ ಕಾದಂಬರಿಕಾರ, 'ಮೂಲಭೂತವಾಗಿ ಚಾರಿತ್ರಿಕ ಸತ್ಯಗಳ ಶೋಧಕನಲ್ಲ, ಸತ್ಯದ ಚರಿತೆಯ ಶೋಧಕ' (ಅಲ್ಲೇ) ಈ ಆಶಯದಲ್ಲಿ ಈ ಕಾದಂಬರಿ ಆಕೃತಿ ಪಡೆದಿದೆ.

ವಿಕ್ರಮಾದಿತ್ಯನ ಸಿಂಹಾಸನವೆಂದೇ ಖ್ಯಾತವಾದ ಮೈಸೂರು ಸಿಂಹಾಸಹನದ ಮೇಲೆ ಚಿಕ್ಕದೇವರಾಜನು ಮಂಡಿತನಾಗುವ ಸಂದರ್ಭವನ್ನೇ ಮೊದಲಿಗೆ ಪರಿಶೀಲಿಸಬಹುದು. ಕಂಠೀರವ ನರಸರಾಜ ಒಡೆಯರು ದೈವಾಧೀನರಾದಾಗಲೇ ಉತ್ತರಾಧಿಕಾರತ್ವಕ್ಕಾಗಿ ಚಲಾವಣೆಯಲ್ಲಿದ್ದ ಹೆಸರುಗಳು ಚಿಕ್ಕದೇವರಾಜ (ಅಪ್ಪಾಜಿ) ಮತ್ತು ಅವನ ಚಿಕ್ಕಪ್ಪನಾದ ದೇವರಾಜ ಒಡೆಯರದ್ದು ಆದರೆ ನಿಜವಾದ ಸ್ಪರ್ಧೆ ಇದ್ದದ್ದು ಅವರಲ್ಲಲ್ಲ. ಸ್ಪರ್ಧೆ ಇದ್ದದು ರಾಜರನ್ನು ಮಾಡುವವರಲ್ಲಿ ಮಾತ್ರ! ಹಿರಿಯರಾಣಿಯವರು ದೇವರಾಜರನ್ನು ಉತ್ತರಾಧಿಕಾರಿಯನ್ನಾಗಿ ಘೋಷಿಸಿದ್ದರಿಂದ ಅಪ್ಪಾಜಿಗೆ ಸಿಂಹಾಸನ ತಪ್ಪಿಹೋಗುತ್ತದೆ. ಆದರೆ ಪ್ರಜೆಗಳ ಹೃದಯ ಸಿಂಹಾಸನ್ನದಲಿ ಮಾತ್ರ ಅವನೇ ನಿಜವಾದ ರಾಜನಾಗಿದ್ದನು. ಕಂಠೀರವರ ಪತ್ನಿಗೆ ಒಂದುಕಡೆ ಪತಿ ವಿಯೋಗದ ದುಃಖವಾದರೆ ಮತ್ತೊಂದು ಕಡೆ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕಾದ ಸಮಸ್ಯೆ, ಹೃದಯ ಮತ್ತು ಮೆದುಳಿಗೆ ಏಕಕಾಲದಲ್ಲಿ ಬಿದ್ದಂತಹ ಒತ್ತಡ ಅವರನ್ನು ಜರ್ಝರಿತರನ್ನಾಗಿ ಮಾಡಿತ್ತು, ಹಾಗೆಂದುಕೊಂಡು, ಈ ಒಳಗುದಿಗಳು ಕಡಿಮೆಯಾದ ನಂತರ, ಶಾಂತ ಸ್ಥಿತಿಯಲ್ಲಿ ಯೋಚಿಸಿ ತೀರ್ಮಾನವನ್ನು ತೆಗೆದುಕೊಳ್ಳುವಷ್ಟು, ಸರಳವಾಗಿಯೂ ಇರಲಿಲ್ಲ. ರಾಜ್ಯದ ಒಳ ಹೊರಗಿನ ಸಮಸ್ಯೆಗಳು! ಸಿಂಹಾಸನದ ಉತ್ತರಾಧಿಕಾರತ್ವದ ವಿಷಯದಲ್ಲಿ ಇಬ್ಬರ ಹೆಸರುಗಳು ಈಗಾಗಲೇ ಚಲಾವಣೆ ಪಡೆದುಕೊಂಡಿದ್ದವು.

ಸಂಪ್ರದಾಯದಂತೆ ಅಪ್ಪಾಜಿ (ಚಿಕ್ಕದೇವರಾಜ) ರಾಜ್ಯದ ಉತ್ತರಾಧಿಕಾರಿ-ಯಾಗಬೇಕಿದ್ದಿತು. ಆದರೆ ಅದರಂತೆ ಅವನನ್ನೇ ರಾಜನನ್ನಾಗಿ ಆಯ್ಕೆಮಾಡುವಷ್ಟು ಸುಲಭವಾಗಿರಲಿಲ್ಲ. ಈ ಸಮಸ್ಯೆ ವಾಡೆಯಲ್ಲಿ ಅಪ್ಪಾಜಿಯ ಚಿಕ್ಕಪ್ಪನಾದ ದೇವರಾಜ ಒಡೆಯರಿಗೆ (ದೇವರಾಜ ಒಡೆಯರು ಮುಪ್ಪಿನ ದೇವರಾಜರ ನಾಲ್ಕನೆಯ ಮಗ) ಹೆಣ್ಣು ಕೊಟ್ಟ ಮಾವನಾದ ನಂಜರಾಜಯ್ಯನು. ಹೇಗಾದರೂ ಮಾಡಿ ತನ್ನ ಅಳಿಯನನ್ನೇ ರಾಜನನ್ನಾಗಿ ಮಾಡಬೇಕೆಂದು ಆಗಲೇ ತಂತ್ರಗಳನ್ನು ರೂಪಿಸತೊಡಗಿದ್ದ. ಹಾಗೇ ನೋಡಿದರೆ ತಾನು ಒಬ್ಬ ರಾಜವಂಶದ ವ್ಯಕ್ತಿ ಎನ್ನುವ ಯಾವ ಗತ್ತು ಗಾಂಭೀರ್ಯಗಳೂ ಇಲ್ಲದೆ, ಸದಾ ಸಾಮಾನ್ಯರ ನುಡವೆಯೇ ಇರಲು ಬಯಸುತ್ತಿದ್ದ ಅಪ್ಪಾಜಿಗೆ (ಚಿಕ್ಕದೇವರಾಯ) ರಾಜತ್ವದ ಬಗ್ಗೆ ಯಾವ ಮೋಹವು ಇರಲಿಲ್ಲ. ಶ್ರೀರಂಗಪಟ್ಟಣದ ಎಲ್ಲ ಅಬಾಲವೃದ್ಧರಿಗೂ ಅವನು ತಮ್ಮ ಕುಟುಂಬದ ಒಬ್ಬ ಸದಸ್ಯನೋ ಎನ್ನುವಷ್ಟು ಆತ್ಮೀಯನಾಗಿದ್ದನು.

ಹೀಗೆ ಕಾದಂಬರಿಯಲ್ಲಿ ಚಿಕ್ಕದೇವರಾಜನ ವ್ಯಕ್ತಿತ್ವ ಕಟ್ಟಿಕೊಳ್ಳುತ್ತದೆ. ಸ್ವತಃ ದೊಡ್ಡ ದೇವರಾಜನಿಗೆ ಚಿಕ್ಕದೇವರಾಜನಲ್ಲಿ ನಿಷ್ಕಲ್ಮಶವಾದ ಪ್ರೀತಿಯೂ ಇತ್ತು. ದೇವರಾಜರ ಮಾವ ನಂಜರಾಜಯ್ಯನ ಎಲ್ಲ ಕುಹಕ-ಕುತಂತ್ರಗಳ ನಡುವೆಯೂ ಅಪ್ಪಾಜಿಯು ಕೆಳದಿಯ ಶಿವಪ್ಪನಾಯಕನೊಂದಿಗೆ ಯುದ್ಧದಲ್ಲಿ ಜಯಸಾಧಿಸುವುದು. ನಂಜರಾಜಯ್ಯನ ಚಿತಾವಣೆಯ ಕಾರಣ ಶ್ರೀರಂಗಪಟ್ಟಣದಿಂದ ಚಿಕ್ಕದೇವರಾಜ ಹೊರಗಿರಬೇಕಾದ ಹೊತ್ತಿನಲ್ಲೇ ಯುದ್ಧ ಸಾರಿದ ಮಧುರೆಯ ಚೊಕ್ಕನಾಥನನ್ನು ಇದು ಮೈಸೂರು ಸಂಸ್ಥಾನದ ಪ್ರತಿಷ್ಠೆಯ ಪ್ರಶ್ನೆಯೆಂದೇ ಬಗೆದು ಯುದ್ಧರಂಗಕ್ಕೆ ಧಾವಿಸಿ ಚೊಕ್ಕನಾಥನನ್ನು ಸೋಲಿಸಿ, ಮೈಸೂರಿನವರ ಮಾನ ಉಳಿಸಿದ್ದು, ಚಿಕ್ಕದೇವರಾಜನ ಕೀರ್ತಿ ಪ್ರತಿಷ್ಠೆಯನ್ನು ಹೆಚ್ಚಿಸುತ್ತದೆ. ಮುಂದೆ ಚಿಕ್ಕನಾಯಕನ ಹಳ್ಳಿಯಲ್ಲಿ ಬೀಡು ಬಿಟ್ಟಿದ್ದ ದೇವರಾಜ ಒಡೆಯರ ಆರೋಗ್ಯ ಕೆಡುತ್ತಾ ಹೋಗಿ ಆತ ರಾಜತ್ವವನ್ನು ವಹಿಸಿಕೊಳ್ಳುವಂತೆ ಅಪ್ಪಾಜಿ (ಚಿಕ್ಕದೇವರಾಜ) ಯನ್ನು ಆಹ್ವಾನಿಸುವುದು ಮತ್ತು ರಾಜ್ಯವನ್ನು ಒಪ್ಪಿಸುವುದು- ಹೀಗೆ ಸಂಕೀರ್ಣ ಸನ್ನಿವೇಶದಲ್ಲೂ ಸರಾಗವಾಗಿ ಅಧಿಕಾರ ಹಸ್ತಾಂತರವಾಗುವುದನ್ನು ಈ ಕಾದಂಬರಿ ನಿರೂಪಿಸುತ್ತದೆ.

"ರಾಜಕೀಯ ಷಡ್ಯಂತ್ರದಲ್ಲಿ ಕೆಲವೊಮ್ಮೆ ರಾಜನಾದವನು ಬಲಿಪಶುವಾಗಿಬಿಡುತ್ತಾನೆ. ಮೋಸಗಳಿಂದ ದೂರನಾಗದಿದ್ದರೆ, ಧರ್ಮದಿಂದ ರಾಜ್ಯವನ್ನು ಆಳುವುದು ಕಷ್ಟವಾಗುತ್ತದೆ. ರಾಜನಾದವನಿಗೆ ಎಲ್ಲ ಪ್ರಜೆಗಳು ಒಂದೇ ಅವರಲ್ಲಿ ತರತಮಭಾವ ಸಲ್ಲದು. ನಿನ್ನ ಶಾಸನಗಳಿಗೆ, ನಿನ್ನ ಪ್ರೀತಿಯ ಮುದ್ರೆಯನ್ನು ಒತ್ತಿರಬೇಕು. ರಾಜ್ಯದ ಕೋಟೆಯನ್ನು ಕಟ್ಟಬೇಕಾದದು, ಪ್ರಜೆಗಳ ಪ್ರೀತಿಯ ಇಟ್ಟಿಗೆಗಳಿಂದಲೇ ಹೊರತು ಹಿಂಸೆಯಿಂದಲ್ಲ. ಕಟ್ಟಿದ ಕೋಟೆಯನ್ನು ಉಳಿಸಿಕೊಳ್ಳಬೇಕಾದರೂ, ದೂರದೃಷ್ಟಿಯಿಂದ ಕೂಡಿದ ನಿರ್ಧಾರಗಳು ಬೇಕಾಗುತ್ತವೆ. ಈ ದೂರ ದೃಷ್ಟಿಯ ಕಾರಣದಿಂದಲೇ ನಾನು ನಿನಗೆ ಇಂದು ಈ ವಿಶಾಲ ರಾಜ್ಯವನ್ನು ಒಪ್ಪಿಸುತ್ತಿರುವುದು. ಹಾಗಿಲ್ಲದಿದ್ದರೆ, ನನ್ನ ಮಗನಿಗೇ ಪಟ್ಟಕಟ್ಟಿ ನಾನು ಸಾಯುತ್ತಿದ್ದೆ. ಆದರೆ ಆತ ಅದನ್ನು ನಿಭಾಯಿಸಲಾರ ಎನ್ನುವ ಅರಿವಿನಿಂದಲೇ, ನಿನ್ನಂತಹ ಸಮರ್ಥನಿಗೆ ಒಪ್ಪಿಸುತ್ತಿರುವುದು, ನಿನ್ನನ್ನು ಜನ ಪ್ರೀತಿಯಿಂದ ಅಪ್ಪಾಜೀ, ದೇವಯ್ಯ ಎಂದು ಅನೇಕ ಹೆಸರುಗಳಿಂದ ಕರೆಯುತ್ತಾರೆ. ಆದರೆ ಇಂದಿನಿಂದ ನೀನು 'ಚಿಕ್ಕದೇವರಾಜ' 'ಚಿಕ್ಕದೇವರಾಜ'ನೆಂದು ಖ್ಯಾತನಾಗು"[೫]

೫. ಅಪ್ರತಿಮ ವೀರ, ಲೇ. ಮಗು, ಪುಟ. ೪೮-೪೯, ೫೯

"ಚಿಕ್ಕದೇವರಾಜರಿಗೆ ಚಿಕ್ಕವಯಸ್ಸಿನಿಂದಲೂ ರಾಜನಾಗಬೇಕು ಎಂಬುವ ಆಕಾಂಕ್ಷೆ ಇರಲಿಲ್ಲ. ಹೀಗೆಯೇ ಒಂದು ದಿನ ಸ್ನೇಹಿತರಾದ ವಿಶಾಲಾಕ್ಷಪಂಡಿತ ಮತ್ತು ತಿರುಮಲಾದ್ಯರೊಂದಿಗೆ ಕನ್ನಡನಾಡನ್ನು ಒಮ್ಮೆ ನೋಡ ಬೇಕು ಎನ್ನುವ ಆಸೆಯಿಂದ ಪ್ರವಾಸ ಮಾಡುತ್ತಾ, ಹಂಪೆಗೆ ಹೋದದ್ದೇ ನನ್ನ ಮನಸ್ಸಿನಲ್ಲಿ ರಾಜನಾಗಬೇಕೆಂಬ ಆಸೆಯ ಬೀಜ ಮೊಳೆಯಲು ಕಾರಣವಾಯಿತು. ಒಂದು ಪಕ್ಷ ಆ ಪ್ರವಾಸ ಕಾಲದಲ್ಲಿ ನಾನು ಹಂಪೆಗೆ ಹೋಗದಿದ್ದರೆ ಹಾಗೆ ಆಗುತ್ತಿರಲಿಲ್ಲವೆಂದು ಕಾಣುತ್ತದೆ ಅಥವಾ ನನ್ನ ಜೊತೆ ವಿಶಾಲಾಕ್ಷ ಪಂಡಿತ ಇರದಿದ್ದರೂ ಅಂತಹ ಆಸೆಯ ಬೀಜ ಮೊಳೆತು ಮರುವಾಗುತ್ತುರಲಿಲ್ಲವೋ ಏನೋ? (ಪುಟಸಂಖ್ಯೆ. ೪೮)

'ಅಪ್ರತಿಮವೀರ' ಎಂಬ ಬಿರುದು ಯುದ್ಧೋದ್ಯೋಗದ ಯಶಸ್ಸಿಗೆ ಸಂಬಂಧಿಸಿದ್ದು, ಬದುಕಿನ ಬಹುಭಾಗವನ್ನು ಅರಮನೆಯಗಿಂತಲೂ ರಣರಂಗದಲ್ಲಿ ಕಳೆಯಬೇಕಾದ ಸನ್ನಿವೇಶದಲ್ಲಿ ರೂಪುದಳೆದ ವ್ಯಕ್ತಿತ್ವ ಅದು. ರಾಜ್ಯದ ವಿಸ್ತರಣೆಯೊಂದಿಗೆ ಸ್ಥಿರವಾದ ಆಡಳಿತವನ್ನೂ ಪ್ರಜಾಸುಖವನ್ನೂ ಅದು ಅಪೇಕ್ಷಿಸುತ್ತದೆ. ಸಿಂಗರಾರ್ಯ ಚಿಕ್ಕಂದಿನಲ್ಲಿ ಚಿಕ್ಕದೇವರಾಜನ ತಾಯಿಗೆ ಹೇಳಿದಿಷ್ಟು. "ಮೃಣ್ಮಯವಾದ ಸಾಮ್ರಾಜ್ಯವನ್ನು ಯಾರುಬೇಕಾದರೂ ವಿಸ್ತರಿಸಬಹುದು. ತೋಳ್ಬಲ. ಸೈನ್ಯಬಲ ಇದ್ದರೆ ಸಾಕು. ಆದರೆ ನಿಮ್ಮ ಮಗ ಸಾಮಾನ್ಯರ ಕೈಯಲ್ಲಿ ಸಾಧ್ಯವಾಗದ ಜನತೆಯ ಹೃದಯ ಸಾಮ್ರಾಜ್ಯವನ್ನು ವಿಸ್ತರಿಸುತ್ತಾನೆ."[೬]

"ಕಳೆದುಹೋದ ಬದುಕಿನ ದಿನಗಳನ್ನು ಮೆಲುಕುಹಾಕುತ್ತಾ ಉಕ್ಕುವ ಕಣ್ಣೀರಿನ ತೆರೆಯಲ್ಲಿ ಕಟ್ಟಬೇಕಾದ ಬದುಕಿನ ಸ್ಪಷ್ಟ ಚಿತ್ರ, ಕೆಲವೊಮ್ಮೆ ಮುಚ್ಚಿ ಹೋಗುತ್ತದೆ. ಅದೇ ನಮ್ಮಲ್ಲಿ ಅನೇಕ ಶೂರರಿಗೆ ಇರುವ ತೊಂದರೆ. ಹಾಳು ಸುರಿಯುತ್ತಿರುವ ಹಂಪೆಯನ್ನು ಕಂಡು ಕಣ್ಣೀರು ಕರೆದವರೆಲ್ಲಾ ಇದುವರೆವಿಗೆ ಕಿಂಚಿತ್ತು ಪ್ರಯತ್ನಿಸಿದ್ದರೂ ಇಂತಹ ಹತ್ತು ಸಾಮ್ರಾಜ್ಯಗಳನ್ನು ಕಟ್ಟಬಹುದಿತ್ತು. ಆದರೆ ಏನು ಮಾಡುವುದು. ಚಿತ್‌ಶಕ್ತಿ ಇರುವವರಿಗೆ ತೋಳ್ಬಲವಾಗಲೀ, ಅಂತಹವರ ಬೆಂಬಲವಾಗಲೀ ಇರುವುದಿಲ್ಲ, ತೋಳ್ಬಲವಿರುವವರಿಗೆ ಚಿತ್ ಶಕ್ತಿಯ ಕೊರತೆಯಿರುತ್ತದೆ. ಇವೆರಡು ಇರುವಂತಹ ನಿನ್ನಂತಹವರು, ವಾಸ್ತವ ಸಾಮ್ರಾಜ್ಯಕ್ಕಿಂತ ಮಿಗಿಲಾದ ಕಲ್ಪನಾಲೋಕದ ಸಾಮ್ರಾಜ್ಯವನ್ನು ಸೃಷ್ಟಿಸಿಕೊಂಡು ಆ ಲೋಕದ

---

೬. ಅಪ್ರತಿಮ ವೀರ, ಲೇ. ಮಗು, ಪು. ೪೯

ಅನಭಿಷಕ್ತ ಸಾಮ್ರಾಟರಾಗಿ ಮೆರೆಯಲು ಬಯಸುತ್ತೀರಿ, ಇದೇ ನಮ್ಮ ದುರಂತ ನೋಡು" ಎಂದು ವಿಶಾಲಾಕ್ಷ ಪಂಡಿತನು ಪ್ರತಿಕ್ರಿಯಿಸಿದ."[೨]

ಚಿಕ್ಕದೇವರಾಜನ ವ್ಯಕ್ತಿತ್ವದ ಪ್ರಕರ್ಷಭಾಗ ಅವನ ಸೈನಿಕ ಕಾರ್ಯ ಆಚರಣೆಗಳು ರಾಜನೀತಿಗೆ ಸಂಬಂಧಿಸಿದ್ದಾಗಿದೆ. ಕಾಲಾನುಕ್ರಮಣಿಕೆಯೊಂದಿಗೆ ಯುದ್ಧಸ್ಥಳ, ಕಾಲ, ಸ್ಥಳ, ಅವಧಿ, ರಾಜ್ಯ-ರಾಜ್ಯಗಳ ಸೋಲು ಗೆಲುವುಗಳ ದಾಖಲೆಯಾಗುವ ಇತಿಹಾಸವನ್ನು ಅದರಲ್ಲೂ ರಾಜನ ಉದ್ದೇಶಿತ ಕೇಂದ್ರದಲ್ಲಿ ಬಿಂಬಿಸುವ ಕೌಶಲ ಕಾದಂಬರಿಕಾರನದಾಗುತ್ತದೆ. ಇಡೀ ಕಾದಂಬರಿಯಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರು ದೈವಾಧೀನರಾದ ದಿನವೊಂದು (ವಿಕಾರಿ ಸಂವತ್ಸರ-೧೬೫೯, ಶ್ರಾವಣ ಬಹುಳ ಅಷ್ಟಮಿಯ ದಿನ) ಅದು ಈ ಕಾದಂಬರಿಯ ಮೊದಲ ಸಾಲೇ- ಚಿಕ್ಕದೇವರಾಜ ಪಟ್ಟಾಭಿಷಿಕ್ತವಾಗಿ ಉಲ್ಲೇಖಗೊಂಡಿವೆ. ಚಿಕ್ಕದೇವರಾಜ ಇಹಲೋಕ ತ್ಯಜಿಸುವ ದಿನದ ಗೊತ್ತೂ ಇಲ್ಲ. ಆದರೆ ಚಿಕ್ಕದೇವರಾಜನ ಜೀವಿತಾವಧಿಯ ಎಲ್ಲ ಯುದ್ಧಗಳಲ್ಲಿ 'ಅಪ್ರತಿಮವೀರ' ಅನಾವರಣಗೊಳ್ಳುತ್ತಿದ್ದುದು, ಮೈದಳೆಯುತ್ತಿದ್ದುದು ಪರಿವಿಡಿಯಲ್ಲಿ ಪರಿಸ್ಫೋಟಗೊಳ್ಳುತ್ತಾ ಹೋಗುತ್ತದೆ. ಕೆಳದಿ, ಮಧುರೆ, ಬಿಜಾಪುರ, ಗೋಲ್ಕೊಂಡಾದವರು ಒಟ್ಟಾಗಿ ಯುದ್ಧ ಸಾರಿದಾಗಲೂ ಸೈನಿಕ ಕಾರ್ಯಾಚರಣೆಯ ತಂತ್ರಗಾರಿಕೆಯಿಂದ ಗೆಲುವು ಸಾಧಿಸುತ್ತಾ ರಾಜ್ಯವಿಸ್ತರಣೆಯನ್ನು ಮಾಡಿದ ಚಿಕ್ಕದೇವರಾಜನ ಗೆಲುವುಗಳಲ್ಲಿ ಉಲ್ಲೇಖಾರ್ಹವಾದುದು.

ಶ್ರೀರಂಗಪಟ್ಟಣದ ಉಗ್ರ ಕಾಳಗದಲ್ಲಿ ಮರಾಠರ ಅದ್ವಿತೀಯ ಸಾಹಸಿ ತಂತ್ರಕುಶಲಿಯಾದ ಶಿವಾಜಿಯನ್ನು ಗೆದ್ದುದು. ಆಗಲೇ ಚಿಕ್ಕದೇವರಾಜನು 'ಅಪ್ರತಿಮವೀರ' ಎಂಬ ಬಿರುದನ್ನು ಧರಿಸಿದ ಎಂದು ಚರಿತ್ರೆಯಲ್ಲಿ ಹೇಳಿದೆ.

ಅತ್ಯಂತ ಬಿಕ್ಕಟ್ಟಿನ ಪ್ರಸಂಗದಲ್ಲಿ ಔರಂಗಜೇಬನೊಂದಿಗೆ ಸ್ನೇಹ ಬೆಳಸಿ, ರಾಜಕೀಯ ಪ್ರಯೋಜನ ಪಡೆದದ್ದು ಚಿಕ್ಕದೇವರಾಜನ ಚಾಣಾಕ್ಷತೆಯನ್ನು ತಿಳಿಸುತ್ತದೆ. ಮರಾಠಾ ಸೇನಾನಿಗಳನ್ನು ಸದೆ ಬಡಿದ ಚಿಕ್ಕದೇವರಾಜನ ಬಗ್ಗೆ ಔರಂಗಜೇಬನಿಗೆ ಅಭಿಮಾನವು ಇತ್ತು. ಮಂತ್ರಿ ಲಿಂಗಣ್ಣಯ್ಯನಲ್ಲಿ 'ಅವನೊಬ್ಬ ಅಪ್ರತಿಮವೀರ' ಎಂದುಕೊಂಡಿದ್ದರಂತೆ ಕಾದಂಬರಿಕಾರರು ಬಣ್ಣಿಸುತ್ತಾರೆ. ಚರಿತ್ರೆಯಲ್ಲಿ ಕರ್ನಾಟಕದಲ್ಲಿ ಚಿಕ್ಕದೇವರಾಜನ

---

೨. ಅಪ್ರತಿಮ ವೀರ, ಲೇ. ಮಗು, ಪು. ೫೩.

ಪ್ರಭುತ್ವವನ್ನು ಔರಂಗಜೇಬನು ಗೌರವಿಸಿದ ದಾಖಲೆ ಇದೆ ಮತ್ತು ಅವನಿಗೆ "ರಾಜಾ ಜಗದೇವ" ಎಂಬು ಬಿರುದು ನೀಡಿ ಸತ್ಕರಿಸಿದ ಉಲ್ಲೇಖವಿದೆ.

ಕವಿ–ರಾಜ–ಕನಸುಗಾರ: ಮಹಾಕವಿ ಷಡಕ್ಷರಿಯೊಂದಿಗೆ ನಡೆದ ಮಾತುಕತೆಗಳ ನಡುವೆ, ಷಡಕ್ಷರಿ ಚಿಕ್ಕದೇವರಾಜನಲ್ಲಿ – "ಈ ಸಮಸ್ಯೆಗಳ ನಡುವೆಯೂ ನಿಮ್ಮೊಳಗಿರುವ ಕವಿ ಇನ್ನೂ ಬದುಕಿದ್ದನೋ! ಆತನೂ ರಾಜನಾಗಿ ಬಿಟ್ಟು ಲೇಖನಿಯನ್ನು ಎಸೆದು ಎಲ್ಲಿ ಖಡ್ಗವನ್ನು ಹಿಡಿದು ಬಿಟ್ಟಿದ್ದಾನೋ ಎಂದುಕೊಂಡು ಬಿಟ್ಟಿದ್ದೆ. ಅಥವಾ ರಾಜ ಚಿಕ್ಕದೇವರಾಜ ಚಕ್ರವರ್ತಿಯಾಗುವ ಕನಸಿನಲ್ಲಿ, ಕನಸುಗಾರ ಚಿಕ್ಕದೇವರಾಜನನ್ನು ಈತ ನನ್ನ ಶತ್ರು ಎಂದು ಬಗೆದು ಕೊಂದುಬಿಟ್ಟರಬೇಕು ಎಂದುಕೊಂಡಿದ್ದೆ.

"ನೀವು ಚಕ್ರವರ್ತಿಗಳಿಗಿಂತ ಯಾವುದರಲ್ಲಿ ಕಡಿಮೆಯಿದ್ದೀರಿ? ನಿಮ್ಮಲ್ಲಿರುವ ಕಲೆ, ಸಂಸ್ಕೃತಿ, ಹೃದಯ ವೈಶಾಲ್ಯ, ರಚಿತ ಕತೆಗಳು ಯಾವ ಚಕ್ರವರ್ತಿಗಳಿಗೆ ತಾನೇ ಕಡಿಮೆ ಇವೆ? ಶ್ರೀಮಂತವಾದ ಧಾರ್ಮಿಕ ಪರಂಪರೆ ಇದೆ. ಸ್ವತಃ ತಾವೇ ದೈವಭೀರುವಷ್ಟೇ ಅಲ್ಲ–ಕಲಿ, ಕವಿ ಎರಡೂ ಆಗಿದ್ದೀರಿ. ಮಂತ್ರಿ ಮಹೋದಯರಂತೂ ಒಬ್ಬರನ್ನು ಒಬ್ಬರು ಒಂದೊಂದು ಅಂಶದಲ್ಲಿ ಮೀರಿಸುವಂತಹವರು. ಒಂದು ಆದರ್ಶ ರಾಜ್ಯ ಎನ್ನುವುದು ಇದಕ್ಕಿಂತ ಬೇರೆಯಾಗಿರಲು ಸಾಧ್ಯವೇನೂ?"

ಖಾಸಿಂಖಾನನ ಈ ಮಾತುಗಳಿಂದ ಚಿಕ್ಕದೇವರಾಜ ಸಂಪ್ರೀತನಾಗಿದ್ದ. ಒಬ್ಬ ಚಕ್ರವರ್ತಿಯ ಪ್ರತಿನಿಧಿಯಾಗಿ ಆಡಬಹುದಾಗಿದ್ದಂತಹ ಯಾವುದೇ ವ್ಯಾವಹಾರಿಕ ಸೂಕ್ಷ್ಮತೆಗಳೂ ಆತನ ಮಾತುಗಳಲ್ಲಿ ಕಂಡಬರದೇ, ಆಪ್ತ ಸ್ನೇಹಿತನೊಬ್ಬನ ಹೃದಯದಿಂದ ಬರಬಹುದಾದಂತಹ ಸಹಜ ಮಾತುಗಳಂತೆ ಕಂಡುಬರುತ್ತಿದ್ದವು. (ಪು.ಸಂ. ೨೮೫)

ಚಿಕ್ಕದೇವರಾಜನು ಕವಿಯಾಗಿ 'ಗೀತಗೋಪಾಲ' ಚಿಕ್ಕದೇವರಾಜ ಬಿನ್ನಪಂ' ಶೂದ್ರಾಚಾರ ನಿರ್ಣಯ ಮುಂತಾದ ಕೃತಿಗಳನ್ನು ಬರೆದಿದ್ದಾನೆ. ಚಿಕ್ಕದೇವರಾಜನ ಸಾಹಿತ್ಯ ಪರಿಪೋಷಣೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಮನಿಸುವಂತದ್ದು, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಮಲ್ಲಿಕಾರ್ಜುನ, ಚಿದಾನಂದ, ಮಲ್ಲರಸ, ತಿಮ್ಮಕವಿ, ಹೊನ್ನಮ್ಮ ಮುಂತಾದವರಿಗೆ ಆಶ್ರಯ ನೀಡಿ ಚಿಕ್ಕದೇವರಾಜ ನೂತನ 'ಸಾಹಿತ್ಯಬ್ರಹ್ಮ' ಎಂದು ಪ್ರಸಿದ್ಧನಾದ, ಮಹಾಕವಿ ಷಡಕ್ಷರಿಯ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಾಹಿತ್ಯೋತ್ಸವದಲ್ಲಿ ಎಲ್ಲ ಕವಿಗಳು ತಮ್ಮ ತಮ್ಮ ಕೃತಿಗಳನ್ನು ವಾಚನ ಮಾಡುವ ಗೋಷ್ಠಿಯನ್ನು ಏರ್ಪಡಿಸಿದ್ದರು.

ಆ ಒಂದು ಸಾಹಿತ್ಯ ಗೋಷ್ಠಿಯಲ್ಲಿ ಸಾಹಿತ್ಯೋತ್ಸವವನ್ನು ಉದ್ಘಾಟಿಸುವ ಯೋಗ 'ಸರಸಸಾಹಿತ್ಯದ ವರದೇವಿ' ಎಂದು ಗುರು ಸಿಂಗರಾರ್ಯರಿಂದಲೇ ಹೊಗಳಿಸಿಕೊಂಡ ಹೊನ್ನಮ್ಮನದು, ಮಹಾರಾಜರವರಿಂದಲೇ ಹೊಗಳಿಸಿಕೊಂಡ ಹೊನ್ನಮ್ಮನದು, ಮಹಾರಾಜರವರಿಂದಲೇ ಉದ್ಘಾಟನೆಯಾಗಲಿ ಎಂಬ ಸಭಿಕರ ಆಶಯವನ್ನು ಷಡಕ್ಷರಿ ನಿವಾರಿಸಿ ಈ ಅವಕಾಶ ಕಟ್ಟಿಸುತ್ತಾನೆ.

ಇದು ಚಿಕ್ಕದೇವರಾಜ ಮತ್ತು ಹೊನ್ನಮ್ಮನ ನಡುವೆ ಇದ್ದ ಸಂಬಂಧದ ಸ್ವರೂಪವೆಂಥದ್ದು? ಎಂಬ ಪ್ರಶ್ನೆಯನ್ನು ಕಾದಂಬರಿಕಾರರು ಎತ್ತಿದ್ದನ್ನೂ ಇಲ್ಲಿ ನೆನಪಿಸಬಹುದು ಹಾಗೇ ಷಡಕ್ಷರಿಗಳಿಂದ ಮೊದಲು ವಾಚಿಸುವ ಪ್ರಸ್ತಾಪ ಚನ್ನಮ್ಮನಿಗೆ ಎಂದು ಪ್ರಾರಂಭ ಮಾಡಿದಾಗ ತನ್ನ ಹೆಸರು ಕೇಳಿ ಇಷ್ಟಿಷ್ಟೇ ಕಂಪಿಸತೊಡಗಿದಳು. ಹೊನ್ನಮ್ಮನ ನಾಲಿಗೆ ಬತ್ತತೊಡಗಿತು. ಆದರೂ ಎಲ್ಲರು ಮುಂದೆ ಎದ್ದು ನಿಲ್ಲುವುದು ಆಕೆಗೆ ಅನಿವಾರ್ಯ ಆಗಿತ್ತು. ಆಕೆಯ ಸ್ಥಿತಿ ದೇವಾಜಮ್ಮಣ್ಣಿಗೆ ಅರ್ಥವಾಯಿತು. ಸಭಾ ಮರ್ಯಾದೆಗೆ ತಕ್ಕುದಲ್ಲವೆಂದು ಅರಿತಿದ್ದರೂ, ಆಕೆ ಈಗ ಹೊನ್ನಮ್ಮನ ಸಹಾಯಕ್ಕೆ ಬಂದು "ಕಲಿತ ಬಿಜ್ಜೆಯ ಬಲ್ಲವರಿಗೆ ಕೇಳಿಪುದ್ಯೆಸೆ ಫಲ" ಎಂದು ನೀನೇ ಒಂದು ಕಡೆ ನಿನ್ನ ಕಾವ್ಯದಲ್ಲಿ ಬರೆದಿದ್ದೀಯಲ್ಲ. ಈಗ ಅಂತಹ ಸಂದರ್ಭ ಒದಗಿ ಬಂದಿದೆ. ಇದು ನಿನ್ನ ಬದುಕಿನ ಪುಣ್ಯ ವಿಶೇಷ ಎಂದು ದೇವಾಜಮ್ಮಣ್ಣಿ ಹೇಳುತ್ತಾಳೆ. ಇದು ಹೊನ್ನಮ್ಮ ಚಿಕ್ಕದೇವರಾಜ ಹಾಗೂ ದೇವಾಜಮ್ಮಣ್ಣಿಯ ಸಂಬಂಧದ ಸ್ವರೂಪವೆಂಥದು ಎಂದು ನೋಡಬಹುದಾಗಿದೆ.

ಒಂದು ಕಡೆ ಹೊನ್ನಮ್ಮಳೇ ದೇವಾಜಮ್ಮಣ್ಣಿಯಲ್ಲೊಮ್ಮೆ ವಿಜ್ಞಾಪಿಸಿಕೊಂಡಿರುವುದು ಉಂಟು. ಅರಮನೆಯ ದಾಸಿಯೊಬ್ಬಳಿಗೆ ಈ ಬ್ರಾಹ್ಮಣ ವಿದ್ಯೆಯನ್ನು ಕಲಿಸುತ್ತಿದ್ದಾನೋ, ಮತ್ತೇನನ್ನು ಕಲಿಸುತ್ತಿದ್ದಾನೋ! ಎಂದು ಹಾದಿಬೀದಿಯಲ್ಲಿ ಜನ ಆಡಿಕೊಳ್ಳುತ್ತಿದ್ದರಂತೆ. ಈ ಅಪವಾದ. ಮಹಾರಾಜರವರ ಮೇಲೂ ಇತ್ತು. (ಪು.ಸಂ. ೨೪೭)

ಸಿಂಗರಾರ್ಯನನ್ನು ಹೊನ್ನಮ್ಮಳಿಗೆ ಗುರುವಾಗಿಸಿದ್ದು ಸ್ವತಃ ಚಿಕ್ಕದೇವರಾಜನೇ "ಒಂದು ಸಾಮಾನ್ಯ ಹೆಣ್ಣು ನಿಮ್ಮಂತವರ ಪ್ರಭಾವದಿಂದ ದೊಡ್ಡ ಕವಯಿತ್ರಿಯಾಗುವುದಾದರೆ, ಏಕಾಗಬಾರದು? ಅದಕ್ಕಿಂತಲೂ ಪುಣ್ಯದ ಕೆಲಸ ಮತ್ತಾವುದಿದೆ? ಒಂದು ಕಾವ್ಯವನ್ನು ಸೃಷ್ಟಿಸುವುದಕ್ಕಿಂತ ಒಂದು ಜೀವನ ಕಾವ್ಯವನ್ನು ಸೃಷ್ಟಿಸುವುದು ಹೆಚ್ಚಿನ ಪುಣ್ಯದ ಕೆಲಸವಲ್ಲವೇ

ಸಿಂಗರಾರ್ಯ?" (ಪು.ಸಂ. ೧೨೨) ಇದು ಒಬ್ಬ ಕವಿಯ ಮನೋಧರ್ಮವನ್ನು ನೋಡಬಹುದಾಗಿದೆ.

ನಂತರ ಸಿಂಗರಾರ್ಯನಿಗೆ ಹೊನ್ನಮ್ಮ ಆಕೆ ಊಳಿಗದವಳು. . . ಕೆಳವರ್ಗದ ಸ್ತ್ರೀ, ಜನರ ಪ್ರತಿಕ್ರಿಯೆ ಹೇಗಿರಬಹುದು ಎಂಬುವ ಆತಂಕಗಳು, ಸಿಂಗರಾರ್ಯನಿಗೆ ಇರುತ್ತದೆ.

ಕೆಳಸ್ತರದವರು ಉಚ್ಚ ವರ್ಣದವರ ಮಟ್ಟಕ್ಕೆ ಏರಬಾರದು ಎನ್ನುವ ನಿಯಮವಾದರೂ ಎಲ್ಲಿದೆ? ನಿನ್ನಂತಹವನೂ ಮನಸ್ಸು ಮಾಡದಿದ್ದರೆ ಇನ್ನಾರು ತಾನೇ ಈ ಕೆಲಸಕ್ಕೆ ಮುಂದೆ ಬರುತ್ತಾರೆ?' ಆಕೆಗೆ ನೀನು ಅಂತಹ ವಿದ್ಯೆಯನ್ನು ಕೊಡುವುದರಿಂದ ಇಡೀ ಒಂದು ವರ್ಗಕ್ಕೆ ನೈತಿಕ ಸ್ಥೈರ್ಯವನ್ನು ತುಂಬಿದಂತಾಗುತ್ತದೆ. (ಪು.ಸಂ. ೧೨೩) ಇದು ಚಿಕ್ಕದೇವರಾಜರಲ್ಲಿ ಇದ್ದಂತಹ ಪ್ರಗತಿಪರ ಚಿಂತನೆಯನ್ನು ಕಾದಂಬರಿ ನಿರೂಪಿಸುತ್ತದೆ.

ಚಿಕ್ಕದೇವರಾಜರ ವಂಶದ ಬಗ್ಗೆ ಕೇಳಿಬರುತ್ತಿದ್ದ ಒಡಕು ಧ್ವನಿಗಳನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಚಿಕ್ಕದೇವರಾಜರು ಯದುವಂಶದವರು ಎನ್ನುವುದು ಪ್ರಸಿದ್ಧ ಇರುವ ಹಾಗೆ, ಅವರು ಕುಂಬಾರರ ಜಾತಿಯವರು ಎಂಬ ಅಪಸ್ವರ ಕೂಡಾ ಇತ್ತು. ವಿಶಾಲಕ್ಷಪಂಡಿತ ಇದಕ್ಕೆ ಚಾರಿತ್ರಿಕ ಪ್ರಜ್ಞೆಯ ಕೊರತೆಯನ್ನು ಮುಂದೊಡ್ಡುತ್ತಾನೆ. ಒಟ್ಟಿಗೆ ತಿರುಮಲಾರ್ಯ ಕವಿಗಣವನ್ನು ಕುರಿತು ನೀವು ಯಾವುದೇ ಕೃತಿಯನ್ನು ಬರೆಯಿರಿ, ಅದರಲ್ಲಿ ನಮ್ಮ ರಾಜರ ವಂಶಾವಳಿಯನ್ನು ಮಾತ್ರ ತಪ್ಪದೆ ಏಕರೂಪದಲ್ಲಿ ಬರೆಯಿರಿ ಎಂದು ಸೂಚನೆ ಕೊಟ್ಟಿದ್ದನ್ನು ತಿಳಿಸುತ್ತಾನೆ.

ಧರ್ಮ ಸಂಘರ್ಷದ ವಿಚಾರ

ಸಿಂಹಾಸನ ಉತ್ತರಾಧಿಕಾರತ್ವದ ಸಂದರ್ಭದಲ್ಲಿ ಚಿಕ್ಕದೇವರಾಜರ ಮಾನವೀಯ ಗುಣಗಳನ್ನೇ ಅಪಪ್ರಚಾರಕ್ಕೆ ಬಳಸಲಾಗುತ್ತಿತ್ತು. ಅವನು ಬೇರೆ ಬೇರೆ ಧರ್ಮದವರನ್ನು ಅತಿಯಾಗಿ ಹಚ್ಚಿಕೊಂಡಿದ್ದಾನೆ ಎನ್ನುವುದು ಒಂದು ಪರಮಧರ್ಮ ಸಹಿಷ್ಣುತೆ ಮೈಸೂರು ಅರಸರಿಗೆ ಸಹಜಗುಣ ಎನ್ನಲಾಗಿದೆ.

ಯಳಂದೂರಿನ ಷಡಕ್ಷರ ಕವಿ ಪ್ರವಚನ ನೆಪದಲ್ಲಿ ವೀರಶೈವಧರ್ಮ ಪ್ರಚಾರ ಮಾಡುತ್ತಿದ್ದಾನೆಂದು ಆರೋಪ. ವಿಶಾಲಾಕ್ಷ ಪಂಡಿತನಿಗೆ ತನ್ನ ಬಾಲ್ಯದಲ್ಲಿ ನೇಮಿಚಂದ್ರನ ಲೀಲಾವತಿ ಪ್ರಬಂಧಂ ಕಾವ್ಯವನ್ನು ಆನೆಯ ಮೇಲಿಟ್ಟು ಜೈನಸಮುದಾಯ ಮೆರವಣಿಗೆ

ನಡೆಸಿದಾಗ ಕವಿ ಷಡಕ್ಷರಿಗಳ ಮಠದ ಸಮೀಪ ವೀರಶೈವ ಧರ್ಮದ ಯುವಕರು ದಾಂಧಲೆ ಮಾಡಿದ ಘಟನೆ ನೆನಪಿಗೆ ಬರುತ್ತದೆ. ವೀರಶೈವರ ಬಗ್ಗೆ ಅಸಹನೆ ಅವನ ಮನಸ್ಸಿನ ಮೂಲೆಯಲ್ಲಿ ಬೀಜರೂಪದಲ್ಲಿದ್ದುದನ್ನು ಕೃತಿಕಾರರು ಹೀಗೆ ಕಾಣಿಸುತ್ತಾರೆ.

ಈ ಸಂದರ್ಭದಲ್ಲಿ ರಾಜ್ಯದ ಬೊಕ್ಕಸ ತುಂಬುವ ಮಾರ್ಗೋಪಾಯಗಳಲ್ಲಿ ರೈತ ಸಮುದಾಯದ ಮೇಲೆ ಭೂಕಂದಾಯವನ್ನು ಹೆಚ್ಚಿಸುವ ವಿವಿಧ ತೆರಿಗೆ ಹೇರುವ ಯೋಜನೆಯನ್ನು ವಿಶಾಲಾಕ್ಷಪಂಡಿತ ಜಾರಿಗೊಳಿಸುತ್ತಾನೆ. ಇದರಿಂದ ಚಿಕ್ಕದೇವರಾಜ 'ನವಕೋಟಿ ನಾರಾಯಣ'ನಾಗುವುದಾಯ್ತು. ಕ್ರಮೇಣ ತೆರಿಗೆಯ ಉರಿ ರೈತರನ್ನು ಮಠಮಾನ್ಯದರವನ್ನು ತಟ್ಟುತ್ತದೆ. ಈ ನಮ್ಮ ವಿವಿಧ ಚಳವಳಿಗಳ ಮಾದರಿಯಲ್ಲೇ ಜನರನ್ನು ಎತ್ತಿಕಟ್ಟುವ ಸಲುವಾಗಿ ರಾಜನ ವಿರುದ್ಧ ವಿಶಾಲಾಕ್ಷ ಪಂಡಿತನ ವಿರುದ್ಧ ಲಾವಣಿಗಳು ಸೃಷ್ಟಿಯಾದವು. ಸಂತೆ, ಜಾತ್ರೆಗಳಲ್ಲಿ ಜನರನ್ನು ಎಚ್ಚರಗೊಳಿಸುವ ಕಾರ್ಯದಲ್ಲಿ ಯುವಕರು ತೊಡಗಿಸಿಕೊಳ್ಳುತ್ತಾರೆ.

ತೆರಿಗೆಯಂತೆ ತೆರಿಗೆಯು
ಎಂಥ ತೆರಿಗೆಯೋ?
ಮನೆಯ ತೆರಿಗೆ
ಹುಲ್ಲು ತೆರಿಗೆ
ಎಂಥಾ ತೆರಿಗೆಯೋ? ರಾಜನ ಹೆಣದ ತೆರಿಗೆಯೋ।
ಮದುವೆ ತೆರಿಗೆ
ಒಸಗೆ ತೆರಿಗೆ
ಬಸುರಿ ತೆರಿಗೆ
ಎಂಥಾ ತೆರಿಗೆಯೋ? ಪಂಡಿತನ ಮರಣ ತೆರಿಗೆಯೋ॥

ಕಾದಂಬರಿಯಲ್ಲಿ ಸುಮಾರು ಹದಿನೆಂಟು ಇಪ್ಪತ್ತು ಪುಟಗಳಲ್ಲಿ ವಿಸ್ತಾರಗೊಂಡಿರುವ ಈ ರೀತಿಯ ಸಂಘಟನೆ ಪ್ರತಿಭಟನೆಯ ಚಿತ್ರಣ ಅತ್ಯಂತ ಸಮರ್ಥವಾಗಿ ಚಿಕ್ಕದೇವರಾಜನ ದಕ್ಷ ಆಡಳಿತದ ಒಳಗೇ ಇದ್ದ ಸಾಮಾಜಿಕ- ಧಾರ್ಮಿಕ ಕ್ಷೋಭೆಯ ಅಂತರಗಂಗೆಯನ್ನು ಪರಿಚಯಿಸುತ್ತದೆ.

ಚಿಕ್ಕದೇವರಾಜ ಒಡೆಯರ ಸಾಧನೆಗಳು ಸೈನಿಕ ವಲಯದಂತೆಯೇ ಆಡಳಿತ ವಲಯದಲ್ಲಿಯೂ ಅದ್ಭುತವಾಗಿದ್ದವು. ಚಿಕ್ಕದೇವರಾಜರು ಅತ್ಯುತ್ತಮ ಆಡಳಿತಗಾರರಾಗಿದ್ದು

ಆಡಳಿತವನ್ನು ಉತ್ತಮಗೊಳಿಸುವಲ್ಲಿ ಮತ್ತು ಜನತೆಯ ಹಿತಸಾಧನೆಯಲ್ಲಿ ಅತೀವ ಆಸಕ್ತಿ ತೋರಿಸಿದ್ದರು. ಅವರ ಆಡಳಿತ ವಲಯದ ಸಾಧನೆಗೆ ಮುಖ್ಯವಾಗಿ ಅವರ ಮಂತ್ರಿ ಪರಷತ್ತು ಮತ್ತು ಅದರಲ್ಲದ್ದ ಪ್ರತಿಭಾಸಂಪನ್ನ ವ್ಯಕ್ತಿಗಳಾಗಿದ್ದ ವಿಶಾಲಾಕ್ಷ ಪಂಡಿತ, ತಿರುಮಲ ಅಯ್ಯಂಗಾರ್ ಷಡಕ್ಷರಯ್ಯ, ಚಿಕ್ಕುಪಾಧ್ಯಾಯ ಮತ್ತು ಲಿಂಗಣ್ಣಯ್ಯ ಕಾರಣರಾಗಿದ್ದರು.

ಚಿಕ್ಕದೇವರಾಜರು ತೆರಿಗೆಗಳನ್ನು ಎಲ್ಲರ ಮೇಲೆ ಸಮಾನವಾಗಿ ಹೊರಿಸಿ ರಾಜ್ಯದಲ್ಲಿ ಯಾರೂ ಹೆಚ್ಚು ಶ್ರೀಮಂತರಾಗದಂತೆ ನೋಡಿಕೊಳ್ಳುತ್ತಿದ್ದರು. ಅಂಚೆ ಪದ್ಧತಿಯನ್ನು ರಾಜ್ಯಾದಂತ ಜಾರಿಗೆ ತರಲಾಯಿತು. ಇವರ ಕಾಲದಲ್ಲಿ ಜಾರಿಗೆ ಬಂದ ಆಡಳಿತ ಸುಧಾರಣೆಗಳಲ್ಲಿ ಬಹು ಮುಖ್ಯವಾದವುಗಳೆಂದರೆ 'ಅಠಾರ ಕಛೇರಿ' ಮತ್ತು 'ಬಾರಾಬಲೂತಿ' ಪದ್ಧತಿಗಳು. ಇವೆರಡು ಪದ್ಧತಿಗಳು ಮೊಗಲ್ ಮೂಲದಿಂದ ಬಂದಿರಬಹುದೆಂದು ಊಹಿಸಲಾಗಿದೆ.

ರಾಜ್ಯದ ಆಡಳಿತ ಸುವ್ಯವಸ್ಥೆಗೆ ೧೮ ಆಡಳಿತ ವಿಭಾಗಗಳನ್ನು ಮತ್ತು ೧೮ ಮಂದಿ ಮುಖ್ಯ ಆಡಳಿತ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಈ ವಿಭಾಗಗಳಿಗೆ ಚಾವಡಿಗಳೆಂಬ ಹೆಸರಿದ್ದಿತು. ಚಿಕ್ಕದೇವರಾಜ ಒಡೆಯರು ಗ್ರಾಮಗಳ ಆಡಳಿತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಗ್ರಾಮಗಳ ಆಡಳಿತಕ್ಕಾಗಿ 'ಬಾರಾಬಲೂತಿ' ಪದ್ಧತಿಯನ್ನು ಜಾರಿಗೆ ತಂದರು. ಇದರಲ್ಲಿ ೧೨ ಮಂದಿ ಗ್ರಾಮಾಧಿಕಾರಿ ಗಳಿದ್ದರು. ಅವರೆಂದರೆ (ಗೌಡ, ಶಾನುಭೋಗ, ತೋಟಿ, ತಳವಾರ, ನೀರಗಂಟಿ, ಕಮ್ಮಾರ, ಅಗಸ, ಬಡಗಿ, ಜೋಯಿಸ, ಕುಂಬಾರ, ಕ್ಷೌರಿಕ ಮತ್ತು ಅಕ್ಕಸಾಲಿಗ ಇವರು ಗ್ರಾಮದ ಆಡಳಿತಕ್ಕೆ ಹೊಣೆಯಾಗಿದ್ದರು.

ಚಿಕ್ಕದೇವರಾಜ ಒಡೆಯರು ಭೂಕಂದಾಯ ಪದ್ಧತಿಯನ್ನು ಆಮೂಲಾಗ್ರವಾಗಿ ಸುಧಾರಿಸಿದರು. ಭೂಮಿಯನ್ನು ಸರ್ವೇಕ್ಷಣ ಮಾಡಿಸಿ ಅದರ ಉತ್ಪಾದನೆಗೆ ಅನುಗುಣವಾಗಿ ಕಂದಾಯ ನಿಗದಿಪಡಿಸಿದರು. ರೈತರು ವಾರ್ಷಿಕ ಉತ್ಪತ್ತಿಯ ೪ ಭಾಗವನ್ನು ಕಂದಾಯವಾಗಿ ನಿಡಬೇಕಾಗಿದ್ದಿತು. ಇವರು ರಾಜ್ಯದ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತು ಕ್ರಮಗಳನ್ನು ಕೈಗೊಂಡು ಅವರ ಆಲಸ್ಯ ಮತ್ತು ಭ್ರಷ್ಟಾಚಾರತನವನ್ನು ಹೋಗಲಾಡಿಸಲು ಕ್ರಮಕೈಗೊಂಡಿದ್ದರು. ಅಧಿಕಾರಿಗಳ ವೇತನವನ್ನು ಅರ್ಧ ಹಣರೂಪದಲ್ಲಿ ಉಳಿದ ಅರ್ಧವನ್ನು ದವಸ ಧಾನ್ಯಗಳ ರೂಪದಲ್ಲಿ ಕೊಡುವ ವ್ಯವಸ್ಥೆ ಇದ್ದಿತು. ಇಂದಿನ ವೇತನ, ಬೆಲೆ ಏರಿಕೆ ಮತ್ತು ತುಟ್ಟಿಭತ್ಯೆ ಏರಿಕೆಗಳ ಸಮಸ್ಯೆಗಳ ನಿವಾರಣೆಗೆ ಇದು

ಅನುಕರಣೀಯವೆಂದು ತೋರುತ್ತದೆ. ಈ ವ್ಯವಸ್ಥೆ ರಾಜರ ದೂರದೃಷ್ಟಿಗೆ ನಿದರ್ಶನವಾಗಿದ್ದಿತು. ಅಧಿಕಾರಿಗಳು ತಮ್ಮ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡುವಂತಿರಲಿಲ್ಲ. ತೆರಿಗೆಗಳ ವ್ಯವಸ್ಥಿತ ವಸೂಲಿ ಮತ್ತು ನಿಯತ ವೆಚ್ಚಗಳಿಂದಾಗಿ ಚಿಕ್ಕದೇವರಾಜ ಒಡೆಯರು ತಮ್ಮ ಅರಮನೆಯ ಭಂಡಾರದಲ್ಲಿ ೯ ಕೋಟಿ ವರಹಗಳನ್ನು ಶೇಖರಿಸಿಟ್ಟಿದ್ದರೆಂದು ತಿಳಿದುಬಂದಿದೆ. ಆದ್ದರಿಂದಲೇ ಇವರಿಗೆ 'ನವಕೋಟಿನಾರಾಯಣ' ಎಂಬ ಬಿರುದು ಬಂದಿತು.

ಹೀಗೆ ಚಿಕ್ಕದೇವರಾಜ ಒಡೆಯರು ರೈತರು, ಶ್ರೀಮಂತರು, ಸಮಾಜದ ಪ್ರತಿಯೊಬ್ಬರಿಗೂ ತೆರಿಗೆಯನ್ನು ವಿಧಿಸಿ ಮತ್ತು ರಾಜ್ಯದ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತು ಕ್ರಮಗಳನ್ನು ಕೈಗೊಂಡು ವಿವಿಧ ರೀತಿಯ ತೆರಿಗೆಯನ್ನು ವಸೂಲಿ ಮಾಡಿ ರಾಜ್ಯದ ಆದಾಯವನ್ನು ಹೆಚ್ಚಿಸುತ್ತಿದ್ದರು.[೮]

ಜಂಗಮರೊಬ್ಬರು ಹೇಳಿದ ಹಾಗೆ, ಒಟ್ಟು ಸಮಸ್ಯೆ 'ರಾಜದಂಡ' ಮತ್ತು 'ಧರ್ಮದಂಡ'ಗಳ ನಡುವಿನ ಸಮಸ್ಯೆಯಾಗುತ್ತದೆ. ವಿಶಾಲಾಕ್ಷ ಪಂಡಿತ ರೈತರ ಜೊತೆಗೂಡಿದ ಸುಮಾರು ನಾಲ್ಕುನೂರು ಜನ ಜಂಗಮರನ್ನು ಕೊಲ್ಲಿಸಿ, ರಾಜದಂಡ ಮೇಲುಗೈ ಸಾಧಿಸಿತೆಂದು ಭಾವಿಸುತ್ತಾನೆ. ಪರಿಸ್ಥಿತಿಯ ಒತ್ತಡದಲ್ಲಿ ವಿಶಾಲಾಕ್ಷ ಪಂಡಿತನು ಕೊಡುವ ವಿವರಗಳನ್ನು ರಾಜ ಸರಿಯೆಂದೇ ತಿಳಿಯುತ್ತಾನೆ. ಹಿಂದೆ ದೇವರಾಜ ಒಡೆಯರು ಹೇಳಿದ ಮಾತುಗಳು – ರಾಜಕೀಯ ಷಡ್ಯಂತ್ರದಲ್ಲಿ ಕೆಲವೊಮ್ಮೆ ರಾಜನಾದವನು ಬಲಿಪಶುವಾಗಿ ಬಿಡುತ್ತಾನೆ. ಮೋಹಗಳಿಂದ ದೂರನಾಗದಿದ್ದರೆ, ಧರ್ಮದಿಂದ ರಾಜ್ಯವಾಳುವುದು ಕಷ್ಟವಾಗುತ್ತದೆ ಎನ್ನುವುದು ಇಲ್ಲಿಗೆ ಅನ್ವಯವಾಗುತ್ತದೆ. ಮುಂದೆ ಪ್ರತೀಕಾರದ ರೀತಿಯಲ್ಲಿ ವಿಶಾಲಾಕ್ಷ ಪಂಡಿತನ ಕೊಲೆಯಾದಾಗ ಚಿಕ್ಕದೇವರಾಜ ಕೇಳುವುದುಂಟು ಪಂಡಿತರೇ.... ಏನಾಯಿತು... ಯಾರು ಇದಕ್ಕೆ ಕಾರಣರು[೯] ಪ್ರಧಾನಿಯ ಕೊಲೆ ಯತ್ನಕ್ಕಷ್ಟೇ ಅಲ್ಲ, ಧಾರ್ಮಿಕ ಕ್ಷೋಭೆಯ ಒಟ್ಟಾರೆ ಪರಿಸ್ಥಿತಿಗೂ, ತನ್ನ ಅಂತರಂಗಕ್ಕೂ ಕೇಳಲಾದ ಪ್ರಶ್ನೆ ಇದು:

---

೮. ಕರ್ನಾಟಕದ ಇತಿಹಾಸ ಪರಿಚಯ, ಲೇ. ಪ್ರೊ. ಹೆಚ್.ರಾಮಲಿಂಗಪ್ಪ, ಕಲಾ ಪ್ರಕಾಶನ, ಬೆಂಗಳೂರು, ೧೯೯೯, ಪು. ೧೭೦.

೯. ಅಪ್ರತಿಮ ವೀರ, ಲೇ. ಮ.ಗು., ಪು. ೨೮೨.

ಚಿಕ್ಕದೇವರಾಜನ ಆರೋಗ್ಯ ಬಿಗಡಾಯಿಸುತ್ತಿದ್ದ ದಿನಗಳಲ್ಲಿ ಪ್ರಧಾನಿ ತಿರುಮಲಾರ್ಯ ಸಹಜವಾಗಿಯೇ ರಾಜ್ಯದ ಭವಿಷ್ಯದ ಚಿಂತೆಯಲ್ಲಿ ಇರುತ್ತಾನೆ. ದೈಹಿಕ ನ್ಯೂನತೆ ಇರುವ ಮಗ ಎರಡನೆಯ ಕಂಠೀರವನ ಬದಲು ಯಾರಾದರೂ ಸಮರ್ಥ ಯುವಕನನ್ನು ಹುಡುಕಿ ದತ್ತು ತೆಗೆದುಕೊಳ್ಳುವುದು ಸೂಕ್ತ ಎಂಬ ಸಲಹೆ ಚಿಕ್ಕದೇವರಾಜನಿಗೆ ಅಪ್ರಿಯವಾಗುತ್ತದೆ. ದೊಡ್ಡದೇವರಾಜ ತನ್ನ ಮಗನನ್ನು ಪಟ್ಟಕ್ಕೇರಿಸದೆ ಚಿಕ್ಕದೇವರಾಜನಿಗೆ ಪಟ್ಟಕಟ್ಟಿದ್ದನ್ನು ನೆನಪಿಸಿದರೂ, ಚಿಕ್ಕದೇವರಾಜನನ್ನು ಮೋಹದಿಂದ ಬಿಡುಗಡೆಗೊಳಿಸಲಾಗುವುದಿಲ್ಲ. ಅಪ್ರತಿಮವೀರ ಚರಿತೆಯ ಕೊನೆ ಪುಟಗಳನ್ನು ಬರೆದು ಮುಗಿಸಿ ರಾಜನಿಗೆ ಅರ್ಪಿಸಬೇಕೆಂದಿದ್ದ ತಿರುಮಲಾರ್ಯನಲ್ಲಿ ವಿಷಾದ ಆವರಿಸುತ್ತದೆ. ಚಿಕ್ಕದೇವರಾಜನಾಡಿದ್ದ ಮಾತುಗಳು ನೆನೆಪಿಗೆ ಬರುತ್ತವೆ. "ಮನುಷ್ಯನ ಅಂತರಂಗದ ಸಾಮರ್ಥ್ಯವೇ ನಿಜವಾದ ಸಾಮರ್ಥ್ಯ. ಈ ಸಾಮರ್ಥ್ಯದ ಮುಂದೆ ಉಳಿದ ಸಾಮರ್ಥ್ಯಗಳೆಲ್ಲವೂ ಉಸುಕಿನಲ್ಲಿ ನಿರ್ಮಿಸಿದ ಕೊಡೆಯಂತೆ" ಇದನ್ನು ಕುರಿತು "ಆಹಾ–ಎಂತಹ ಮಾತುಗಳು ಅವು, ಆದರೆ.... ಆದರೆ... ಚಿಕ್ಕದೇವರಾಜ ತನ್ನ ಮಾತುಗಳಿಗೆ ತಾನೇ ಒಂದು ಜೀವಂತ ಪ್ರತಿನಿಧಿಯಾಗುವ ಅವಕಾಶವನ್ನು ತಪ್ಪಿಸಿಕೊಂಡ. ಲೋಕದ ಕಣ್ಣಿನಲ್ಲಿ ಅವನು ವೀರನಾದ. ಅಪ್ರತಿಮ ವೀರನಾದ, ಆದರೆ ಅಂತರಂಗದಲ್ಲಿ ಪುತ್ರಮೋಹ ಅವನನ್ನು ಒಬ್ಬ ಸಾಮಾನ್ಯನಲ್ಲಿ ಸಾಮಾನ್ಯನನ್ನಾಗಿಸಿ ಬಿಟ್ಟಿತು. ಒಟ್ಟಾರೆ ಹೇಳುವುದಾದರೆ 'ದೊಡ್ಡ' ದೇವರಾಜನ ದೂರದೃಷ್ಟಿಯ ನಿರ್ಧಾರಗಳ ಮುಂದೆ ಈತ 'ಚಿಕ್ಕ'ದೇವರಾಜನೇ ಆಗುತ್ತಾನೆ.[೧೦]

ಪುತ್ರಮೋಹ ಅವನನ್ನು ಒಬ್ಬ ಸಾಮಾನ್ಯನಲ್ಲಿ ಸಾಮಾನ್ಯನನ್ನಾಗಿಸಿಬಿಟ್ಟಿತು. ಪ್ರಾಯಃ ನಾನು ದತ್ತಕದ ವಿಷಯವನ್ನು ಪ್ರಸ್ತಾಪಿಸದಿದ್ದರೆ, ಅವನು ಇಷ್ಟು ಬೇಗ ದೈಹಿಕವಾಗಿ ಜರ್ಝರಿತನಾಗುತ್ತಿರಲಿಲ್ಲವೇನೋ ಎನ್ನಿಸುತ್ತಿದೆ. ಇಂದಿನ ಅವನ ಯಾತನೆಗೆ ನನ್ನ ಕಾಣಿಕೆಯೂ ಸೇರಿಕೊಂಡಂತೆ ಕಾಣುತ್ತದೆ! ಎಂದು ಚಡಪಡಿಸಿದ, ಮರುಕ್ಷಣದಲ್ಲಿಯೇ "ಇಲ್ಲ... ಇಲ್ಲ... ಇಡೀ ರಾಜ್ಯದ ಹಿತದೃಷ್ಟಿಯಿಂದ ನನ್ನ ತೀರ್ಮಾನ ಸರಿಯಾದುದ್ದೇ ಆಗಿದೆ. ರಾಜನೊಬ್ಬನ ಇಂದಿನ ನೋವು, ನಾಳೆ ಇಡೀ ಪ್ರಜೆಗಳ ನಿರಂತರವಾದ ಯಾತನೆಗೆ ದಾರಿಮಾಡಿಕೊಡಬಾರದು ಎನ್ನುವುದು ನನ್ನ ದೃಷ್ಟಿ. ಇದರಲ್ಲಿ ನನ್ನ ಸ್ವಾರ್ಥ ಏನೂ ಇಲ್ಲ" ಎಂದು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾ ತನ್ನ ಕೃತಿಯ ಕಟ್ಟನ್ನು ಕೈಗೆತ್ತಿಕೊಂಡು

೧೦. ಮಹಾಮನೆ, ಅಭಿನಂದನಾ ಗ್ರಂಥ, ಡಾ॥ ಎಂ. ಎಸ್. ವೇದಾ, ಪುಟ ೩೨

ರಾಜನನ್ನು ಕಾಣಲು ಹೊರಟು ನಿಂತ 'ಅಪ್ರತಿಮೀರ' "ಅಪ್ರತಿಮವೀರ" ಎಂದು ಮತ್ತೆ ಮತ್ತೆ ಎಚ್ಚರಿಸಿದ. ಅವನ ಧ್ವನಿಯಲ್ಲಿ ವಿಷಾದದ ಛಾಯೆ ಬೆರೆತಿತ್ತು. ಅಷ್ಟರಲ್ಲಿ ಸೇವಕನೊಬ್ಬ ತಾವು ಈಗಲೇ ಬರಬೇಕಂತೆ ರಾಜವೈದ್ಯರು ಕಳುಹಿಸಿದ್ದಾರೆ ಎಂದು ಓಡಿ ಬಂದು ಒಂದೇ ಉಸುರಿಗೆ ಹೇಳಿದ. ಅವನ ಧ್ವನಿ ಒಂದು ರೀತಿಯ ಭಯಮಿಶ್ರಿತವಾಗಿತ್ತು. ಏಕೆ ಎಂದು ಕೇಳುವ ಕಾರಣವಿರಲಿಲ್ಲ. ಅವನಿಗೆ ಎಲ್ಲವೂ ಸ್ಪಷ್ಟವಾಗಿತ್ತು. ಗ್ರಂಥದ ಕಟ್ಟನ್ನು ಹಾಗೆಯೇ ಹಿಡಿದು, ತಿರುಮಲಾರ್ಯನು ಅಲ್ಲಿಗೆ ಧಾವಿಸಿದ.

ಚಿಕ್ಕದೇವರಾಜ, ಕಂಠೀರವನ ಕೈಯನ್ನು ತನ್ನ ಬಲಗೈಯಲ್ಲಿ ಹಿಡಿದುಕೊಂಡು ಹಾಗೆಯೇ ಮಲಗಿದ್ದ, ದೇವರಾಜಮ್ಮಣಿ ಅವನ ತಲೆಯ ಬಳಿ ಕುಳಿತಿದ್ದಳು. ಅವನು ಉಸಿರಾಡುವುದಕ್ಕೆ ತನ್ನೆಲ್ಲಾ ಶಕ್ತಿಯನ್ನು ವ್ಯಯ ಮಾಡಿದರೂ ಸೋಲುತ್ತಿರುವಂತೆ ಭಾಸವಾಗುತ್ತಿತ್ತು. ತಿರುಮಲಾರ್ಯನನ್ನು ಕಂಡ ತಕ್ಷಣ, ರಾಜವೈದ್ಯರ ಕಣ್ಣೀರು ಕಣ್ಣೀರು ತುಂಬಿಕೊಂಡು "ಎಲ್ಲಾ ಆ ಪರಮಾತ್ಮನಿಗೆ ಬಿಟ್ಟಿದ್ದು" ಎಂದು ಚುಟುಕಾಗಿ ಮಾತನಾಡಿ, ಮತ್ತೆ ಶುಶ್ರೂಷೆಗೆ ತೊಡಗಿದರು. ಚಿಕ್ಕದೇವರಾಜನ ಮುಖ ನಿಸ್ತೇಜವಾಗಿತ್ತು. ಅಷ್ಟು ಹೊತ್ತಿಗೆ ಮಂತ್ರಿಗಳು, ದಳವಾಯಿಗಳು, ರಾಣೀವಾಸದವರು ಎಲ್ಲರೂ ಬಂದು ಸೇರತೊಡಗಿದರು. ಚಿಕ್ಕದೇವರಾಜ ಆಗಾಗ ಕಣ್ಣುಗಳನ್ನು ತೆರೆದು ಎಲ್ಲರ ಮೇಲೆಯೂ ದೃಷ್ಟಿಯನ್ನು ಹರಿಸಿ, ಮತ್ತೆ ಮುಚ್ಚಿಕೊಳ್ಳುತ್ತಿದ್ದ, ಅವನ ಕಣ್ಣಂಚಿನಲ್ಲಿ ನೀರು ತುಳುಕುತ್ತಿತ್ತು. ಮತ್ತೆ ಅವನು ಕಣ್ಣುಗಳನ್ನು ತೆರೆದು ತಿರುಮಲಾರ್ಯನ ಕಡೆ ದೃಷ್ಟಿಯನ್ನು ಹರಿಸಿದ. ಏನನ್ನೋ ತನಗೆ ಹೇಳಲು ಬಯಸುತ್ತಿದ್ದಾರೆ ಎಂದುಕೊಂಡು ತಿರುಮಲಾರ್ಯ ರಾಜನ ಹತ್ತಿರಕ್ಕೆ ಹೋಗಿ ನಿಂತು, ಹಗೆಯನ್ನು ನೇವರಿಸತೊಡಗಿದ. ಅಷ್ಟರಲ್ಲಿ ಚಿಕ್ಕದೇವರಾಜನ ಕೈ, ತಿರುಮಲಾರ್ಯನ ಕೈಯನ್ನು ಹಿಡಿದುಕೊಂಡಿತು. ಆ ಸ್ಥಿತಿಯಲ್ಲಿಯೂ ಅವನ ಹಿಡಿತ ಭದ್ರವಾಗಿಯೇ ಇತ್ತು. 'ತಿರುಮಲಾರ್ಯನಿಗೆ', ತನ್ನ ರಾಜ ಏನು ಮಾಡುತ್ತಿದ್ದಾನೆ ಎನ್ನುವುದು ಅರ್ಥವಾಗದೇ ಚಡಪಡಿಸುತ್ತಿರುವಾಗಲೇ, ಕಂಠೀರವನ ಕೈಯನ್ನು ತಿರುಮಲಾರ್ಯನ ಕೈಯಲ್ಲಿ ಇಟ್ಟು ಬಿಗಿಯಾಗಿ ಅದುಮಿ ಹಾಗೆಯೇ ಹಿಡಿದುಕೊಂಡ.

ಅವನ ಬಾಯಿ "ನಿಮ್ಮ..... ನಿಮ್ಮ..... ಎಂದು ಏನನ್ನೊ ಹೇಳಲು ತೊದಲುತ್ತಿತ್ತು. ತಿರುಮಲಾರ್ಯನಿಗೆ ತನ್ನ ರಾಜನ ಬಯಕೆ ಅರ್ಥವಾಗಿತ್ತು. ಬಾಗಿ, ತನ್ನ ರಾಜನ ಕಿವಿಯಲ್ಲಿ ಗಟ್ಟಿಯಾಗಿ ನುಡಿದ "ಇನ್ನೂ ಮುಂದೆ ಕಂಠೀರವರು, ನಮ್ಮ ಮಹಾರಾಜರು ಮಹಾಸ್ವಾಮೀ,

ಕಂಠೀರವರು ನಮ್ಮ ಮಹಾರಾಜರು", ಆ ಯಾತನೆಯಲ್ಲಿಯೂ ಕೂಡ ಚಿಕ್ಕದೇವರಾಜನ ತೃಪ್ತಿಯ ನಗು ತುಟಿಗಳನ್ನು ಒತ್ತರಿಸಿಕೊಂಡು ಚಿಮ್ಮಿತು. ಅರಳು ಕಂಗಳಿಂದ ಕಂಠೀರವನನ್ನು ದಿಟ್ಟಿಸುತ್ತಾ!! ಅಷ್ಟರಲ್ಲಿ ಸಚಿವರೆಲ್ಲರೂ, ರಾಜನ ಸನಿಹಕ್ಕೆ ಬಂದು ನಮಸ್ಕರಿಸಿ, ಉಸಿರು ಬಿಗಿಹಿಡಿದು ನಿಂತುಕೊಂಡರು. ರಾಣಿ ವಾಸದವರು ಆಗಲೇ ಕುಸಿದು ಕುಳಿತ್ತಿದ್ದರು. ರಾಣಿಯರತ್ತ ತನ್ನ ದೃಷ್ಟಿಯನ್ನು ನೆಟ್ಟ ಚಿಕ್ಕದೇವರಾಜ, ಆ ಗುಂಪಿನಲ್ಲಿ ಯಾರನ್ನೋ ಹುಡುಕುವವನಂತೆ ಕಂಡುಬಂದ. ತನ್ನ ಒಡೆಯನ ಹುಡುಕುವಿಕೆಯನ್ನು ಅರ್ಥಮಾಡಿಕೊಂಡ ದೇವಾಜಮ್ಮಣ್ಣಿ, ಷಡಕ್ಷರಯ್ಯನ ಕಡೆ ನೋಡಿ "ಕಲಾವತಿಯನ್ನು ಬೇಗ ಇಲ್ಲಿಗೆ ಕರೆದುಕೊಂಡು ಬನ್ನಿ" ಎಂದಳು. ಷಡಕ್ಷರಯ್ಯ, ಹತ್ತಿರದಲ್ಲಿಯೇ ಇದ್ದಂತಹ ಸೇವಕನಿಗೆ ಸನ್ನೆ ಮಾಡಿದ. ಅದನ್ನು ಗಮನಿಸಿದ ದೇವಾಜಮ್ಮಣ್ಣಿ "ಸೇವಕರನ್ನು ಕಳುಹಿಸಬೇಡಿ ಮಂತ್ರಿಗಳೇ" ಎಂದಳು. ರಾಣಿಯ ಮನಸ್ಸಿನ ಸ್ಥಿತಿಯನ್ನು ಅರ್ಥಮಾಡಿಕೊಂಡ ಷಡಕ್ಷರಯ್ಯ ತಾನೇ ಕಲಾವತಿಯ ಮನೆಯ ಕಡೆ ಬೇಗ ಬೇಗ ಹೆಜ್ಜೆ ಹಾಕಿದ.

ಕಲಾವತಿಯ ಮನೆಯ ದಾಸಿಯರು ಎಂದೂ ಬಾರದ ಮಂತ್ರಿಗಳು ಇಂದು ತಮ್ಮ ಮನೆಗೆ ಬಂದದ್ದನ್ನು ಕಂಡು ಗಲಿಬಿಲಿಗೊಂಡು "ಅಮ್ಮನವರು ಪೂಜಾ ಮಂದಿರದಲ್ಲಿದ್ದಾರೆ" ಎಂದರು. "ನನ್ನನ್ನು ಬಂದಿದ್ದಾರೆ ಎಂದು ತಿಳಿಸಿ" ಷಡಕ್ಷರಯ್ಯ ಒಂದೇ ಉಸಿರಿಗೆ ನುಡಿದ. "ಪೂಜಾ ಮಂದಿರದಲ್ಲಿ ಇರುವಾಗ ಅವರ ಏಕಾಗ್ರತೆಗೆ ಭಂಗ ತರಬಾರದು" ಎಂದು ದಾಸಿಯರು ಅಳುತ್ತಲೇ ನುಡಿದರು.

ಆ ದಾಸಿಯರ ಸ್ಥಿತಿಯನ್ನು ಅರ್ಥಮಾಡಿಕೊಂಡ ಷಡಕ್ಷರಯ್ಯ, ತಾನೊಬ್ಬ ಮಂತ್ರಿ ಎನ್ನುವ ಯಾವ ಬಿಗುಮಾನವೂ ಇಲ್ಲದೆ "ಎಲ್ಲಿ ಪೂಜಾಗೃಹ" ಎನ್ನುತ್ತಾ ತಾನೆ ಮುಂದಕ್ಕೆ ಹೆಜ್ಜೆಯನ್ನು ಹಾಕಿದ. ಅಷ್ಟರಲ್ಲಿ ದಾಸಿಯರು ಅವನನ್ನು ಕಲಾವತಿಯ ಪೂಜಾಗೃಹದ ಬಳಿ ಕರೆದೊಯ್ದು, ತಾವು ಹಿಂದೆ ಸರಿದು ನಿಂತರು, ಷಡಕ್ಷರಯ್ಯ, ಒಳಕ್ಕೆ ಇಣಿಕಿ ನೋಡಿದ. ಒಳಗೆ ಯಾವ ದೇವರ ವಿಗ್ರಹಗಳಾಗಲೀ, ಚಿತ್ರಪಟಗಳಾಗಲೀ ಗೋಚರಿಸಲಿಲ್ಲ. ಅಲ್ಲಿ ಇದ್ದದ್ದು ಒಂದೇ ಒಂದು ಅದು ಚಿಕ್ಕದೇವರಾಜನ ಆಳೆತ್ತರದ ತೈಲಚಿತ್ರ!! ಅದರ ಮುಂದೆ ಕಲಾವತಿ ವೀಣಾಪಾಣಿಯಾಗಿ ಕುಳಿತ್ತಿದ್ದಳು. ಷಡಕ್ಷರಯ್ಯ ಬಾಗಿಲಿನಲ್ಲಿಯೇ ನಿಂತು

"ಕಲಾವತಿಯವರೇ" ಎಂದು ಕರೆದ. ಆಕೆ ತೈಲ ಚಿತ್ರದ ಕಡೆ ಮುಖ ಮಾಡಿದ್ದವಳು ಹಿಂದಕ್ಕೆ ತಿರುಗಲೇ ಇಲ್ಲ.

"ಕಲಾವತಿಯವರೇ"…. ಈಗ ಧ್ವನಿ ಸ್ವಲ್ಪ ಗಟ್ಟಿಯಾಗಿತ್ತು. ಅಷ್ಟರಲ್ಲಿ ದಾಸಿಯೊಬ್ಬಳು ಹತ್ತಿರಕ್ಕೆ ಬಂದು "ಇದೀಗ ತಾನೇ ವೀಣೆಯನ್ನು ನುಡಿಸುತ್ತಿದ್ದರು. ಈಗ ಧ್ಯಾನ ಮಾಡುತ್ತಿರಬಹುದು" ಎಂದಳು. ಮೆಲುದನಿಯಲ್ಲಿ ಈ ಮಾತನ್ನು ಕೇಳಿ ಷಡಕ್ಷರಯ್ಯ ತುಸು ಹೊತ್ತು ಹಾಗೆಯೇ ನಿಂತುಕೊಂಡ. ಆದರೆ ಅವನಿಗೆ ಹಾಗೆ ಹೆಚ್ಚು ಹೊತ್ತು ನಿಲ್ಲಲು ಸಮಯವಿರಲಿಲ್ಲ. ಅವನ ಮನಸ್ಸೆಲ್ಲವೂ ಚಿಕ್ಕದೇವರಾಜನ ಬಳಿಯೇ ಬೇರೂರಿತ್ತು. ಹತ್ತಿರದಲ್ಲಿಯೇ ಇದ್ದಂತಹ ದಾಸಿಗೆ ಚಿಕ್ಕದೇವರಾಜರ ಸ್ಥಿತಿಯನ್ನು ತಿಳಿಸಿ ಆಕೆಯನ್ನು ಎಚ್ಚರಿಸುವಂತೆ ಕೇಳಿಕೊಂಡ. ತಕ್ಷಣ ದಾಸಿ, ಪೂಜಾ ಮಂದಿರದೊಳಕ್ಕೆ ಹೋಗಿ "ಅಕ್ಕಾ" ಎಂದು ಕಲಾವತಿಯ ಭುಜವನ್ನು ಹಿಡಿದು ಅಲುಗಿಸಿದಳು. ಆಕೆ ಹಾಗೆ ಅಲುಗಿಸಿದ ತಕ್ಷಣ ಕಲಾವತಿಯ ದೇಹ ಪಕ್ಕಕ್ಕೆ ವಾಲಿತು! ಅದನ್ನು ಕಂಡಂತಹ ಷಡಕ್ಷರಯ್ಯ, ತಾನು ಒಳಕ್ಕೆ ಹೋಗಿ "ಕಲಾವತಿಯವರೇ" ಎಂದ. ಆದರೆ ಪ್ರತಿಕ್ರಿಯೆ ಏನೂ ಕಾಣಿಸಲಿಲ್ಲ. ಅನುಮಾನ ಬಂದು ಅವಳ ಕೈಯ ನಾಡಿಯನ್ನುಹಿಡಿದು ಪರೀಕ್ಷಿಸಿದ! ಕಣ್ಣೆವೆಗಳನ್ನು ಬಿಡಿಸಿ ನೋಡಿದ. ಆಕೆಯ ಪ್ರಾಣಪಕ್ಷಿ ಆಗಲೇ ಪಂಜರವನ್ನು ತೊರೆದಿತ್ತು! ಷಡಕ್ಷರಯ್ಯ ಓಡೋಡಿ ಅರಮನೆಯನ್ನು ತಲುಪಿದ, ಕಲಾವತಿಯ ನಿಧನದ ಸುದ್ಧಿಯನ್ನು ಮಹಾರಾಜರಿಗೆ ಹೇಗೆ ತಾನೇ ತಿಳಿಸುವುದು ಎಂದು ಅವನು ಚಡಪಡಿಸುತ್ತಲೇ ಅರಮನೆಯನ್ನು ಸೇರುವ ಹೊತ್ತಿಗೆ ಸರಿಯಾಗಿ, ಅರಮನೆಯೇ ಬಿರಿಯುವಂತೆ ಎಲ್ಲರ ದುಃಖದ ಕಟ್ಟೆ ಒಡೆದ ಧ್ವನಿ ಷಡಕ್ಷರಯ್ಯನ ಕಿವಿಗಳನ್ನು ಅಪ್ಪಳಿಸಿತು. ಅವನು ಒಂದೇ ಉಸಿರಿನಲ್ಲಿ ಹೆಜ್ಜೆ ಹಾಕಿ ದೇವಾಜಮ್ಮಣ್ಣಿಯ ಅಂತಃಪುರವನ್ನು ತಲುಪಿದ, ಕಂಠೀರವನ ಕೈ ತಿರುಮಲಾರ್ಯನ ಕೈಯ ಮೇಲೆ ಹಾಗೆಯೇ ಇತ್ತು. ಸಂಚಿಯ ಹೊನ್ನಮ್ಮ ತನ್ನ ಒಡೆಯನ ಪಾದದ ಬಳಿ ಕುಸಿದು ಕುಳಿತ್ತಿದ್ದಳು. ಅವನ ಪಾದಗಳನ್ನು ತನ್ನ ಹಣೆಗೆ ಒತ್ತಿಕೊಂಡು! ಎಲ್ಲರ ಮುಖಗಳಲ್ಲಿಯೂ ಪ್ರೇತಕಳೆ ತುಂಬಿತ್ತು.

ಚಿಕ್ಕದೇವರಾಜ ತನ್ನ ಇಹಲೋಕದ ವ್ಯಾಪಾರವನ್ನು ಆಗ ತಾನೇ ಪೂರೈಸಿದ್ದ! ಷಡಕ್ಷರಯ್ಯ, ತಿರುಮಲಾರ್ಯನನ್ನು ನೋಡಿದ, ಅವನ ಕಣ್ಣುಗಳು ನಿಸ್ತೇಜವಾಗಿ ಕಾಣುತ್ತಿದ್ದವು.

ಈ ಕಾದಂಬರಿಯಲ್ಲಿ ಲೇಖಕರ ಶುದ್ಧ ವೈಚಾರಿಕ ದೃಷ್ಟಿ ಧರ್ಮ ದೇವೆರುಗಳ ಬಗ್ಗೆ ಅವರ ಸ್ಪಷ್ಟ ನಿಲುವು ಏನೆಂಬುದು ವಿವರವಾಗಿ ಚಿತ್ರಿತವಾಗಿದೆ. ಕಾದಂಬರಿಯ

ಪ್ರತಿಯೊಂದು ಪುಟಪುಟದಲ್ಲಿಯೂ ಮುಂದೆ ಏನಾಗಬಹುದು. ಮುಂದೆ ಏನಾಗಬಹುದು ಎನ್ನುವ ಕುತೂಹಲ ಉಂಟಾಗುತ್ತದೆ. ಇಡೀ ಕಾದಂಬರಿಯಲ್ಲಿ ಕಂಡುಬರುವ ರಾಜಕೀಯ ಷಡ್ಯಂತ್ರಗಳು, ಧರ್ಮಾಂಧತೆ, ವಿವಾಹೇತರ ತೀವ್ರ ಪವಿತ್ರ ಪ್ರಣಯ, ಸಾಮಾಜಿಕ ಸಂಘರ್ಷ, ಧರ್ಮದಂಡ ಹಾಗೂ ರಾಜದಂಡಗಳ ನಡುವಿನ ಘರ್ಷಣೆ, ಕರುಳ ಬಳ್ಳಿಯ ಮೋಹದಿಂದಾಗುವ ದುರಂತ, ಅರಮನೆಯ ಅಂತಪುರದ 'ಒಳ ಬದುಕು' ಇಂತಹ ಹತ್ತು ಹಲವು ವಿಚಾರಗಳು ತುಂಬಾ ಗಾಢವಾಗಿ ಇಲ್ಲಿ ಚಿತ್ರಿಸಲ್ಪಟ್ಟಿವೆ ಎಂಬುದನ್ನು ಈ ಕಾದಂಬರಿಯಿಂದ ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಐತಿಹಾಸಿಕ ಕಾದಂಬರಿಗಳಿಗೆ ಮರುಹುಟ್ಟು ನೀಡುವ ಕೆಲಸ ಮಗು ಅವರದಾಗಿದೆ. ಇಪ್ಪತ್ತನೆಯ ಶತಮಾನದ ನಡುಭಾಗದಲ್ಲಿ ಕನ್ನಡದಲ್ಲಿ ಸುಮಾರು ಇನ್ನೂರೈವತ್ತರಷ್ಟು ಐತಿಹಾಸಿಕ ಕಾದಂಬರಿಗಳು ರಚನೆಗೊಂಡಂತೆ ತಿಳಿಯುತ್ತದೆ. ನಂತರದ ದಿನಗಳಲ್ಲಿ ಐತಿಹಾಸಿಕ ಕಥಾವಸ್ತು ವ್ಯಕ್ತಿಗಳ ಹಿನ್ನಲೆಯಲ್ಲಿ ನಾಟಕಗಳು ಸೃಷ್ಟಿಗೊಂಡರು ಕಾದಂಬರಿಗಳಿಗೆ ಹಿನ್ನಡೆಯಾಯಿತು.

ಸಾಮಾನ್ಯವಾಗಿ ವ್ಯಕ್ತಿ-ಕೇಂದ್ರಿತವಾದ ಐತಿಹಾಸಿಕ ಕಾದಂಬರಿಗಳಲ್ಲಿ ವೈಭವೀಕರಣ ಹೆಚ್ಚು. ಆದರೆ ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಯಲ್ಲಿ ಯಾವುದೇ ಸನ್ನಿವೇಶವನ್ನು ಅತಿರೇಕಕ್ಕೆ ಒಯ್ಯದೆ ಸಂಯಮ ಎದ್ದು ಕಾಣುವುದನ್ನು ಕಾದಂಬರಿಯ ಉದ್ದಕ್ಕೂ ನೋಡಬಹುದಾಗಿದೆ.

ಅಧ್ಯಾಯ ಐದು

ಆಧ್ಯಾತ್ಮಿಕತೆ ಮತ್ತು ವೈಚಾರಿಕತೆ

ಮಗು ಅವರು "ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ" ಕಾದಂಬರಿ ಬರೆದ ನಂತರ ೧೯೮೯ರಲ್ಲಿ ಮಹಾಯಾತ್ರಿಕ ಕಾದಂಬರಿಯನ್ನು ಬರೆದರು. ಮಗು ಅವರು 'ಮಹಾಯಾತ್ರಿಕ' ಕಾದಂಬರಿಯಿಂದ ಸಹೃದಯ ಲೋಕಕ್ಕೆ ಹೆಚ್ಚಾಗಿ ಪರಿಚಿತರಾದರು ಎಂದರೆ ತಪ್ಪಾಗಲಾರದು. ಶ್ರೀಯುತರ ಕಾದಂಬರಿಗಳು ಚಾರಿತ್ರಿಕ ಅಂಶಗಳನ್ನು ಒಳಗೊಂಡ ಕಾದಂಬರಿಗಳು ಅದೇ ರೀತಿ ಮಹಾಯಾತ್ರಿಕ ಕಾದಂಬರಿಯು ಕೂಡ ಐತಿಹಾಸಿಕ ಹಾಗೂ ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುವ ಪ್ರಮುಖ ಕಾದಂಬರಿಯಾಗಿದೆ.

ಶ್ರೀಯುತ ಮಲೆಯೂರು ಗುರುಸ್ವಾಮಿ ಅವರ ಮಹಾಯಾತ್ರಿಕ ಕಾದಂಬರಿಯು ಮಲೆಯ ಮಹದೇಶ್ವರನ ಜೀವನ ಚರಿತ್ರೆಯನ್ನು ಒಳಗೊಂಡಿದೆ. ಈ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನ ಒಂದು ಯಾತ್ರೆ ಇದ್ದಂತೆ, ಪ್ರತಿಯೊಬ್ಬ ಮಾನವನ ಬದುಕು ಹುಟ್ಟಿನಿಂದ ಸಾಯುವ ತನಕ ಒಂದಲ್ಲ ಒಂದು ರೀತಿಯಲ್ಲಿ ಯಾತ್ರೆ ಇದ್ದಂತೆ. ಪ್ರತಿಯೊಬ್ಬ ಮನುಷ್ಯನ ಬದುಕು ತನ್ನ ಅಂತಿಮ ಉಸಿರಾಟದ ತನಕ ನಿರಂತರವಾಗಿ ನಡೆಯುತ್ತಿರುತ್ತದೆ. ಇದು ಒಂದು ಯತ್ರೆಯೆ ಸರಿ. ಪ್ರತಿಯೊಬ್ಬ ಮನುಷ್ಯನ ಬದುಕು ವಿಭಿನ್ನವಾಗಿ ಇರುತ್ತದೆ. ಮಹಾಯಾತ್ರಿಕ ಕಾದಂಬರಿಯಲ್ಲಿ ಅಂತಹ ಒಂದು ದೀರ್ಘಯಾತ್ರೆಯ ಸುಂದರ ಚಿತ್ರಣ ಕಂಡುಬರುತ್ತದೆ.

ಮಹಾಯಾತ್ರಿಕ ಕಾದಂಬರಿಯ ಮುಖ್ಯ ವೈಶಿಷ್ಟ್ಯ ಎಂದರೆ, ಇಲ್ಲಿಯ ಯಾತ್ರಿಕನು ಮಹಾನ್, ಯಾತ್ರೆಯೂ ಮಹಾನ್, ಮೇಲುನೋಟಕ್ಕೆ ಎರಡು ಒಂದೇ ಎನಿಸಬಹುದು. ಆದರೆ ಒಂದಲ್ಲ, ಕೆಲವೊಮ್ಮೆ ಯಾತ್ರಿಕನು ಸಾಮಾನ್ಯವಾಗಿದ್ದು, ಮಹಾನ್ ಯಾತ್ರೆಯನ್ನು ಕೈಗೊಳ್ಳಬಹುದು. ಮತ್ತೆ ಯಾತ್ರಿಕನು ಮಹಾನ್ ಆಗಿದ್ದು, ಕ್ರಮಿಸುವ ಯಾತ್ರೆ ಸಾಧಾರಣವಾಗಿರಬಹುದು. ಈ ಎರಡು ಅಂಶಗಳಲ್ಲಿ ಮಹಾನ್ ಫಲ ದೊರೆಯುವ ಸಂಭವ ಕಡಿಮೆ. ಹಾಗಾಗಿ ಮಗು ಅವರ ಮಹಾಯಾತ್ರಿಕ ಕಾದಂಬರಿಯಲ್ಲಿ ಪ್ರಮುಖ ನಾಯಕ ಮಲೆಯ ಮಹದೇಶ್ವರನು ಎರಡು ರೀತಿಯಲ್ಲಿ ಮಹಾಯಾತ್ರಿಕನೆ ಆಗಿದ್ದಾನೆ ಎಂಬುದನ್ನು ನೋಡಬಹುದಾಗಿದೆ.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಪರಮಶ್ರೇಷ್ಠ ಎನಿಸಿಕೊಳ್ಳಬೇಕಾದರೆ ಆತನಲ್ಲಿ ಪ್ರತಿಭೆ, ಪಾಂಡಿತ್ಯ ಮುಖ್ಯವಾಗಿ ಬೇಕೆ ಬೇಕು ಎಂಬುದನ್ನು ಕಾದಂಬರಿಯ ನಾಯಕ ಮಲೆಯ ಮಹದೇಶ್ವರನ ಬದುಕಿನಲ್ಲಿ ಕಾಣಬಹುದು.

ಮಹಾಯಾತ್ರಿಕ ಕಾದಂಬರಿಯ ನಾಯಕ ಉತ್ತಮಾಪುರದ ಚಂದ್ರಶೇಖರಮೂರ್ತಿ ಹಾಗೂ ಉತ್ತರಾಜಮ್ಮ ಎಂಬ ಶಿವಭಕ್ತರ ಮಗನೇ ಮಲೆಯ ಮಹದೇಶ್ವರ ಮಹದೇಶ್ವರನ ಪೂರ್ವದ ಹೆಸರು ಮರಿದೇವರು. ಈತ ಚಿಕ್ಕಂದಿನಿಂದಲೇ ತಂದೆ-ತಾಯಿಯರ ವಾತ್ಸಲ್ಯ ಬಂಧನದಿಂದ ದೂರವಾದರೂ ಗುರು-ಶಿಷ್ಯ ಸಂಬಂಧಕ್ಕೆ ಮಾರಿಹೋಗುತ್ತಾನೆ. "ಮನೆಯೇ ಮೊದಲ ಪಾಠಶಾಲೆ" ತಾಯಿಯೇ ದೇವರು, ತಾಯಿಯೇ ಮೊದಲ ಗುರು ಎಂಬುದನ್ನು ಪಾಠಶಾಲೆಯ ಪಾಠಕ್ಕೂ, ಜೀವನಶಾಲೆಯ ವಾಸ್ತವತಿಗೂ ಇದ್ದ ಅಜಗಜಾಂತರ ವ್ಯತ್ಯಾಸ ಅಂದೂ ಹೇಗಿತ್ತು ಎಂಬುದನ್ನು ಗಮನಿಸಬಹುದು. ಆದರೂ ಗುರು-ಶಿಷ್ಯರ ಮಧುರ ಬಾಂಧವ್ಯ ವ್ಯಾಘ್ರಾನಂದ ಮತ್ತು ಮರಿದೇವರಲ್ಲಿ ತನ್ನ ಗಟ್ಟಿನೆಲೆಯನ್ನು ಕಂಡುಕೊಂಡಿದೆ. ಈ ಗುರುವು ಪಠ್ಯಪುಸ್ತಕವನ್ನು ನಿರ್ದಿಷ್ಟ ಅವಧಿಯಲ್ಲಿ ಬೋಧಿಸುವವರಲ್ಲ. ಶಿಷ್ಯನ ಸರ್ವತೋಮುಖ ಬೆಳವಣಿಗೆಗೆ ಶಿಷ್ಯನ ಏಳಿಗೆಗಾಗಿ ಪ್ರಕೃತಿಯ ಪದರ-ಪದರಗಳಲ್ಲಿಹುದುಗಿರುವ ಹಲವು ಗುಪ್ತವಿಚಾರಗಳನ್ನು ರಟ್ಟುಮಾಡುವ ಮಹಾನುಭಾವರು, ಶ್ರೀಶೈಲದ ಸುತ್ತ-ಮುತ್ತಲಿನ ಪ್ರಕೃತಿ ಸೌಂದರ್ಯದ ನಾನಾಮುಖಗಳನ್ನು ಅಲ್ಲಿನ ಗಿಡಮರಗಳ ಹತ್ತು ಹಲವು ವನೌಷಧಿಗಳ ಪ್ರಯೋಗ, ಪ್ರಯೋಜನಗಳನ್ನು ತಮ್ಮ ಶಿಷ್ಯನಾದ ಮಲೆಯ ಮಹದೇಶ್ವರನಿಗೆ ಆತ್ಮೀಯತೆಯಿಂದ ಬೋಧಿಸುತ್ತಾರೆ. ಒಟ್ಟಾರೆಯಾಗಿ ಆಲಿಂಗನದಲ್ಲಿ ಗುರುಶಿಷ್ಯರು ಎಂದರೇ ವ್ಯಾಘ್ರಾನಂದರು ಮತ್ತು ಮರಿದೇವರು ಪರಮ ಸುಖಿಗಳು.

ಇಹಲೋಕದ ಯಾವ ಸಂಬಂಧವೂ ನಿತ್ಯ ಸತ್ಯವಲ್ಲ ಎಂಬುದನ್ನು ವ್ಯಾಘ್ರಾನಂದ ಹಾಗೂ ಮರಿದೇವರ ಅಗಲುವಿಕೆಯಲ್ಲಿ ಅರಿವಾಗುತ್ತದೆ. "ಗೂಡಿನ ಮೊಟ್ಟೆಗೆ ಸೂಕ್ತ ಶಾಖ, ಸಣ್ಣ ಮರಿಗೆ ಪೌಷ್ಠಿಕ ಆಹಾರ ಸಿಕ್ಕಿ ಕ್ರಮೇಣ ಬಲಿತಾಗ, ಅದರ ರೆಕ್ಕೆಗಳನ್ನು ಕಟ್ಟಿಹಾಕಿದರೆ ಯಾರಿಗೆ. ಸುಖವಿದ್ದೀತು"? ಹಾಗೆಯೇ ಇಲ್ಲಿ ಮರಿದೇವರು ತನ್ನ ಗುರುಗಳಾದ ವ್ಯಾಘ್ರಾನಂದರಿಗೂ ಶ್ರೀ ಶೈಲಕ್ಕೂ ವಿದಾಯ ಹೇಳಿ ಮುನ್ನಡೆಯುತ್ತಾನೆ. ಮುಂದೆಯೂ ಸೂಕ್ತ ಗುರುಗಳಿಗಾಗಿ ನಿರಂತರ ಅನ್ವೇಷಣೆ ಮಾಡುತ್ತಾನೆ. ಮುಂದೆಯೂ ಸಹ ಸುತ್ತೂರಿನ ಸಿದ್ಧನಂಜದೇಶಿಕರು, ಮುಡುಕುತೊರೆಯ ಮಲ್ಲಿಕಾರ್ಜುನ ಸ್ವಾಮಿಗಳು, ಶಂಭುಲಿಂಗನ ಬೆಟ್ಟದ

ಪ್ರಭುಸ್ವಾಮಿಗಳು ದರ್ಶನ ದೊರೆತು, ಪ್ರತಿಯೊಬ್ಬರ ಬಳಿ ಶಿಷ್ಯವೃತ್ತಿ ಪಡೆಯುತ್ತಾನೆ. ಮರಿದೇವರು ಬಾಲ್ಯವನ್ನು ದಾಟಿ ಯೌವನಾವಸ್ಥೆಗೆ ಬಂದಿದ್ದರೂ, ಬಾಲಕನೇ ಆಗುತ್ತಾನೆ. ಮರಿದೇವರಿಗೆ ಹೊಸ ಹೊಸ ವಿಷಯಗಳಿಗೆ ಸದಾ ಬಾಗಿಲು ತೆರೆದಿರುವ ಆತನ ಮನಸ್ಸಿನಲ್ಲಿ ವಿಷಯ ಆಸಕ್ತಿಗೆ ಪ್ರವೇಶವೇ ದೊರೆಯುವುದಿಲ್ಲ. ಮರಿದೇವರು ತಾನು ಒಂದೇ ಕಡೆ ನಿಂತ ನೀರಾಗುತ್ತಿರುವೆನೇನೋ ಎಂಬ ಭಾವ ಬಲವಾಗಿ ಮುಡಿದಾಗ ಮುಂದಿನ ಪ್ರಯಾಣ ಪ್ರಾರಂಭಮಾಡುತ್ತಾನೆ. 'ಆಕಾಶಕ್ಕೆ ಹಾರುವ ಗರುಡು ಮನೆಯ ಅಬ್ಬಕ್ಕೇ ಹಾರಿ ಅಲ್ಲಿಯೇ ಕುಳಿತುಬಿಟ್ಟರೆ...... ಕ್ಷೇಮವಲ್ಲ' ಎಂದು ವ್ಯಾಘ್ರಾನಂದರು ಬಲ್ಲರು ಮರಿದೇವರು ಬಲ್ಲರು. ಪರಸ್ಪರ ಶ್ರೇಯೋಭಿವೃದ್ಧಿಗಳೇ ಪರಮಧ್ಯೇಯವಾದಲ್ಲಿ, ಅಗಲಿಕೆಯ ಅನಿವಾರ್ಯ ಹಾಗೂ ಅದರಲ್ಲೂ ಸವಿಯಿರುವುದನ್ನು ಬಲ್ಲವರೇ ಬಲ್ಲರು.

ಮರಿದೇವರ ಕಾಯಕ ಮಹಿಮೆ ಪರಮಶ್ರೇಷ್ಟವಾದುದ್ದು. ಪ್ರತಿಯೊಬ್ಬ ಮನುಷ್ಯನು ನುಡಿದಂತೆ ನಡೆದರೆ, ನಡೆದಂತೆ ನುಡಿದರೆ ಅವನ ಮಾತಿಗೊಂದು ಬೆಲೆ ಸಿಗುತ್ತದೆ. ಆತನ ವ್ಯಕ್ತಿತ್ವಕ್ಕೂ ಕಳೆ ಸಿಗುತ್ತದೆ ಎನ್ನಬಹುದು. ಸುತ್ತೂರಿನ ಸಿದ್ಧನಂಜದೇಶಿಕರ ಗುರು ಸಂಪರ್ಕ ದೊರೆತಾಗ ಮರಿದೇವರಿಗೆ ಕಾಯಕ ನಿಷ್ಟದ ಮಹತ್ವ ದೊರೆಯುತ್ತದೆ. ಮರಿದೇವರು ಸುತ್ತೂರಿನ ಮಠದಲ್ಲಿ ಕಾಯಕ ನಿಷ್ಟದ ಬಗೆಗೆ ತನ್ನ ಅನುಯಾಯಿಗಳಿಗೆ ಮಾರ್ಗ ತೋರಿಸುತ್ತಾರೆ. "ಕಾಯಕವೇ ಕೈಲಾಸ" ಎಂದು ಸಾರಿದ ಬಸವಣ್ಣನವರು ಇಡೀ ಲೋಕಕ್ಕೆ ಕಾಯಕದ ಮಹಿಮೆಯನ್ನು ತಾವು ಕಾಯಕ ನಿರತರಾಗಿ ಲೋಕದ ಜನಕ್ಕೂ, ವಿಶ್ವಕ್ಕೂ ಸ್ಫೂರ್ತಿಯ ಚಿಲುಮೆಯಾದರು. ಹಾಗೆಯೇ ಮರಿದೇವರು ಸುತ್ತೂರು ಭಕ್ತರಿಗೆ ತೋರಿಸಿದ್ದು ಅದೇ ಮಾದರಿಯನ್ನು ಮರಿದೇವರು ಸುತ್ತೂರು ಮಠದಲ್ಲಿ ನಿತ್ಯರಾಗಿ ಬೀಸುವ ಕಾಯಕವನ್ನು ಕೈಗೊಂಡು ನಂತರವೇ ಮಠದಲ್ಲಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಇದರಿಂದ ಮಠದ ಅನುಯಾಯಿಗಳಿಗೆ ಸಂಕೋಚವೆನಿಸಿ ತಾವೂ ಕೂಡ ಆತನನ್ನು ಹಿಂಬಾಲಿಸುತ್ತಾರೆ.

ಮರಿದೇವರು ಶರಣರ ತತ್ತ್ವಚಿಂತನೆಗಳನ್ನು ಅಳವಡಿಸಿಕೊಂಡವರು ಶರಣರ ಪ್ರಕಾರ ಅಂದಂದಿನ ಆಹಾರವನ್ನು ಅಂದಿನ ದಿನವೇ ದುಡಿದು ತಿನ್ನಬೇಕು ಎಂಬುದನ್ನು ಅರಿತವರು. ಮರಿದೇವರು ಮುಂದೆ ಸಾಧಕ ಮಹದೇಶ್ವರರಾಗಿ, ದೈವಸ್ವರೂಪಿ ಮಲೆಯ ಮಹದೇಶ್ವರರೆನಿಸಿದರೂ ಕೊನೆಯವರೆಗೆ ಕಾಯಕದ ಹಿರಿಮೆಗೆ ಪ್ರಾಶಸ್ತ್ಯ ಕೊಡುತ್ತಾರೆ. ಹಾಗಾಗಿ ಸಂಗಡಿಗರಾರೂ ಸೋಮಾರಿಗಳಾಗಲೂ ಸಾಧ್ಯವಾಗಲಿಲ್ಲ. ಮುಂದೆ ಕಾಡಿನ

ಚುಂಚರ ಮನಸ್ಸಿನ ಮನಸ್ಸನ್ನು ತಮ್ಮ ಕಾಯಕ ಮಹಿಮೆಯ ಮೂಲಕ ಪರಿವರ್ತನ ಮಾಡುತ್ತಾ ಹೋಗುತ್ತಾರೆ. ಚುಂಚರ ಮನಪರಿವರ್ತನೆಯನ್ನು ವಿವಿಧ ಮಾರ್ಗಗಳಿಂದ ಬದಲಾವಣೆ ಮಾಡುತ್ತಾ ಅವರಲ್ಲಿ ಬೇರೂರಿದ ಮೂಢನಂಬಿಕೆಗಳನ್ನು ವೈಜ್ಞಾನಿಕ ಕ್ರಮದಿಂದ ಬದಲಾವಣೆ ಮಾಡುತ್ತಾರೆ. ಒಟ್ಟಾರೆಯಾಗಿ ಮರಿದೇವರು ಕಾಯಕದಿಂದಲೇ ಕಾಡುಜನರ ಬದುಕಿಗೆ ಹೊಸ ಸ್ವರೂಪವನ್ನು ಮಾರ್ಗವನ್ನು ಕೊಡುತ್ತಾರೆ.

ಮಹಾಯಾತ್ರಿಕ ಕಾದಂಬರಿಯಲ್ಲಿ ಕಾದಂಬರಿಕಾರರ ಮೂಲ ಉದ್ದೇಶ ಪ್ರಸ್ತುತ ಸಂದರ್ಭದಲ್ಲಿ ಮಲೆಯ ಮಹದೇಶ್ವರರ ಬಗ್ಗೆ ಜನಮನದಲ್ಲಿ ಆಳವಾಗಿ ಬೇರೂರಿರುವ ಹತ್ತಾರು ಪವಾಡರೂಪೀ ಭ್ರಮೆಗಳಿಗೆ ಪರದೆ ಎಳೆಯುವುದು ಶ್ರೀಯುತ ಮಗು ಅವರ ಉದ್ದೇಶ ಎನಿಸುತ್ತದೆ. ಕಾದಂಬರಿಯ ಮೊದಲಿನಿಂದ ಕೊನೆಯವರೆಗೂ ವೈಚಾರಿಕತೆಯ ಪ್ರಖರತೆ ಪ್ರಧಾನವಾಗಿ ಕಂಡುಬರುತ್ತದೆ.

ಇಲ್ಲಿನ ಮಲೆಯ ಮಹದೇಶ್ವರರ ಜೀವನ ಚರಿತ್ರೆಯಲ್ಲಿ ಎರಡು ಬಗೆಯ ಪವಾಡಗಳು ಪ್ರಚಲಿತವಾಗಿರುವುದನ್ನು ಕಾಣಬಹುದು.

ಮೊದಲನೆಯದು: ಅವರ ಸಹಜ ಕ್ರಿಯೆಗಳು ಅತಿಮಾನುಷ ಕ್ರಿಯೆಗಳಾಗಿ ಅಂಗೀಕೃತವಾಗುವುದು.

ಎರಡನೆಯದು: ಅವರೇ ಕೆಲವೊಮ್ಮೆ ಕಾರ್ಯ ಸಿದ್ಧಿಗಾಗಿ ನಡೆಸಿದ ಕ್ರಿಯೆಗಳು.

೧) ಜನಸಾಮಾನ್ಯರಿಗೆ ನೆಮ್ಮದಿಯ ಬದುಕು ನಡೆಸಲು ತಮ್ಮ ಕಷ್ಟ-ಸುಖಗಳಿಗೆ ಸಂಪೂರ್ಣ ಹೊಣೆಯಾಗುವ ಒಂದು ಆಧಾರಬೇಕು. ಆ ಆಧಾರ ಸ್ತಂಭ ದೇವರಾಗಿರಬಹುದು. ದೇವರಂತಹ ಮನುಷ್ಯನಾಗಿರಬಹುದು. ಅಥವಾ ಬೇರೆಯೇ ಯಾವುದೇ ಆಗಬಹುದು. ತಮಗಿಂತ ಮೇಲ್ಮಟ್ಟದ ಜೀನನ ಧಾರ್ಮಿಕ ಆಧ್ಯಾತ್ಮಿಕ ಮುಂತಾದ ನಡೆಸುವ ವ್ಯಕ್ತಿ ಸಾಮಾನ್ಯರಿಗೆ ಅತಿಮಾನವನಾಗಿ ಗೋಚರಿಸುತ್ತಾನೆ. ಆದರ್ಶ ವ್ಯಕ್ತಿಯೂ, ಪೂಜನೀಯನೂ ಆಗುತ್ತಾನೆ. ಆತನ ಸಹಜ ನಡಾವಳಿಗೂ ಜಗತ್ತು ರಂಗು-ರಂಗಾದ ಬಣ್ಣ ತುಂಬುತ್ತದೆ. ಅವನ ಬಗ್ಗೆ ಸತ್ಯ ಸಂಗತಿಗಳಿಗಿಂತ ದಂತಕಥೆಗಳು ಹೆಚ್ಚಿನ ಪ್ರಚಾರ ಪಡೆದುಕೊಳ್ಳುತ್ತವೆ. ಇದು ಮಲೆಯ ಮಹದೇಶ್ವರರ ಜೀವನದಲ್ಲಿ ಅನ್ವಯಿಸಿರುವುದನ್ನು ಕಾದಂಬರಿಕಾರರಾದ ಮಗುಅವರು ವಿವರವಾಗಿ ನಿರೂಪಿಸಿದ್ದಾರೆ.

ಶ್ರೀಯುತ ಮಗು ಅವರು ಕಾದಂಬರಿಯ ಪ್ರಾರಂಭದಲ್ಲಿ ಜನರ ಜೀವನದ ಒಂದು ಪ್ರಧಾನ ಅಂಶವಾಗಿರುವುದನ್ನು ವಿವರಿಸಲಾಗಿದೆ. "ಗುರುಗಳು ಪೂಜೆಗೆ ಹೂ ಕೊಯ್ಯಲು ಹೋಗಿದ್ದಾಗ, ಒಂದು ಪೊದೆಯಲ್ಲಿ ಹೆಣ್ಣುಹುಲಿ ಹೆರಿಗೆಯ ನೋವಿನಿಂದ ನರಳುತ್ತಾ ಬಿದ್ದಿತ್ತಂತೆ, ಗುರುಗಳು ಕಮಂಡಲುವಿನಿಂದ ತೀರ್ಥವನ್ನು ಚಿಮುಕಿಸಿದಾಗ ಈ ಅವಳಿ ಮರಿಗಳಿಗೆ ಜನ್ಮಕೊಟ್ಟು, ತಾನೇ ಕಚ್ಚಿಕೊಂಡು ಬಂದು ಆಶ್ರಮದ ಬಾಗಿಲಲ್ಲಿ ಮಲಗಿಸಿ ಹೊರಟುಹೋಯಿತಂತೆ"! (ಪು.ಸಂ. ೧೨).

ವ್ಯಾಘ್ರಾನಂದರು ವ್ಯಾಘ್ರವೊಂದನ್ನು ಸಲಹುತ್ತಿದ್ದ ಕಾರಣ ಅವರಿಗೆ ಅಮೋಘ ಮಂತ್ರಶಕ್ತಿ ಇದೆ ಎಂಬ ಭ್ರಮೆ ಶ್ರೀಶೈಲದ ಸುತ್ತಮುತ್ತ ಹರಿದಾಡಿದ್ದುದು, ರೂಢಿಯಲ್ಲಿದ್ದುದನ್ನು ಗಮನಿಸಬಹುದು. ಅವರ ಮುಂದಾಳ್ತನದಲ್ಲಿ ಯೋಗಾಸನ ಮತ್ತು ವನೌಷಧಿಗಳ ಪ್ರಯೋಗದಲ್ಲಿ ಪರಿಣತಿಯನ್ನು ಪಡೆದುದು ಮಹದೇಶ್ವರನ ಪವಾಡಗಳ ಒಂದು ಪ್ರಮುಖ ಕಾರಣವೆನ್ನಬಹುದು. ಶ್ರೇಷ್ಠ ಮಟ್ಟದ ಯೋಗಿಯಾದ ಅವನು ಮುಂದೆ ಶಂಭುಲಿಂಗನ ಬೆಟ್ಟಕ್ಕೆ ಹೋಗಲು ಕಾವೇರಿ ನದಿ ದಾಟಿದುದು. ಜೊತೆಯಲ್ಲಿ ಬಾಲ್ಯ ಸಂಗಾತಿಯಾದ ಹುಲಿಯಿದ್ದುದು ಇವುಗಳಿಂದ ಪ್ರಾರಂಭದಲ್ಲೇ ಅಲ್ಲಿನ ಜನರು ಮೂಗಿಗೆ ಕೈ ಇಡುವಂತಾದರೆ ಅಚ್ಚರಿಯೇನಿಲ್ಲ. ಸರ್ಪ ಜೊತೆಯಲ್ಲಿ ಕಾಣಿಸಿಕೊಂಡಾಗಲೂ ಜನರಿಗೆ ಭ್ರಾಂತಿಯೇ. ಕಿವಿಯಿಂದ ಕಿವಿಗೆ ಇವು ಹರಡಿದಂತೆಲ್ಲಾ ಸುದ್ದಿಗೆ ರೆಕ್ಕೆ-ಪುಕ್ಕ ತಾವಾಗಿಯೇ ಬಂದು ಬಿಡುತ್ತವೆ.

ಜನ-ಜಾನುವಾರುಗಳು ರೋಗ, ಕಾಲರಾಕ್ಕೆ ತುತ್ತಾದಾಗ ಮಹದೇಶ್ವರರು ಅವುಗಳಿಗೆ ಮದ್ದು ನೀಡಿ ಜೀವ ಉಳಿಸಿದಾಗಲೂ ಕಿಂವದಂತಿಗಳ ಕೈಗಳೇ ಮೇಲಾಗುತ್ತವೆ. ಭಾನುಕೀರ್ತಿಯ ಪತ್ನಿಯ ಮನರೋಗ ನಿವಾರಣೆ, ಕಾಳಮ್ಮನ ತಾಮಸ ಪ್ರವತ್ತಿಯ ಉಪಶಮನ, ಕಾಳಮ್ಮನ ಪ್ರವೃತ್ತಿಯ ಅಟ್ಟಹಾಸವಂತು ಬಹಳ ಕ್ರೂರವಾದದ್ದು. ಇಂತಹ ಸನ್ನಿವೇಶಗಳಲ್ಲಿ ಮಹದೇಶ್ವರರ ವೈದ್ಯಕೀಯ ಚಾತುರ್ಯವನ್ನೂ, ಮನೋವಿಶ್ಲೇಷಣೆಯ ಜಾಣ್ಮೆಯನ್ನು ಮುಕ್ತಕಂಠದಿಂದ ಪ್ರಶಂಸಿಸುವ ಬದಲಾಗಿ ಅವುಗಳನ್ನು ಪವಾಡಗಳ ಪಂಕ್ತಿಯಲ್ಲಿ ಸೇರಿಸುವ ಜನರು ಮೌಢ್ಯಕ್ಕೆ ಮಾದರಿಯಾಗಿದ್ದಾರೆ.

೨) ಶತಮಾನಗಳಿಂದ ಬೇರೂರಿರುವ ಭ್ರಮೆಗಳನ್ನು ಕಿತ್ತೊಗೆದು, ನವಸಮಾಜದ ನಿರ್ಮಾಣ ಮಾಡುವುದು ಒಬ್ಬನಿಂದ ಅದರಲ್ಲೂ ಒಂದು ಸೀಮಿತ ಅವಧಿಯೊಳಗೆ

ನಡೆಯುವ ಕಾರ್ಯವಲ್ಲ. ಇದರ ಕಾರಣವನ್ನು ವ್ಯಾಘ್ರಾನಂದರು ವಿಶ್ಲೇಷಿಸುವ ಬಗೆ ಹೀಗಿದೆ. ಕೆಲವು ನಂಬಿಕೆಗಳನ್ನೂ, ಆಚರಣೆಗಳನ್ನೂ ರಾತ್ರೋರಾತ್ರಿ ಬುಡಸಹಿತ ಕಿತ್ತುಹಾಕುವುದು ಕಷ್ಟವಾಗಿಬಿಡುತ್ತದೆ. ಒಮದು ಪಕ್ಷ ಹಾಗೆ ಮಾಡಿದರೆ ಪರಿವರ್ತಿತನಾಗುವವನು ಅದನ್ನು ಒಪ್ಪಿಕೊಳ್ಳು ನಿರಾಕರಿಸಿ ಪರಿವರ್ತಿಸ ಹೊರಡುವವನೇ ದುರಂತವನ್ನು ಕಾಣಬೇಕಾಗಬಹುದು. ಆದ್ದರಿಂದಲೇ ಇಂತಹ ಕೆಲಸಗಳನ್ನು ಮಾಡುವಾಗ 'ಕಾಲ ಮತ್ತು ಮಾರ್ಗ' ಎರಡು ಮುಖ್ಯವಾಗುತ್ತವೆ. ನನ್ನ ಮಾತಿಗೆ ಪುರಾವೆಯಾಗಿ ಶರಣರ ಕ್ರಾಂತಿಗಿಂತಲೂ ಬೇರೆಯದೇ ಆದ ಉದಾಹರಣೆ ಬೇಕೆ!" ಆದ್ದರಿಂದ ತಿಳಿದೂ ತಿಳಿದೂ ಇಂತಹ ಕಾರ್ಯಕ್ಕೆ ಕಯ ಹಚ್ಚುವಾಗ, ಕಟ್ಟೆಚ್ಚರ ಅತ್ಯವಶ್ಯ, ಕೆಲವೊಮ್ಮೆ ಭ್ರಾಂತಿಗಳನ್ನೂ ಚಲಾವಣೆಯ ನಾಣ್ಯಗಳನ್ನಾಗಿ ಮಾಡಿಕೊಂಡು ಜನರ ಶ್ರೇಯಸ್ಸಿಗಾಗಿ ಶ್ರಮಿಸಬೇಕಾಗುತ್ತದೆ. ಮಹದೇಶ್ವರರು ಮೊದಲಿನಿಂದಲೂ ಇಂತಹ ಹಲವು ಯಶಸ್ವೀ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಾರೆ. ಶ್ರೀಶೈಲದ ಚುಂಚರು (ಅಂದರೆ ಕಾಡುಜನರು) ಕಾಡು ದೇವಿಗೆ ಪ್ರಾಣಿ ಬಲಿಯನ್ನು ನೀಡುವಾಗ ಅದು ಘೋರ ಅಪರಾಧವೆಂದು ಅರುಹಿದರೆ, ಅವಿದ್ಯಾವಂತರಾದ ಅವೈಚಾರಿಕ ಪ್ರಜ್ಞೆಯುಳ್ಳ ಅವರು ಅರ್ಥೈಸಿಕೊಳ್ಳಲಾರರು, ಆದ್ದರಿಂದ ದೇವತೆಯು ತನ್ನ ಮೇಲೆ ಆವಾಹನೆಯಾದಂತೆ ನಟಿಸಿ, ಕಷಾಯವನ್ನು ಪ್ರಸಾದದಂತೆ ಹಂಚಿದ ಮಹದೇಶ್ವರರ ಪ್ರಜ್ಞಾಪೂರ್ವಕ ನಡವಳಿಕೆ ಕೌತುಕ ಪೂರ್ಣವಾಗಿದೆ.

ಮಹದೇಶ್ವರರು ಜೀವನವೆಂಬ ಪ್ರಯೋಗಶಾಲೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾರೆ. ಕುರುಬರ ಹಾಡಿಯ ಈ ಬುತ್ತಿ ಮಲೆಯ ಪ್ರಸಂಗವನ್ನು ಇಲ್ಲಿ ಉದಾಹರಿಸಬಹುದು. ಪವಾಡದ ಕಲ್ಪನೆಯನ್ನು ನೇರವಾಗಿ ನಿರಾಕರಿಸಿ, ಅಲ್ಲಿನ ಜನರ ರೋಗಕ್ಕೆ ಮದ್ದನ್ನೀಯುತ್ತಾರೆ. ಸಮಯ ಮತ್ತು ಸನ್ನಿವೇಶಗಳು ಪೂರಕವಾಗಿದ್ದಲ್ಲಿ, ನಿರೀಕ್ಷಿತ ಮಟ್ಟವನ್ನು ಮುಟ್ಟುವುದೆಂಬ ಅವರ ಅಭಿಪ್ರಾಯ ಸೂಕ್ತವಾದುದು. ಆದರೆ ಎಲ್ಲ ಕಡೆ ತನ್ನ ಕಂಬಂಧಬಾಹುವನ್ನು ಚಾಚಿರುವ ತರಹೇವಾರಿ ಮೂಢನಂಬಿಕೆಗಳು, ಕಂದಾಚಾರಗಳು ಅವರ ಅಂತರಾಳವನ್ನು ಮತ್ತೆ ಮತ್ತೆ ಶೋಧಿಸುವಂತೆ ಮಾಡುತ್ತವೆ. ಲೋಕದ ಎಲ್ಲ ಜನರ ಮನಸ್ಸನ್ನು ಮಾರ್ಪಡಿಸಬಲ್ಲೆನೆಂಬ ಹಮ್ಮು ಲೇಶಮಾತ್ರವೂ ಅವರಿಗಿಲ್ಲ. ತಾನು ತಿಳಿಹೇಳಿದರೂ ತಿಳಿಯಲಾರದವರ ಬಗ್ಗೆ ಮರುಕ ಪಟ್ಟು ಮುಂದೆ ಸಾಗುತ್ತಾರೆ. ಇಲ್ಲಿ ಚಿತ್ರಿತವಾಗಿರುವಂತೆ ಕಾಶಿಯಲ್ಲಿ ಪುಣ್ಯ ಸಾವು ಬರಲೆಂದು ಜನರು ಪಡುವ ಬವಣೆಗಳು

ಸಂಖ್ಯೆಯಲ್ಲಿ ಇಳಿಮುಖವಾದರೂ ಇಂದೂ ಉಳಿದಿವೆ. ಹಾಗೆಯೇ ನಿತ್ಯಾನಂದಸ್ವಾಮಿಗಳ ಆರ್ಭಟ, ಕೂಡಲಸಂಗಮದ ದುಃಸ್ಥಿತಿ, ಭಾನುಕೀರ್ತಿಯ ಬಗ್ಗೆ ದೇವತಾಕಲ್ಪನೆ ಇತ್ಯಾದಿಗಳು ಮನುಷ್ಯರ ರೋಗಗ್ರಸ್ಥ ಮನಸ್ಸಿನ ನಾನಾ ತರಂಗಗಳನ್ನು ತೆರೆದಿಡುತ್ತವೆ. ದೇಹ ಸ್ವಾಸ್ಥ್ಯವನ್ನು ಆದಷ್ಟು ಗುಣಪಡಿಸಬಹುದು. ಆದರೆ ಕೆಲವು ಮನೋರೋಗಕ್ಕೆ ಇಂದೂ ಮದ್ದಿಲ್ಲವೇನೋ, ಇದ್ದರೂ ಸ್ವೀಕರಿಸುವ ಸ್ವಭಾವವಿಲ್ಲವೇನೋ, ಏಕೆಂದರೆ ಈಗಲೂ ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಇಂತಹ ಢೋಂಗಿ ಸ್ವಾಮಿಗಳನ್ನು ಅವರಿಗೆ ತಮ್ಮ ಸ್ಥಾನ-ಮಾನಗಳನ್ನು ಮರೆತು ತಲೆಬಾಗುವ ವರಿಷ್ಠೋತ್ತಮರನ್ನು ಕಾಣುತ್ತಲಿದ್ದೇವೆ. (ಮಹಾಮಾತ್ರಿಕ, ಅಭಿನಂದನ ಗ್ರಂಥ ಸೃಷ್ಟಿ ಪುಟಸಂಖ್ಯೆ ೧೫, ಡಾ.ಶೀಲಾಕುಮಾರಿ)

ಮಹದೇಶ್ವರರ ಆಧ್ಯಾತ್ಮಿಕ ಜೀವನದ ಬಗ್ಗೆ ಹೇಳುವುದಾದರೆ ಅವರದು ಎಂತಹ ಧರ್ಮ ಅವರ ಧರ್ಮವಾದರೂ ಎಂತಹದು? ಎಂಬುದನ್ನು ತಿಳಿಯಲಾಗದು. ಮಹದೇಶ್ವರರು ಯಾವು ದೇವತೆಯನ್ನು ಪೂಜಿಸದ ಎಂತಹ ಶಕ್ತಿವಂತರು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಮಹದೇಶ್ವರರು ಶರಣರ ತತ್ತ್ವಚಿಂತನೆಗಳನ್ನು ಅಳವಡಿಸಿಕೊಂಡವರು ಕಾಯಕದ ಮೂಲಕ ದೇವರನ್ನು ಕಾಣುವುದಾಗಿತ್ತು. ಕಾಯಕವೇ ದೇವರ ಸ್ವರೂಪ ಎಂಬುದು ಅವರ ನಿಲುವಾಗಿತ್ತು. ಯಾವ ದೇವತೆಯನ್ನು ಪೂಜಿಸಿದ ಮಹದೇಶ್ವರರು ಕೇವಲ ಶರಣಧರ್ಮವನ್ನು ಮಾತ್ರ ಅನುಸರಿಸಿಕೊಂಡು ಬಂದವರು. ನಾವು ಜಾತಿಯನ್ನು ಹೇಳಿಕೊಂಡ ಮಾತ್ರಕ್ಕೆ ಏನು ಆಗುವುದಿಲ್ಲ. ಏನನ್ನು ಸಾಧಿಸಲು ಆಗುವುದಿಲ್ಲ. 'ದೇವರು' ಎಂದರೆ ಏನು? ದೇಹವಿಲ್ಲ, ವರ್ಣವಿಲ್ಲ, ರೂಪವಿಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. 'ದೇವರೆಂದರೆ' ಏನು ಎನ್ನುವುದನ್ನು ಅರಿತುಕೊಳ್ಳಬೇಕು...." ಎಂಬ ರಾಯಣ್ಣನ ಉಕ್ತಿ ನಮ್ಮನ್ನು ಆಲೋಚನೆಗೆ ಹಚ್ಚುತ್ತದೆ. ಈ ಧರ್ಮದಲ್ಲಿ ಇಷ್ಟಲಿಂಗಧಾಣೆಗೆ ಕೇವಲ ಜಾತಿಸೂತಕ ಕಳೆಯಲು, ಕಾಯಕಕ್ಕೆ ಗೌರವ ಕಲ್ಪಿಸಲು ಮಾತ್ರ. ಇಲ್ಲಿ ಶರಣ ಧರ್ಮವೆಂದರೆ ಒಂದು ಜಾತಿಯನ್ನು ಸೂಚಿಸುವುದಿಲ್ಲ. ಬದಲಾಗಿ ವಚನಕಾರ ಬಸವಣ್ಣನವರು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ನಡೆಯುವ ಧರ್ಮ, ಜಾತಿ-ಬೇಧಗಳ ಭಯವಿಲ್ಲದೆ, ಮೇಲು-ಕೀಳಿನ ಗುಂಗಿಲ್ಲದೆ ಎಲ್ಲರೂ ಸಮನಾಗಿ, ಒಂದಾಗಿ ಕೂಡಿಬಾಳುವ ಸನ್ಮಾರ್ಗದತ್ತ ನಡೆಯುವ ಧರ್ಮ ಎಂದು ಹೇಳಿದ್ದಾರೆ.

ಮಹದೇಶ್ವರರ ಪ್ರಕಾರ 'ಪೂಜೆಗೆ ಇಂತದೆ 'ರೀತಿ' ಎನ್ನುವುದು ಇಲ್ಲ. ಅದಕ್ಕೆ ಇರುವುದು 'ನೀತಿ' ಮಾತ್ರ. ನೀವು ದೇವರೆಂದು ನಂಬಿಕೊಂಡಿರುವುದನ್ನು ಹೇಗೆ

ಪೂಜಿಸಿದರೂ ಆಯಿತು. ಇಂತಹದನ್ನೇ ದೇವರೆಂದೂ ನಂಬಿಕೊಂಡಿರುವುದನ್ನು ಹೇಗೆ ಪೂಜಿಸಿದರೂ ಆಯಿತು. ಇಂತಹದನ್ನೇ ದೇವರೆಂದು ನಂಬಿಕೊಳ್ಳಿ ಎಂತಲೂ ನಾನು ಹೇಳಲಾರೆ. ಹಾಗೆ ನೋಡಿದರೆ ದೇವರೆಂದರೆ ಏನು? ಎನ್ನುವುದೇ ಬಹಳ ಸಂಕೀರ್ಣವಾದ ಪ್ರಶ್ನೆ. ಅದು ನೀವು ಅಂದುಕೊಂಡಿರುವ ಒಂದು ಸಣ್ಣ ಕುರುಹಿನಿಂದ ಹಿಡಿದು, ಶರಣರು ಹೇಳುವಂತಹ ಇಡೀ ಬ್ರಹ್ಮಾಂಡವೇ ಆಗಬಹುದು. ಇಡೀ ಬ್ರಹ್ಮಾಂಡವೇ ದೇವರೆನ್ನುವುದಾದರೆ ಅಂತಹ ಬ್ರಹ್ಮಾಂಡದ ಒಂದು ಅಂಶವಾಗಿರುವ ಮನುಷ್ಯನೂ ದೇವರ ಒಂದು ಅಂಶವಾಗುತ್ತಾನೆ. ಅಂತಹ ಅಂಶವನ್ನು ಅರಿತುಕೊಳ್ಳುವುದು ಎಂದರೆ ತನ್ನನ್ನು ತಾನು ಅರಿತುಕೊಳ್ಳುವುದು ಎಂದು ಅರ್ಥ. ತನ್ನನ್ನು ತಾನು ತಾನು ಅರಿತಕೊಳ್ಳಬೇಕಾದರೆ, ಮನುಷ್ಯ ತಾಮಸ ಪ್ರವೃತ್ತಿಯಿಂದ ಸಾತ್ವಿಕ ಪ್ರವತ್ತಿಯತ್ತ ತಿರುಗಬೇಕು. ಇದು ಹೊರಗಿನ ಪೂಜೆಯ ರೀತಿ–ನೀತಿಯಿಂದ ಆಗುವಂತಹುದಲ್ಲ; ಅದು ಒಳಗಿನ ಮಾರ್ಪಾಡು, ಪೂಜಕನೂ, ಪೂಜ್ಯನೂ ಒಬ್ಬನೇ ಆಗಬೇಕು. ಅಗ ಮನುಷ್ಯನು ತನ್ನನ್ನು ತಾನು ಅರಿತುಕೊಂಡ ಎಂದು ಅರ್ಥ. ಆದರೆ ಇದು ಒಂದು ದಿನದಲ್ಲಿ ಆಗುವಂತಹ ಕೆಲಸವಲ್ಲ. ನಮ್ಮ ಮನಸ್ಸು ಈ ಸುತ್ತಮುತ್ತ ಇರುವಂತಹ ವೃಕ್ಷವಾದ ಕಾಡಿನಂತೆ; ಕಡಿದಷ್ಟೂ ಮತ್ತೆ ಬೆಲೆಯುತ್ತಲೇ ಇರುತ್ತದೆ. ಆದ್ದರಿಂದಲೇ ಸದಾ ಮನುಷ್ಯ ತನ್ನ ಒಳಗನ್ನು ತಾನು 'ಬೆಳಗು'ವ ಕೆಲಸವನ್ನು ಮಾಡುತ್ತಲೇ ಇರಬೇಕು. (ಪುಟ. ೨೯೨)

ಸಾಲೂರು ಮಠದ ನೂತನ ಕಟ್ಟಡದ ಪ್ರವೇಶೋತ್ಸವಕ್ಕೆ ಶುಭಮೂಹೂರ್ತವನ್ನು ತಿಳಿಸಲು ಸಂಗಪ್ಪನು ಪಂಚಾಂಗ ನೋಡಬೇಕು. ಅದಕ್ಕಾಗಿ ಜ್ಯೋತಿಷ್ಯ ಬಲ್ಲವರನ್ನು ಹುಡುಕಬೇಕು. ಈ ದಟ್ಟ ಕಾಡಿನಲ್ಲಿ ಅವರನ್ನು ಎಲ್ಲಿ ಹುಡುಕೋದು ಅನ್ನೋದೇ ನನಗೂ ಸಮಸ್ಯೆಯಾಗಿದೆ.

ಹಾಗಾದರೆ ಶುಭದಿನವನ್ನು ಗೊತ್ತು ಮಾಡುವವರು ಯಾರು? ಎಂದ ಮತ್ತೆ ಸಂಗಪ್ಪ. ಸ್ವಲ್ಪ ಹೊತ್ತು ಮೌನವಾಗಿ ಕುಳಿತಿದ್ದ ಮಹದೇಶ್ವರರು "ನೇರವಾಗಿ ದೇವರುಗಳನ್ನೇ ಕೇಳಿ ಬಿಟ್ಟರೆ ಹೇಗೆ?" ಎಂದರು ಹುಸಿ ನಗುವಿನಿಂದ.

"ಏನು, ಹುಡುಗಾಟ ಆಡ್ತಾ ಇದ್ದೀಯಾ ಮಾದಪ್ಪಾ, ನನ್ನ ಜೊತೆ"

"ಹುಡುಗಾಟ ಆಡದೆ ಇಷ್ಟು ಬೇಗ ತಲೆ ನರೆತ ಮುದುಕನಾಗಿಬಿಟ್ಟನೇ? ಏನು ಸಂಗಪ್ಪ, ನಿನ್ನಂತಹವನೇ ಹೀಗೆ ಯೋಚಿಸುತ್ತೀಯಲ್ಲಾ, ನಾನು ಇನ್ನು ಬೇರೆಯವರಿಗೆ ಹೇಳುವುದಾದರೂ ಏನನ್ನು? ಈ ಸೃಷ್ಟಿಯಲ್ಲಿ ಎಲ್ಲ ಕಾಲದಲ್ಲಿಯೂ ಒಂದಲ್ಲೊಂದು ಕ್ರಿಯೆ

ನಡೆಯುತ್ತಲೇ ಇರುತ್ತದೆ. ಪ್ರಾಣಿ ಲೋಕಕ್ಕಿಂತಲೂ ವಿಚಿತ್ರವಾದ, ನಿಗೂಢವಾದ ಸಸ್ಯಲೋದಲ್ಲಿಯಂತೂ ಅಹರ್ನಿಶಿ ಎನ್ನದೆ ಕ್ರಿಯೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಹೀಗಿರುವಾಗ ಈಶುಭ ಅಶುಭ ಕಲ್ಪನೆಗಳು ಮನುಷ್ಯನಿಗೆ ಮಾತ್ರ ಏಕೆ ಬಂತು? ಅವುಗಳು ನಮ್ಮ ಭಯದಿಂದ, ವ್ಯಾವಹಾರಿಕವಾದ ಲಾಭ ನಷ್ಟಗಳ ಹಿನ್ನಲೆಯಲ್ಲಿ ಸೃಷ್ಟಿಯಾದಂತಹ ಮಾನಸಿಕ ವಿಕಾರದ ಪ್ರತಿಫಲವೇ ಹೊರತು ಬೇರೆನೂ ಅಲ್ಲ"

"ಪೂಜೆ ಎನ್ನುವುದು ಮನಸ್ಸಿನ ಒಳಗೆ ನಡೆಯುವಂತಹುದು. ಹೊರಗೆ ನಮಗೆ ಕಾಣಿಸುವ ರೀತಿ-ನೀತಿಗಳು ಕೇವಲ ಸಾಂಕೇತಿಕ ಕೆಲವೊಮ್ಮೆ ಕೇವಲ ಆಡಂಬರಕ್ಕಾಗಿ ಇರುವಂತಹದು. ಇಷ್ಟಕ್ಕೂ ನಾನು ದೇವರನ್ನು ಒಲಿಸಿಕೊಂಡು ಮೋಕ್ಷವನ್ನು ಪಡೆಯಬೇಕೆಂಬ ಆಸೆಯಿಂದ ಕೂಡಿದವನೇನಲ್ಲ! ಕಾಡುಜನರ ನಡುವೆ ಬದುಕಿ, ಅವರಿಗೆ ಏನಾದರೂ ಮಾರ್ಗದರ್ಶನ ಮಾಡುವುದರಿಂದಲೇ ಮಾನಸಿಕ ನೆಮ್ಮದಿ ಸಿಕ್ಕುವುದಾದರೆ, ಅದನ್ನೇ ಪೂಜೆ ಎಂದುಕೊಳ್ಳೋಣ. . . ಎಂಬುದು ಮಹದೇಶ್ವರರ ಖಚಿತ ನಿಲುವು, ಈ ಕಾದಂಬರಿಯುದ್ದಕ್ಕೂ ಕೇವಲ ಬಾಹ್ಯ ಪೂಜೋಪಾಚಾರಗಳಲ್ಲಿ ಅವರು ಸಮಯ ಕಳೆಯುವುದನ್ನು ಕಾಣುವುದಿಲ್ಲ.

ಹೀಗೆ ಆಧ್ಯಾತ್ಮದ ಬಗ್ಗೆ ಮಹದೇಶ್ವರರ ಚಿಂತನೆ ಅನನ್ಯವಾದುದು. ಪ್ರಾಯಃ ಪ್ರಪಂಚದ ಎಲ್ಲ ಧರ್ಮಗಳ ರೂವಾರಿಗಳು ಬೋಧಿಸಿರುವುದು ಹೀಗೆಯೇ, ಅನಂತರದ ಅನುಯಾಯಿಗಳು ಅವುಗಳನ್ನು ಅನುಷ್ಠಾನಕ್ಕೆ ತರಲಾರದೆ, ಆ ಕೊರತೆಯು ಕೊರತೆಯಂತೆ ಭಾಸವಾಗದಿರಲು ಅನಗತ್ಯವಾದ ನೂರೊಂದು ಆಚರಣೆಗಳನ್ನು ಅನುಷ್ಠಾನಕ್ಕೆ ತಂದಿರಬೇಕು, ಅದ್ದೂರಿ ಡಂಭಾಚಾರಗಳ ಆರ್ಭಟದಲ್ಲಿ ಸತ್ಯಕ್ಕೆ ಸೂಕ್ತ ಸ್ಥಳಾಭಾವ ಸದಾ ಇದ್ದದ್ದೇ.

ಮಹದೇಶ್ವರರ ವ್ಯಕ್ತಿತ್ವದ ವಿಕಸನ: ಮಾವಿನ ಮರ ರುಚಿ-ರುಚಿಯಾದ ಹಣ್ಣನ್ನು ಕೊಡುವುದರ ಹಿಂದೆ, ಹೊಂಗೆಯ ಮರ ಬಲು ತಂಪಾದ ನೆರಳನ್ನು ನೀಡುವುದರ ಹಿಂದೆ, ಮಲ್ಲಿಗೆಯ ಬಳ್ಳಿ ಸೊಗಸಾದ ಹೂವಿಂದ ಘಮಘಮಿಸುವುದರ ಹಿಂದೆ ಹಲವು ಕಾರಣಗಳಿರುತ್ತವೆ. ಭೂಮಿ ಫಲವತ್ತಾಗಿರಬೇಕು. ಬೀಜವೋ, ಬಳ್ಳಿಯೋ ಯೋಗ್ಯವಾದುದಿರಬೇಕು. ನೀರು, ಬಿಸಿಲು, ಗೊಬ್ಬರ ಇತ್ಯಾದಿಗಳು ಹದವಾದ ಪ್ರಮಾಣದಲ್ಲಿ ದೊರೆಯಬೇಕು. ದುಷ್ಟಕೀಟ ಜಂತುಗಳಿಂದ ಸಂರಕ್ಷಿಸಬೇಕು. ಮೇಲುಸ್ತುವಾರಿಯಿದ್ದಲ್ಲಿ

ಒಳ್ಳೆಯದು. ಹೀಗಿರುವಾಗ ಒಬ್ಬ ಸಾಮಾನ್ಯ ಮಾನವ ಅತಿಮಾನವನಂತೆ ಭುವಿಯನ್ನು ಬೆಳಗಬಂದಾಗ ಸುತ್ತಮುತ್ತಣ ಸಮಾಜದ ಕಾಣ್ಕೆ ಎಷ್ಟಿದೆ ಎನ್ನುವುದನ್ನು ಗಮನಿಸಬೇಕು.

ಉತ್ತಮಾಪುರದ ನವದಂಪತಿಗಳಾದ ಚಂದ್ರಶೇಖರಮೂರ್ತಿ ಹಾಗೂ ಉತ್ತಮರಾಜಮ್ಮರ ಒಬ್ಬನೇ ಮಗನಾದ ಮರಿದೇವರು ಪ್ರೀತಿ–ವಾತ್ಸಲ್ಯಗಳ ನೆರಳಿನಲ್ಲಿ ಬೆಳೆದರೂ, ಮರಿದೇವರಿಗೆ ಅದು ಬಂಧನ ಎನಿಸುತ್ತದೆ. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬಂತೆ ಶ್ರೀಶೈಲದ ಗುರುವಾದ ವ್ಯಾಘ್ರಾನಂದರ ಆಶ್ರಮಕ್ಕೆ ಓಡಿಬರುತ್ತಾನೆ. ವ್ಯಾಘ್ರಾನಂದರು ಗುರುಕುಲದಲ್ಲಿ ಇತರ ಶಿಷ್ಯರಿಗೆ ಯೋಗ ಶಿಕ್ಷಣವನ್ನು ನೀಡುವಾಗ ಮರಿದೇವರು ಸೂಕ್ಷ್ಮ ಪ್ರಜ್ಞೆಯಿಂದ ನಿರೀಕ್ಷಿಸಿ, ತಾನೂ ಅಭ್ಯಾಸಮಾಡುತ್ತಾನೆ. ಬಾಲ್ಯದ ಯೋಗದ ನಿರಂತರ ಅಭ್ಯಾಸದ ಫಲವಾಗಿ ಕೊನೆಯವರೆಗೆ ದೈಹಿಕ, ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುತ್ತಾನೆ.

ಮರಿದೇವರು ಪೂರ್ವಾಶ್ರಮಕ್ಕೆ ಹಿಂದಿರುಗೆನೆಂದು ಖಡಾಖಂಡಿತವಾಗಿ ತಿಳಿಸಿದಾಗ, ವ್ಯಾಘ್ರಾನಂದರು ಅವನನ್ನು ಪಾಠಶಾಲೆಗೆ ಕಳುಹಿಸುತ್ತಾರೆ. ಪಾಠಶಾಲೆಯಲ್ಲಿ ಐದು ವರ್ಷಗಲ ಬಲವಂತದ ಮೋಘಸ್ನಾನವೂ ಮುಗಿಯುತ್ತದೆ. ಅನಂತರವೇ ನಿಜವಾದ ಅಧ್ಯಯನ ಆರಂಭವಾಗಿ ಮರಿದೇವರ ವ್ಯಕ್ತಿತ್ವ ಮೊಗ್ಗಿನ ಸ್ವರೂಪವನ್ನು ಹೊಂದತೊಡಗುತ್ತದೆ. ಶ್ರೀಶೈಲದ ಪ್ರಕೃತಿ ಸೌಂದರ್ಯ ವೀಕ್ಷಣೆ, ಅಲ್ಲಿನ ವನೌಷಧಿ ನಿರೀಕ್ಷಣೆ, ಶರಣರ ವಚನಗಳ ಪರ್ಯವೀಕ್ಷಣೆ ಗುರು–ಶಿಷ್ಯರ ಕಾಯಕವಾಗುತ್ತದೆ. ಒಬ್ಬ ವ್ಯಕ್ತಿ ಎಷ್ಟೇ ಪ್ರತಿಭಾನ್ವಿತನಾದರೂ ಸುವರ್ಣಕ್ಕೆ ಒರೆ ಹಚ್ಚಿ ನೋಡುವಂತೆ ಗುರುವಿನ ಸಹಾಯಹಸ್ತ ಅತ್ಯಗತ್ಯ. ಮರಿದೇವರು ಆ ವಿಷಯದಲ್ಲಿ ಅದೃಷ್ಟವಂತನೇ, ಅವನು ಹೋದಲ್ಲೆಲ್ಲಾ ಸೂಕ್ತ ಮಾರ್ಗದರ್ಶನ ಲಭಿಸುತ್ತದೆ. ಗುರುಗಳೂ ಅರ್ಹ ಶಿಷ್ಯನೊಬ್ಬ ದೊರೆತನೆಂದು ಸಂಭ್ರಮ ಪಡುತ್ತಾರೆ. ಹೀಗಾಗಿ ಆತನ ಸಂಕಲ್ಪಶಕ್ತಿ, ಕ್ರಿಯಾಶಕ್ತಿಗಳು ಅರಳಿ ಮಗಮಗಿಸತೊಡಗುತ್ತವೆ.

ಮರಿದೇವರು ಲೌಕಿಕ ಜೀವನದ ಆಗುಹೋಗುಗಳಿಗೆ ಎಂದೂ ಬೆನ್ನು ತಿರುಗಿಸಿದವನಲ್ಲ. ತನ್ನನ್ನು ಓರ್ವ ಪವಾಡಪುರುಷನೆಂದು ಪೂಜಿಸುತ್ತಿದ್ದವರು ತಾನು ತಲಕಾಡಿನ ಮಲ್ಲಮ್ಮನ ಮನೆಗೆ ಹೋದ ಬಳಿಕ ಬದಲಾದುದನ್ನು ಗಮನಿಸುತ್ತಾನೆ. ಅವನಿಗೇ ಅಚ್ಚರಿಯೆನಿಸುತ್ತದೆ. ಒಬ್ಬ ಮನುಷ್ಯನ ಮೇಲಣ ಸದಭಿಪ್ರಾಯವು, ಆರಾಧನಾಭಾವವು ಅದೆಷ್ಟು ಬೇಗ ವ್ಯತ್ಯಯಗೊಳ್ಳಲು ಸಾಧ್ಯ ಎಂದು. ಅದಕ್ಕೆ ಅಂಜದೆ ಮಲ್ಲಮ್ಮನನ್ನು ತನ್ನ

ಗೋಷ್ಠಿಗೆ ಸೇರಿಸಿಕೊಳ್ಳುವವರೆಗೂ ಆತ ಬಿಡುವುದಿಲ್ಲ. ಇಂತಹ ಹೋರಾಟದ ದಿಟ್ಟ ಮನೋಭೂಮಿಕೆ ಅವನಲ್ಲಿ ಸದಾ ಜಾಗೃತವಾಗಿಯೇ ಇರುತ್ತದೆ. ಜಯ ದೊರೆಯುವವರೆಗೆ ಅವಿಶ್ರಾಂತ ದುಡಿಮೆ. ಜೊತೆಗಾರರನ್ನು ತನ್ನ ತೆರೆದ ತೆಕ್ಕೆಯೊಳಗೆ ಅಡಗಿಸಿಕೊಳ್ಳುವ ಅದ್ಭುತ ತಾದಾತ್ಮ್ಯ, ವಿರೋಧಿಗಳು ಎಲ್ಲಕ್ಕಿಂತ ನಿಸ್ವಾರ್ಥ ಮನೋಭಾವ ಇವು ಆತನ ಹುಟ್ಟು ಗುಣವೆನಿಸುತ್ತದೆ. ಮರಿದೇವರು ಮಹದೇಶ್ವರರಾಗಿ ಕೊನೆಯ ಉಸಿರಿರುವವರೆಗೂ ಇದೇ ಕಾಯಕ, ಇದೇ ಪೂಜೆ, ಇದೇ ಧರ್ಮ, ಎಲ್ಲವೂ ಮನುಕುಲದ ಉದ್ಧಾರಕ್ಕಾಗಿ ಮೀಸಲು. ಕೊಳಗೇರಿಗೆ ಎಲ್ಲರನ್ನು ಕರೆದೊಯ್ಯುವುದು, ಜೈನಧರ್ಮೀಯರನ್ನು ತನ್ನವರಂತೆ ಬಗೆಯುವುದು. ಮಂತ್ರ–ತಂತ್ರಕ್ಕಿಂತ ಮನುಜ ಪ್ರೀತಿಯೇ ಮಿಗಿಲೆಂದು ಸಾರುವುದು ಇತ್ಯಾದಿ ವಿಶ್ವಮಾನವ ಕಲ್ಪನೆಯು ಆತನಲ್ಲಿ ಒಡಮೂಡುತ್ತದೆ.

ಹಲವು ಸಂಘ–ಸಂಸ್ಥೆಗಳು ಒಂದಾಗಿ ಮಾಡಲಾಗದ ಘನಕಾರ್ಯಗಳನ್ನು ಲೀಲಾಜಾಲವಾಗಿ ಎಸಗಿದರೂ, ಅದರ ಶ್ರೇಯಸ್ಸನ್ನು ಮಹದೇಶ್ವರರು ವಿಶ್ಲೇಷಿಸುವ ಪರಿ ಮಾರ್ಮಿಕವಾದುದು. 'ನಾನು ಕೇವಲ ನೆಪ ಅಷ್ಟೇ ಬಿಲ್ಲಯ್ಯ. ಈ ದಿಸೆಯಲ್ಲಿ ಒಬ್ಬೊಬ್ಬರದೂ ಒಂದೊಂದು ರೀತಿ ಸೇವೆ ಸಂದಿದೆ. ಕೆಲವರದು ಪ್ರತ್ಯಕ್ಷ; ಮತ್ತೆ ಕೆಲವರದು ಪರೋಕ್ಷವಾದುದು, ಹಾಗೆ ನೋಡಿದರೆ ಯಾವುದೇ ಇಂತಹ ಬದಲಾವಣೆ ಯಾವ ಒಬ್ಬ ವ್ಯಕ್ತಿಯಿಂದ ಆಗುವುದು ಸಾಧ್ಯವಿಲ್ಲ. ನನ್ನೊಬ್ಬನಿಂದಲೇ ಆಯಿತು ಎಂದು ಯಾರೇ ಅಂದುಕೊಂಡರೂ ಅದು ಅವರವರ ಭ್ರಮೆಯಷ್ಟೇ.... ನನ್ನ ಜೊತೆ ವಾಸುಕಿ ಸರ್ಪವಿತ್ತಲ್ಲಾ.... ಅದು ಆಗಾಗ ನನ್ನ ಮೈಮೇಲೆ ಹತ್ತಿ ಕತ್ತಿನ ಸುತ್ತಾ ಬಳಸಿಕೊಂಡು, ಹೆಡೆ ಬಿಚ್ಚುತ್ತಿತ್ತು. ಅದನ್ನು ಕಂಡ ಕೆಲವರು ನನ್ನನ್ನು 'ಸಾಕ್ಷಾತ್ ಶಿವ' ಎನ್ನುತ್ತಿದ್ದರಂತೆ! ಅವರ ಕಲ್ಪನೆಯಲ್ಲಿ ಶಿವ ಕೊರಳಿಗೆ ಹಾವನ್ನು ಧರಿಸುತ್ತಿದ್ದರಿಂದ ನಾನೂ ಅವರ ದೃಷ್ಟಿಯಲ್ಲಿ ಹಾಗೆಯೇ ಆಗಿದ್ದೆ. ಆದ್ದರಿಂದಲೇ ಎಷ್ಟೋ ಬಾರಿ ಎಂತಹ ವಿಚಿತ್ರ ಆಲೋಚನೆಯ ಕ್ರಮ ಇವರದು ಎನಿಸುತ್ತಿತ್ತು. ಇವನ್ನು ನಿಮಗೆ ಯಾಕೆ ಹೇಳಿದೆ ಅಂದರೆ ವಾಸುಕಿ, ಪ್ರಾಣಿಯಾದರೂ ಪರೋಕ್ಷವಾಗಿ ಅದರಿಂದಲೂ ನಾನು ಉಪಕೃತನಾಗಿದ್ದೇನೆ (ಪುಟ ಸಂಖ್ಯೆ ೧೯, ಸೃಷ್ಟಿ, ಡಾ॥ ಶೀಲಾಕುಮಾರಿ).

ಉತ್ತಮಪುರ ಎಂಬ ಸಾಮಾನ್ಯ ಪುಟ್ಟಹಳ್ಳಿಯಲ್ಲಿ ಜನಿಸಿದ ಬಾಲಕನೊಬ್ಬ ತನ್ನ ಜೀವಿತ ಅವಧಿಯಲ್ಲಿ ದೈವತ್ವಕ್ಕೆ ಏರಿದುದು ಒಂದು ಅದ್ಭುತ ಸಾಧನೆಯಾಗಿದೆ. ಇದರ

ಜೊತೆಗೆ ಇಲ್ಲಿನ ಲೇಖಕರಾದ ಮಗು ಅವರು ಮಹದೇಶ್ವರರು ದೈವೀ ಸ್ವರೂಪರಾಗಲು ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ಶಿವನೆಂಬ "ದೇವತೆಯ ಚಿತ್ರವು ಚಿತ್ರಪಟಗಳ ಮುಖಾಂತರ ಮನಸ್ಸಿಗೆ ಎಷ್ಟು ನಿಖರವಾಗಿದೆಯೆಂದರೆ ಸರ್ಪವಿಲ್ಲದೆ ಶಿವನ ರೂಪ ನಮ್ಮ ಕಣ್ಣೆದುರಿಗೇ ಬರದು. ಬಹುತೇಕ ಅವಿದ್ಯಾವಂತರಾದ ಅಂದಿನ ಜನತೆ ಆದ್ದರಿಂದ ಅವರನ್ನು ಶಿವನೆಂದು ಭಾವಿಸಿದುದರಲ್ಲಿ ಆಶ್ಚರ್ಯವಿಲ್ಲ ಎನ್ನಬಹುದಾಗಿದೆ.

ಲೇಖಕರಾದ ಶ್ರೀಯುತ ಮಗು ಅವರು ಕಾದಂಬರಿಗಾಗಿ ಆಯ್ದುಕೊಂಡಿರುವ ವಿಷಯ ಸಂಕೀರ್ಣವಾಗಿದೆ. ಏಕೆಂದರೆ ಸಾಮಾನ್ಯವಾಗಿ ಜನಪ್ರಿಯ ಕಾದಂಬರಿಗಳಲ್ಲಿ ಶೃಂಗಾರವೋ, ವೀರವೋ, ಕರುಣವೋ, ಪ್ರಧಾನರಸವಾಗಿರುವುದನ್ನು ನೋಡುತ್ತೇವೆ. ಭಕ್ತಿ ರಸಪ್ರಧಾನವಾದ ಮಹದೇಶ್ವರರ ಚರಿತ್ರೆಯನ್ನು ಸರಳವಾಗಿ ಓದಿಕೊಂಡು ಹೋಗುವಂತೆ ರಚಿಸಲು ಕಠಿಣವೇ ಹೌದು. ಹಾಗಾಗಿ ಅದೊಂದು ಸಾಕ್ಷ್ಯಕೃತಿಯಾಗಿಬಿಡುವ ಸಂಭವ ಹೆಚ್ಚು. ಏಕೆಂದರೆ ಇಲ್ಲಿ ನಾಯಿಕೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲ ಪಾತ್ರಗಳು ಕೇಂದ್ರವ್ಯಕ್ತಿ ಮಹದೇಶ್ವರ ಸುತ್ತ ಸುತ್ತುತ್ತಿದ್ದು, ಆತನ ಪ್ರಭಾವಕ್ಕೆ ಒಳಗಾಗಿವೆ. ತಮ್ಮತನಗಳಾದ ಅಸೂಯೆ, ದ್ವೇಷ, ಸ್ವಾರ್ಥವನ್ನು ಆತನ ಪ್ರಭಾವಳಿಯಿಂದ ತ್ಯಜಿಸಿ, ಆತನ ನಿಸ್ವಾರ್ಥ ಕಾಯಕ ಗುಣಗಳನ್ನು ಅನುಕರಿಸಬಯಸಿದೆ. ಮಹದೇಶ್ವರರು ಊರಿಂದ ಊರಿಗೆ, ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಜಂಗಮನಂತೆ ಅಲೆದಾಡುತ್ತಿದ್ದರಿಂದ ಆಯಾ ಊರಿನ ಹೆಚ್ಚಿನ ಪಾತ್ರಗಳು ಅಲ್ಲಲ್ಲಿಯೇ ಮುಕ್ತಾಯಗೊಂಡು, ಮಲೆಯ ಮಹದೇಶ್ವರ ಬೆಟ್ಟದಲ್ಲಿ ನೆಲೆಸಿದ ಬಳಿಕ ಬರುವ ಪಾತ್ರಗಳು ಮಾತ್ರ ಕೊನೆಯತನಕ ಮುಂದುವರಿಯುತ್ತ ಹೋಗುವುದನ್ನು ನೋಡಬಹುದಾಗಿದೆ.

ಈ ಕಾದಂಬರಿಯಲ್ಲಿ ಲೇಖಕರ ತಂತ್ರಕೌಶಲದ ಪರಸ್ಪರ ಹೊಂದಾಣಿಕೆ ಸ್ಪಷ್ಟವಾಗಿ ತೋರುತ್ತದೆ. ಲೇಖಕರಾದ ಗುರುಸ್ವಾಮಿ ಅವರು ಸಾವಧಾನದಿಂದ ಮರಿದೇವರು ಮಹದೇಶ್ವರರಾಗಿ ರೂಪ ಪಡೆಯುವ ಮಹಾಯಾತ್ರೆಯನ್ನು ಬಹಳ ಸರಳವಾಗಿ ನಿರೂಪಿಸಿದ್ದಾರೆ. ಲೇಖಕರ ಬರವಣಿಗೆ ಕಾದಂಬರಿಯಲ್ಲಿ ಎಲ್ಲಿಯೂ ಆತುರವಾಗಿ ಕಂಡುಬರುವುದಿಲ್ಲ. ಆದ್ದರಿಂದ ಮಹಾಯಾತ್ರಿಕ ಕಾದಂಬರಿಯ ಬಂಧವು ಸೂಕ್ತ ಪ್ರಮಾಣ ಜ್ಞಾನವನ್ನು ಪಡೆದಿದೆ.

ಕನ್ನಡದಲ್ಲಿ ಬಂದಿರುವ ಬಹುತೇಕ ಕಾದಂಬರಿಗಳಂತೆ ಇಲ್ಲಿ ಗುರುಸ್ವಾಮಿ ಅವರು ಕಥೆಯನ್ನು ನೇರವಾಗಿ ಸರ್ವಸಾಕ್ಷಿ ಪ್ರಜ್ಞೆಯಿಂದ ನಿರೂಪಿಸಿದ್ದಾರೆ. ಇದು ಸೂಕ್ತ ಮಾರ್ಗ ಎನಿಸುತ್ತದೆ. ಏಕೆಂದರೆ ಮಹದೇಶ್ವರರು ಉತ್ತಮ ಪುರುಷರಂತೆ ನಾನು ಎಂಬಂತೆ ನಿರೂಪಿತವಾಗಿದ್ದರೆ, ಉಳಿದ ಪಾತ್ರಗಳ ಒಳತೋಟಿಗಳನ್ನು, ಜಂಜಾಟಗಳನ್ನು ಸಮರ್ಥವಾಗಿ ಸೆರೆಹಿಡಿಯಲಾಗುತ್ತಿರಲಿಲ್ಲ.

ಈ ಕಾದಂಬರಿಯಲ್ಲಿ ಸಂಗಪ್ಪ ಬಿಲ್ಲಯ್ಯ, ಹಾಗೂ ಕಾಳಮ್ಮ ಮೊದಲಾದ ಜನಸಾಮಾನ್ಯರ ಜೀವನದ ಆಗು-ಹೋಗುಗಳು ನೈಜತೆಯ ಹಿನ್ನೆಲೆಯಲ್ಲಿಯೇ ಪ್ರತಿಪಾದಿತವಾಗಿರುವಂತೆ ಮಹದೇಶ್ವರನಂತಹ ಉದಾತ್ತ, ಕ್ರಾಂತಿಕಾರಕ ಸಂತನೂ ಸೊಗಸಾಗಿ ನಿರೂಪಿತನಾಗಿದ್ದಾನೆ. ನಮ್ಮ ಆರಾಧ್ಯ ವ್ಯಕ್ತಿಯ ಪರಕಾಯ ಪ್ರವೇಶ ಕಠಿಣವಾದರೂ, ಆ ಮಾನಸಿಕ ದೂರ ಕಾದಂಬರಿಯಲ್ಲೆಲ್ಲೂ ಕಾಡುವುದಿಲ್ಲ, ಮಹದೇಶ್ವರನು ನಮ್ಮಲ್ಲಿ ಒಬ್ಬನಾಗಿ ನಮ್ಮೆಲ್ಲರಿಗೆ ಬೇಕಾದವನಾಗಿ ಇಂದಿಗೂ ಹೆಚ್ಚು ಪ್ರಸ್ತುತ ವ್ಯಕ್ತಿಯಾಗಿ ಗೋಚರಿಸುತ್ತಾನೆ.

ಕಾದಂಬರಿಗಳನ್ನು ಸಾಮಾನ್ಯವಾಗಿ ವಾಸ್ತವಮಾರ್ಗ, ಆದರ್ಶಮಾರ್ಗ ಎಂದು ವಿಭಾಗ ಮಾಡುವುದುಂಟು. ಹಾಗಾಗಿ ಇಲ್ಲಿ 'ಮಹಾಯಾಂತ್ರಿಕ' ಕಾದಂಬರಿ ಸದಾ ವಾಸ್ತವಿಕ ಮಾರ್ಗವಾಗಿದೆ. ಮಹದೇಶ್ವರನು ಐತಿಹಾಸಿಕ ವ್ಯಕ್ತಿಯಾಗಿದ್ದು ಕಥೆಗೆ ಸಹಜವಾಗಿಯೇ ವಾಸ್ತವಿಕತೆಯ ಚೌಕಟ್ಟು ಲಭಿಸಿದೆ. ಕಥೆಯು ಅಂದು ನಡೆದಿದ್ದರೂ ಅದರ ಬಹು ಅಂಶಗಳು ಇಂದಿಗೂ ನಮ್ಮೆಲ್ಲರ ಬದುಕಿಗೆ ತೆರೆದು ಹೊಂದಿಕೊಳ್ಳುತ್ತಾ ಹೋಗುತ್ತವೆ. ಹಲವಾರು ಧಾರ್ಮಿಕ ಆಚಾರ-ವಿಚಾರಗಳಲ್ಲಿ ಸಾಮಾಜಿಕ ರೀತಿ-ನೀತಿಗಳಲ್ಲಿ ನಮ್ಮ ನಡೆ-ನುಡಿ ಹೇಗಿರುತ್ತದೆ. ಹೇಗಿರಬೇಕು ಎಂಬುದನ್ನು ಪಾತ್ರಗಳ ಮುಖಾಂತರ ಲೇಖಕರು ಸೂಚ್ಯವಾಗಿ ಹೇಳುತ್ತಾ ಹೋಗುತ್ತಾರೆ. ಲೇಖಕರ ಸುಧಾರಣಾಪರ ಉತ್ಸಾಹವನ್ನು ಮಾತ್ರ ಗಮನಿಸಬಹುದು. ಬದುಕನ್ನು ಸುಂದರವನ್ನಾಗಿ, ಸಾರ್ಥಕವನ್ನಾಗಿ ಮಾಡಿಕೊಂಡು ಉಳಿದವರಿಗೂ ದಾರಿದೀಪವಾಗಬಹುದೆಂದು ಇಲ್ಲಿ ತೋರಿಸಲಾಗಿದೆ.

ಬದುಕಿನ ಬಗ್ಗೆ ಕೇವಲ ಅಂತರ್ಮುಖತೆಗಾಗಲೀ ಅವಕಾಶವಿಲ್ಲ. "ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು" ಎಂಬಂತೆ ಪೂರ್ವ ಆಚಾರಗಳಿಗೆ ನವೀನ ಅರ್ಥಗಳನ್ನು ವಿವರಿಸುವ ಅರ್ಥಹೀನ ಮೂಢನಂಬಿಕೆಗಳನ್ನು ಖಂಡಿಸುವ, ಮಾನವೀಯ

ಮೌಲ್ಯಗಳಿಗೆ ಪ್ರಥಮ ಶ್ರೇಯಾಂಕ ನೀಡುವ ನಮ್ಮ ನಾಯಕ ಗೃಹಸ್ಥಾಶ್ರಮದವರಿಗೂ ಅನುಕರಣೀಯನಾಗಿದ್ದಾನೆ.

"ಸಮಾಜ ಸುಧಾರಣೆಯ ಕಳಕಳಿ ಪ್ರಧಾನವಾಗಿರುವ ಕಾಂಬರಿಗಳಲ್ಲಿ ವಾಸ್ತವತೆ ಯಾವ ರೀತಿಯಲ್ಲಿ, ಯಾವ ನೆಲೆಯಲ್ಲಿ ಕ್ರಿಯಾಶೀಲವಾಗುತ್ತದೆ ಎಂಬುದು ಪರಿಶೀಲನೆಗೆ ತಕ್ಕ ವಿಷಯವಾಗಿದೆ..... ಸಮಾಜ ಸುಧಾರಣೆಯ ಕಳಕಳಿ ಪ್ರಧಾನವಾಗಿರುವ ಕಾದಂಬರಿಕಾರ ಪ್ರಥಮತಃ ತಾನು ಬದುಕುತ್ತಿರುವ ಸಮಾಜ ಬದಲಾಗಬೇಕಾದದ್ದು, ಪರಿವರ್ತನೆಗೆ ಒಳಗಾಗಬೇಕಾದದ್ದು ಎಂಬ ಪೂರ್ವನಿಶ್ಚಿತ ಗ್ರಹಿಕೆಯುಳ್ಳವನಾಗಿರುತ್ತಾನೆ. ಬದಲಾವಣೆ ಅಥವಾ .ಪರಿವರ್ತನೆಗೆ ಸಂಬಂಧಿಸಿದ ಅವನ ಪೂರ್ವಗ್ರಹಿಕೆಗೆ ಹಿನ್ನೆಲೆಯಾಗಿ ಅವನ ಸಾಮಾಜಿಕ ಸಂದರ್ಭದ ಹೊರಗಿನ ಒಂದು 'ಮಾದರಿ'ಯನ್ನು ಸಾಮಾನ್ಯವಾಗಿ ಆತ ಗುರುತಿಸಿಕೊಂಡಿರುತ್ತಾನೆ. ಆ 'ಮಾದರಿ' ಯಾವುದೋ ವಿಚಾರವಾದ ಪ್ರೇರಣೆಯಿಂದ ಪರಿಕಲ್ಪಿತವಾದದ್ದಿರಬಹುದು ಅಥವಾ ಯಾವುದೋ ವಾಸ್ತವ ಸಮಾಜದ ನಿದರ್ಶನದಿಂದ ಪಡೆದದ್ದಿರಬಹುದು... ಆ ಮಾದರಿಯ ಬಗ್ಗೆ ಪ್ರಶಂಸಾತ್ಮಕ ಅಥವಾ ಆರಾಧಾನಾ ಧೋರಣೆ ಹಾಗೂ ಅವನು ಬಾಳುತ್ತಿರುವ ಸಮಾಜದ ವಾಸ್ತವದ ಬಗ್ಗೆ ಖಂಡನಾತ್ಮಕ ಅಥವಾ ತಿರಸ್ಕೃತ್ಮಕ ಧೋರಣೆ ಅವನಲ್ಲಿ ಪ್ರಬಲವಾಗಿರುತ್ತದೆ... ಆದ್ದರಿಂದ ಪ್ರಶಂಸೆ ಹಾಗೂ ಖಂಡನೆಗೆ ಒಳಗಾಗುವ ಎರಡು ಬಗೆಯ ವ್ಯಕ್ತಿ. ಸಂಗತಿಗಳು ಉತ್ಪ್ರೇಕ್ಷಿತವಾಗುತ್ತವೆ. ಆ ಎರಡಕ್ಕೂ ಸಂಬಂಧಿಸಿದಂತೆ ವಾಸ್ತವದ ಲಯ ತಪ್ಪುತ್ತದೆ". (ಜಿ.ಎಚ್.ನಾಯಕ 'ನಿಜದನಿ' ಮಹಾಮನ ಸೃಷ್ಟಿ ಡಾ: ಶೀಲಾಕುಮಾರಿ)

ಈ ನಿಟ್ಟಿನಿಂದ ಆಲೋಚಿಸಿದರೆ ಮೊದಲು ಇಂದಿನ ನಮ್ಮ ಸಮಾಜದ ರೀತಿ-ನೀತಿಗಳನ್ನು ಗಮನಿಸಬೇಕಾಗುತ್ತದೆ. ಧಾವಂತವೇ ಪ್ರಧಾನವಾಗಿರುವ ಈ ವೈಜ್ಞಾನಿಕ ಕಾಲದಲ್ಲಿ ಸ್ವಾರ್ಥ ಭಾವನೆ, ಅಧಿಕಾರದ, ಲಂಚಗುಳಿತನ ಇತ್ಯಾದಿಗಳು ನಮ್ಮನ್ನು ಆಕ್ರಮಿಸಿಬಿಟ್ಟಿವೆ. ನಿಸ್ವಾರ್ಥಸೇವೆ, ಪ್ರೀತಿವಾತ್ಸಲ್ಯ ಮೊದಲಾದ ಮಾನವೀಯ ಮೌಲ್ಯಗಳು ಕಾಣುವುದು, ಕೊನೆಯವರೆಗೆ ಉಳಿದುಕೊಳ್ಳುವುದು ದುಸ್ತರವಾಗಿದೆ. ಹೀಗಿರುವಲ್ಲಿ ಸಾಮಾಜಿಕ ಕಳಕಳಿಯುಳ್ಳ ಲೇಖಕನಿಗೆ ಆತನದೇ ಆದ ಕರ್ತವ್ಯಗಳು ಇರುತ್ತವೆ. ತನ್ನ ಲೇಖನಿಯ ಮುಖಾಂತರ ಹೊಸ ಕ್ರಾಂತಿಯೊಂದಕ್ಕೆ ಹುಟ್ಟು ಹಾಕುವೆನೆಂಬ ಭ್ರಮೆ ಇರದಿದ್ದರೂ, ಜೀವನ ಹೀಗಿದ್ದರೆ ಚಂದವೆಂದು ತೋರಿಸುವ ತಹತಹಿಕೆ ಆತನಲ್ಲಿ ಇರುವುದು ಸಹಜ. ಅಂತಹ

ಸಮಯದಲ್ಲಿ ಯಾವುದೋ ಕಲ್ಪನಾಲೋಕದ ಮಾದರಿಯನ್ನು ನಮ್ಮ ಕಣ್ಣೆದುರು ಮೂಡಿಸುವ ಬದಲು ನಮ್ಮ ಸುತ್ತಮುತ್ತಲ ಸಮಾಜದಲ್ಲಿಯೇ ನಡೆದ ಕ್ರಾಂತಿಯನ್ನು, ಸಾಧನೆಯನ್ನು ಆದಷ್ಟು ಯಥಾವತ್ತಾಗಿ ಚಿತ್ರಿಸುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. 'ಮಹಾಯಾತ್ರಿಕ' ಕಾದಂಬರಿಯಲ್ಲಿ ನಾವು ಕಾಣುವುದು ಇದೇ ಭಾವನನ್ನು, ಇದೇ ತುಂಬು ಜೀವನದ ಅರಕೆಯನ್ನು, ಇದೇ ಭಾವವನ್ನು, ಇದೇ ತುಂಬು ಜೀವನದ ಅರಕೆಯನ್ನು, ಇದೇ ಚಿರಂತನ ಮಾನವೀಯ ಮೌಲ್ಯವನ್ನು. ಯುಗ-ಯುಗ ಕಳೆದರೂ ಕೆಲವು ಮೌಲ್ಯಗಳು ರೂಢಿಯಲ್ಲಿ ಸದಾ ಚಲಾವಣೆಯಲ್ಲಿಲ್ಲದಿದ್ದರೂ ತಮ್ಮ ಅರ್ಥವಂತಿಕೆಯನ್ನು ಉಳಿಸಿಕೊಂಡಿವೆ. ಅಂತಹ ಮೌಲ್ಯಗಳ ಜಾಗೃತಿ ಇಲ್ಲಿ ಪ್ರಧಾನವಾಗಿದೆ. ಹಾಗೆಂದ ಮಾತ್ರಕ್ಕೆ ನಮ್ಮ ಸಮಾಜದ ಬಗ್ಗೆ ತಿರಸ್ಕಾರದ ಭಾವನೆ ಇಲ್ಲಿ ರೂಪುಗೊಂಡಿಲ್ಲ. ಈ ಕಾದಂಬರಿಯಲ್ಲಿ ನಮ್ಮ ಬದುಕಿನ ಬಗ್ಗೆ ತಿರಸ್ಕಾರಾತ್ಮಕ ಧೋರಣೆಗಿಂತ ಸುಧಾರಣಾತ್ಮಕ ನಿಲುವು ಸ್ಪಷ್ಟವಾಗಿವೆ.

ಯಾವ ಕಾಲದ ಸಮಾಜವೂ ಸಂಪೂರ್ಣ ಪರಿಪೂರ್ಣವಾಗಿರುವುದಿಲ್ಲ. ಹಿಂದೆ ಇದ್ದಂತಹ ತಪ್ಪು-ಒಪ್ಪುಗಳು ಇಂದೂ ಇವೆ. ಮುಖ್ಯವಾಗಿ ಸುಧಾರಣೆಯಾಗಬೇಕಾಗಿರುವುದು ನಮ್ಮ ಅಂತಃಪ್ರಜ್ಞೆಯಲ್ಲಿ, ಬಾಹ್ಯ ನಡವಳಿಕೆಯಲ್ಲಿ ಎಂದು ಕಾದಂಬರಿಯಲು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ.

ಯಾವುದೇ ಒಬ್ಬ ಕಾದಂಬರಿಕಾರ ತನ್ನ ಕಾಂಬರಿಯ ವಸ್ತು ಮತ್ತು ತಂತ್ರವನ್ನು ಸಮರ್ಥವಾಗಿ ದುಡಿಸಿಕೊಳ್ಳುವುದು ಆತನು ಬಳಸುವ ಭಾಷೆಯಿಂದ. ಕಾದಂಬರಿಯಲ್ಲಿ ಬರುವ ಭಿನ್ನ-ಭಿನ್ನ ಸಂದರ್ಭಗಳಲ್ಲಿ ಕಾದಂಬರಿಕಾರನ ಭಾಷೆಯ ಪ್ರಯೋಗ ಯಾವ ಮಟ್ಟದಲ್ಲಿದೆ ಎಂಬುದು ಗಮನಾರ್ಹ ವಿಷಯ. ಈ ಕಾದಂಬರಿಯಲ್ಲಿ ಲೇಖಕರಾದ ಗುರುಸ್ವಾಮಿ ಅವರು ಸಾಕಷ್ಟು ಎಚ್ಚರವಹಿಸಿದ್ದಾರೆ ಎನ್ನಬಹುದಾಗಿದೆ. 'ಮಹಾಯಾತ್ರಿಕ' ಕಾದಂಬರಿಯ ಬಹುತೇಕ ಪಾತ್ರಗಳು ಗ್ರಾಮೀಣ ಹಾಗೂ ಅರಣ್ಯವಾಸಿಗಳಾದ ಚುಂಚರ ಆಗಿರುವುದರಿಂದ ಅವರು ಹಳ್ಳಿಗಾಡಿನ ಭಾಷೆಯನ್ನು ಆ ಭಾಗದ ಜನರ ಆಡುನುಡಿಗಳನ್ನೇ ಬಳಸಿದ್ದಾರೆ.

ಮರಿದೇವರು ಪರಿಚಿತ ಜನರೊಡನೆ ಬೆರೆತಾಗ ನಡೆಯುವ ಸಂಭಾಷಣೆಯನ್ನು ಈ ಕಾದಂಬರಿಯಲ್ಲಿ ಉದಾಹರಿಸಬಹುದಾಗಿದೆ. ಹಾಗೆಯೇ ಸುತ್ತೂರು ಮಠಕ್ಕೆ ಭೇಟಿಕೊಟ್ಟಾಗ ಸಿದ್ದನಂಜದೇಶಿಕರೊಡನೆ ಮರಿದೇವರ ಸಂಭಾಷಣೆಯು ಹಾಗೆಯೇ, ವ್ಯಾಘ್ರಾನಂದರು

ಮರಿದೇವರ ಜೊತೆ ತಾಯಿತದ (ಯಂತ್ರ) ಬಗ್ಗೆ ವಿವರಿಸುವಾಗ, ಮಹದೇಶ್ವರರು ಸಂಗಪ್ಪನ ಜೊತೆಗೆ ಕುಲಪ್ರಜ್ಞೆಯ ಬಗ್ಗೆ, ಭಾನುಕೀರ್ತಿಯ ಜೊತೆ ಧರ್ಮದ ಬಗ್ಗೆ, ಬಿಲ್ಲಯ್ಯನ ಜೊತೆ ತನ್ನ ಸಹವಾಸಿಗಳ ಉಪಕಾರದ ಬಗ್ಗೆ ಮಾತನಾಡುವಾಗ ಹೀಗಿರುವುದನ್ನು ಕಾಣಬಹುದಾಗಿದೆ. ಇಂತಹ ಹಲವೆಡೆ ಸಂವಾದಗಳು ಉಪದೇಶಾತ್ಮಕವಾಗಿ ಇರುವುದರಿಂದ ಸಂಭಾಷಣೆಯ ವಸ್ತು ಗಹನವಾದುದರಿಂದ ದೀರ್ಘವಾಗಿ ಬೇಕಾಗಿದೆ. ಈ ಕಾದಂಬರಿಯಲ್ಲಿ ಲೇಖಕರು ಸೂಕ್ತ ಗಾದೆಗಳನ್ನು ಹಾಗೂ ಹಾಸ್ಯ ಪ್ರಸಂಗಗಳನ್ನು ತಂದು ಕಾದಂಬರಿಯು ಕೇವಲ ಉಪದೇಶಾತ್ಮಕವಾಗಿದೆ ಎಂಬ ಭಾವ ಮೂಡದಂತೆ ಜಾಗರೂಕರಾಗಿದ್ದಾರೆ.

ಲೇಖಕರಾದ ಗುರುಸ್ವಾಮಿ ಅವರು 'ಮಹಾಯಾತ್ರಿಕ' ಕಾದಂಬರಿಯಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಅನಗತ್ಯ ಮತೀಯ ಸಿದ್ಧಾಂತಗಳನ್ನು ಹೇರುವ ಪ್ರಯತ್ನವನ್ನು ಮಾಡಿಲ್ಲ. ಮಹದೇಶ್ವರರ ನಡೆ, ನುಡಿ ಎಲ್ಲವೂ ಎಲ್ಲ ಜನಾಂಗದವರಿಗೂ ದೇಶದವರಿಗೂ ಆದರ್ಶಪ್ರಾಯವಾಗುತ್ತದೆ. ಸೀಮಿತ ವಲಯಕ್ಕೆ ದೈವಸ್ವರೂಪಿಯೆನಿಸಿದ್ದ ಅವರು ಇಲ್ಲಿ ವಿಶ್ವಕ್ಕೆ ಮಾದರಿಯಾಗಿ ವಾಸ್ತವಿಕ ನೆಲೆಗಟ್ಟಿನಲ್ಲಿ ನಿರೂಪಿತರಾಗಿದ್ದಾರೆ. ಸ್ವಲ್ಪ ಎಚ್ಚರ ತಪ್ಪಿದ್ದರೂ ಜಾತಿ, ಧರ್ಮ ಪ್ರಚಾರದ ಆಶಯವನ್ನು ಪಡೆದುಕೊಳ್ಳಬಹುದಾಗಿದ್ದ ಈ ಕೃತಿ, ಲೇಖಕರ ಸಮಚಿತ ಹದದಲ್ಲಿ ಮೂಡಿಬಂದಿರುವ ಕಾರಣ, ಇಂತಹ ಇಲ್ಲಿ ಸಾಧ್ಯತೆಗಳನ್ನು ಮೀರಿ ಶುದ್ಧ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಕೃತಿಯಾಗಿ ಒಡಮೂಡಿದೆ, ಮಹದೇಶ್ವರರ ಬಗ್ಗೆ ಸೃಷ್ಟಿಯಾಗಿರುವುದು ಕೇವಲ ಜನಪದ ಸಾಹಿತ್ಯ; ಚಾರಿತ್ರಿಕ ದಾಖಲೆಗಳಂತೂ ಅಷ್ಟಿಷ್ಟೂ ಸಿಕ್ಕುವುದಿಲ್ಲ, ಈ ಮಹಾಯಾತ್ರಿಕ ಕಾದಂಬರಿಯಲ್ಲಿ ಜನಪದ ಸಾಹಿತ್ಯದ ಆಶಯವನ್ನು ತೆಗೆದುಕೊಳ್ಳಬಹುದೇ ಹೊರತು, ಶುದ್ಧ ಚರಿತ್ರೆಯಾಗಿ ಅಲ್ಲ. ಇಂತಹ ಸನ್ನಿವೇಶದಲ್ಲಿ ಸೃಜನಶೀಲ ಕೃತಿಕಾರನೊಬ್ಬನ ಸಂಸ್ಕಾರ ಮತ್ತು ಆಶಯಗಳಿಗನುಗುಣವಾಗಿ ಜನಪದ ಸಾಹಿತ್ಯ ಪರಿಭಾವಿಸಲ್ಪಡುತ್ತದೆ. ತನ್ನ ಬೌದ್ಧಿಕ ತರ್ಕದಿಂದ ಲೇಖಕ ಇಡೀ ಚಾರಿತ್ರಿಕ ಸಂದರ್ಭವನ್ನು ಹೇಗೆ ಬೇಕಾದರೂ ಅರ್ಥೈಸಿಬಿಡಬಹುದು ಅಥವಾ ಯಾವುದೋ ಒಂದು ನಿರ್ದಿಷ್ಟ ಸಮೂಹದ ಮುಖವಾಣಿಯಾಗಬಹುದು. ಈ ಮೂಲಕ ಚರಿತ್ರೆಯ ವಿಕೃತ ನಿರ್ಮಾಣದ ಸಾಧ್ಯತೆಯೂ ಇರುತ್ತದೆ. ಆದರೆ ಪ್ರಸ್ತುತ ಮಗು ಅವರು ಈ ಕಾದಂಬರಿಯಲ್ಲಿ ಇಂತಹ ಯಾವುದೇ ಬಲವರನ್ನು ಪ್ರಜ್ಞೆಯ ಸ್ತರಕ್ಕೆ ತಂದುಕೊಳ್ಳದೇ ಈ ಕಾದಂಬರಿಯನ್ನು ರಚನೆ ಮಾಡಿದ್ದಾರೆ ಹಾಗೂ ಈ ಮಹಾಯಾತ್ರಿಕ ಕಾದಂಬರಿಯಲ್ಲಿ ಮಗು ಅವರು ತಮ್ಮ

ಸ್ವೋಪಜ್ಞತೆಯನ್ನು ಮರೆದು ಸಹೃದಯರ ಮನಸ್ಸಿನಲ್ಲಿ ಶಾಶ್ವತವಾದ ಸ್ಥಾನಮಾನವನ್ನು ಪಡೆದಿರುವುದನ್ನು ನೋಡಬಹುದಾಗಿದೆ.

ಬಾಲ್ಯದಿಂದಲೇ ದೈವೀ ಗುಣಗಳುಳ್ಳ ಸಾಮಾನ್ಯ ಮನುಷ್ಯನೊಬ್ಬ ತನ್ನ ಸರಳತೆ, ಸತ್ಯ, ಪ್ರಾಮಾಣಿಕತೆ, ಆಧ್ಯಾತ್ಮಿಕ ಸಿದ್ಧಿ, ಉದಾತ್ತ ಧ್ಯೇಯ–ಚಿಂತನೆಗಳ ಮೂಲಕ ಅಂಧಕಾರದ ಮಡುವಿನಲ್ಲಿ ಬಿದ್ದಿರುವ ನೊಂದ ಪಾಮರ ವರ್ಗದವರನ್ನು ಬೆಳಕಿನೆಡೆಗೆ ಕರೆತಂದು ಸಾಮಾಜಿಕ ಅರಿವು ಮೂಡಿಸುವ ಮೂಲಕ ತಾನು ಹೇಗೆ ಒಂದು ಸಚೇತನ ದಿವ್ಯ ಶಕ್ತಿಯಾಗಿ ಜನರ ಹೃದಯದಲ್ಲಿ ಅಚ್ಚಳಿಯದೇ ಚಿರಸ್ಥಾಯಿಯಾಗಿ ನಿಲ್ಲುವ ದೈವೀ ಸ್ಥಾನಕ್ಕೇರಬಲ್ಲ ಎಂಬುದನ್ನು ಮಗು ಅವರು ಈ ಕಾದಂಬರಿಯಲ್ಲಿ ಅತ್ಯಂತ ಮನೋಜ್ಞವಾಗಿ ಎಳೆಎಳೆಯಾಗಿ ಬಿಡಿಸಿರುವುದನ್ನು ನಾವು ನೋಡಬಹುದಾಗಿದೆ.

ಈ ಕಾದಂಬರಿಯಲ್ಲಿ ಮಹದೇಶ್ವರರು ಕಾಡುಮೇಡುಗಳನ್ನು ಅಲೆಯುವಾಗ ಪ್ರಭುಸ್ವಾಮಿಗಳು ಮಹದೇಶ್ವರರ ಕಾರ್ಯಕ್ರಮದ ಸೋಲು ಗೆಲುವುಗಳ ಬಗ್ಗೆ ವಿಚಾರಿಸುತ್ತಿದ್ದರು. ಕೆಲವು ವಿಷಯಗಳನ್ನು ಸುಲಭವಾಗಿ ಒಪ್ಪಿಕೊಂಡು ಬಿಡುತ್ತಾರೆ. ಆದರೆ ಇನ್ನು ಕೆಲವು ವಿಚಾರಗಳಿಗೆ ಬಂದರಂತೂ, ವಿಚಾರದ ಹಂತದಲ್ಲಿ ಅವರು ಒಪ್ಪಿದಂತೆ ಕಂಡರೂ ಅನುಷ್ಠಾನದ ಮಜಲಿನಲ್ಲಿ ಹಿಂಜರಿಯುತ್ತಾರೆ. ಜನರಿಗೆ ಶುದ್ಧ ವಿಚಾರಗಳ ಬಗ್ಗೆ ಇರಬಹುದಾದ ಮುಕ್ತ ಮನಸ್ಸಿನ ಗೌರವಕ್ಕಿಂತ, ವಿಚಾರಗಳನ್ನು ಮಂಡಿಸುವವರ ಬಗ್ಗೆ ಇರುವ ಪೂರ್ವ ನಿರ್ಧಾರಿತ ನಂಬಿಕೆಗಳಿಂದಲೇ ವಿಚಾರಗಳನ್ನು ತೂಗಿ ನೋಡುತ್ತಾರೆ ಎಂದು ತನ್ನ ಸಮಸ್ಯೆಯನ್ನೂ ಒಮ್ಮೆ ಅವರ ಮುಂದೆ ವಿವರಿಸಿದರು ಮಹದೇಶ್ವರರು. "ಆದರೆ ನೀನು ಹೇಳುವುದು ಏನೆಂದು ನನಗೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ ಮಹಾದೇವ" ಎಂದರು ಪ್ರಭುಸ್ವಾಮಿಗಳು.

'ನೋಡಿ ಗುರುಗಳೇ, ನಾನು ಹುಲಿಯ ಬೆನ್ನ ಮೇಲೆ ಕೈಹಾಕಿಕೊಂಡು ಅದರ ಪಕ್ಕದಲ್ಲೇ ಬೀದಿಗಳಲ್ಲಿ ನಡೆಯುತ್ತಿದ್ದರೆ ಜನ ನನ್ನನ್ನೂ ಅದನ್ನೂ ಆಶ್ಚರ್ಯಚಕಿತ ಕಣ್ಣುಗಳಿಂದ ನೋಡುತ್ತಿರುತ್ತಾರೆ. ಇದು ನನ್ನ ಜೊತೆ ಇರುವುದರಿಂದ ನನ್ನನ್ನು ಜನ ಆ ಕಾರಣಕ್ಕಾಗಿ ಎತ್ತರದಲ್ಲಿ ಇಟ್ಟುನೋಡುತ್ತಾರೆ. ಅದನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲೇಬಾರದು ಎಂದು ಒಮ್ಮೆ ಯೋಚಿಸಿದೆ. ಆದರೆ ನಿತ್ಯವೂ ಹೀಗೆಯೇ ನೋಡುತ್ತಿದ್ದರೆ ಜನರಿಗೆ ಇರುವ ಆಶ್ಚರ್ಯ ಭಾವ ಕಡಿಮೆಯಾಗಿ, ಸಹಜಸ್ಥಿತಿಗೆ ಇಂದಲ್ಲ ನಾಳೆ ಬರುತ್ತಾರೆ

ಎನ್ನುವ ಆಲೋಚನೆಯಿಂದ ಅದನ್ನು ನಮ್ಮೊಡನೆ ಕರೆದುಕೊಂಡು ಹೋಗುತ್ತೇನೆ. ನೀವು ಪವಾಡಗಳೆಂದು ತಿಳಿದಿರುವ ಅನೇಕ ಅಂಶಗಳು, ಕೇವಲ ಕೈಚಳಕಗಳು ಎಂದು ಅವರಿಗೆ ತಿಳಿಯಪಡಿಸಲು ಜನ ಸೇರಿದ ಕಡೆಯೆಲ್ಲ ಕೆಲವು ತಂತ್ರವಿದ್ಯೆಯನ್ನೂ, ಕೈಚಳಕಗಳನ್ನು ಪ್ರದರ್ಶಿಸುತ್ತೇನೆ. ನಮ್ಮ ಗುಂಪಿನ ಇನ್ನೂ ಕೆಲವರಿಗೆ ಅವುಗಳನ್ನು ಕಲಿಸಿದ್ದೇನೆ. ಆದರೆ ಅವರುಗಳು ಜನರ ಮುಂದೆ ಮಾಡಿ ತೋರಿಸುವಾಗ ಅವುಗಳನ್ನು ಕೈಚಳಕವೆಂದೇ ಒಪ್ಪಿಕೊಳ್ಳುವ ಜನ, ನಾನು ಕೆಲವು ತಂತ್ರವಿದ್ಯೆಗಳನ್ನು ಪ್ರದರ್ಶಿಸುವಾಗ, ಅವುಗಳನ್ನು ಪವಾಡವೆಂತಲೇ ಭಾವಿಸುತ್ತಾರಂತೆ. ಆದ್ದರಿಂದಲೇ ಈಗ ನಾನು ಮತ್ತೊಂದು ಯೋಚನೆ ಮಾಡಿದ್ದೇನೆ ಗುರುಗಳೇ' ಎಂದರು ಮಹದೇಶ್ವರರು.

ಪ್ರಭುಸ್ವಾಮಿಗಳು 'ಏನು ಆ ಯೋಚನೆ?' ಎನ್ನುವಂತೆ ಕಣ್ಣಿನಲ್ಲೇ ಪ್ರಶ್ನಿಸಿದರು. 'ಪ್ರತಿ ಊರಿನಲ್ಲಿ ಕೆಲವು ಕೆಳವರ್ಗದ ಯುವಕರನ್ನು ಆಯ್ದುಕೊಂಡು ಅವರಿಗೆ ತಂತ್ರವಿದ್ಯೆಯನ್ನು ಕಲಿಸುವುದು'. ಅವರು ಪ್ರತಿ ಊರಿನಲ್ಲಿಯೂ ಅವುಗಳನ್ನು ಪ್ರದರ್ಶಿಸುತ್ತಾ ತಂತ್ರವಿದ್ಯೆ ಹೇಗೆ ಪವಾಡವಲ್ಲ; ಹಾಗೆ ನೋಡಿದರೆ ಪವಾಡ ಎನ್ನುವುದು ಇನ್ನೊಬ್ಬರ ಮುಂದೆ, ಅವರನ್ನು ಆಶ್ಚರ್ಯಗೊಳಿಸಲು ಪ್ರದರ್ಶಿಸುವಂತಹ ವಿಷಯವೂ ಅಲ್ಲ ಎನ್ನುವುದನ್ನು ಜನರಿಗೆ ತಿಳಿಸುತತಾ ನಡೆಯಬೇಕು. ಹೀಗೆ ನಡೆಯುತ್ತಲೇ ಅನೇಕ ಶರಣರ ಜೀವನಚರಿತ್ರೆಯನ್ನು ಜನರ ಮುಂದೆ ಹೇಳುತ್ತಾ, ಕರ್ಣಾಕರ್ಣಿಯಾಗಿ ಬಂದಿರುವ ಅವರು ಮಾಡಿದ ಪವಾಡಗಳ ಕಥೆಗಳನ್ನು ವಿವರಿಸುವುದು. ಅನಂತರ ಅವೆರಡನ್ನೂ ತಾಳ ಎಹಾಕಿ ಹೇಗೆ ಅವರ ಬದುಕೇ ಒಂದು ದೊಡ್ಡ ಪವಾಡ ಎನ್ನುವುದನ್ನು ಮನದಟ್ಟು ಮಾಡಿಕೊಡುವುದು.

ಕೆಳವರ್ಗದ ಯುವಕರನ್ನೇ ಏಕೆ ಆರಿಸಿಕೊಳ್ಳುತ್ತೇನೆ ಎಂದರೆ, ಅಲೌಕಿಕ ಎನ್ನುವ ಅಂಶದ ಬಗ್ಗೆ ಆ ವರ್ಗಕ್ಕೆ ಇರುವ ಭೀತಿ ಹೆಚ್ಚಿನದು. ನಾವು ಅವರ ಕೇರಿಗಳಿಗೆ ಹೋದಾಗ "ತಮಂಮತಹವರು ಏಕೆ ಬುದಿ ನಮ್ಮ ಕೇರಿಗೆ ಬಂದಿರಿ?! ಎಂದು ಒಂದು ರೀತಿಯ ಪಾಪಭೀತಿಯಿಂದ ಅವರು ಮಾತನಾಡಿದುದನ್ನು ನಾನೇ ಅನೇಕ ಬಾರಿ ಕೇಳುತ್ತಿದ್ದೇನೆ. ಅಂದರೆ ನನ್ನಂತಹ ಧರ್ಮಗುರು ಅವರ ಬೀದಿಯಲ್ಲಿ ಕಾಲಿಡುವುದು ಎಂದರೆ ಅವರಿಗೆ ಪಾಪ ಮೆತ್ತಿಕೊಂಡಂತೆ ಎನ್ನುವುದು ಅವರ ಭಾವನೆ. ಆದ್ದರಿಂದ ಆ ವರ್ಗದ ಹುಡುಗರೇ ಅವರ ನಡುವೆ ಬೆರೆತು ಇದೆಲ್ಲವನ್ನೂ ಬಯಲು ಮಾಡುತ್ತಾ ನಡೆದರೆ ಅನಂತರ ಉಳಿದ ಕೆಲಸಗಳು ಸುಲಭವಾಗುತ್ತವೆ' ಎಂದು ಭಾವಿಸಿಸದ್ದೇನೆ.

'ನಿನ್ನ ಆಲೋಚನೆಯೇನೋ ಸರಿಯಾದದ್ದೇ, ಆದರೆ ನೀನು ಯಾವುದೋ ಉದ್ದೇಶದಿಂದ ಎಲ್ಲರಿಗೂ ತಂತ್ರವಿದ್ಯೆಯನ್ನು ಕಲಿಸು ಹೋಗಿ, ಕಲಿತವರು ನಾಳೆ ಅನ್ನು ದುರುಪಯೋಗಪಡಿಸಿಕೊಳ್ಳುವುದಲ್ಲ ಎನ್ನುವ ಭರವಸೆಯಾದರೂ ಏನು? ಆ ಅನುಮಾನ ನನಗೂ ಇದೆ. ಆದ್ದರಿಂದಲೇ ಚಿಂತನಶೀಲ ಯುವಕರ ಅನ್ವೇಷಣೆಯನ್ನು ಮೊದಲು ಮಾಡಬೇಕು ಎಂದುಕೊಂಡಿದ್ದೇನೆ. ಅವರಿಗೆ ತಂತ್ರವಿದ್ಯೆಯ ಜೊತೆಗೆ ವೈದ್ಯವಿದ್ಯೆ ಶರಣರ ವಿಚಾರಧಾರಡೆ, ಉಪನಿಷತ್ತುಗಳ ಜ್ಞಾನ ಇವುಗಳನ್ನೂ ಆಳವಾಗಿ ಅಧ್ಯಯನ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದಿದ್ದೇನೆ. ಆ ಕಲಿಕೆಯ ಹಂತದಲ್ಲಿಯೇ ಅವರ ಮನಸ್ಥಿತಿ ಅರ್ಥವಾಗಿಬಿಡುತ್ತದೆ. ಆಗ ಆ ಮಜಲಿನಲ್ಲಯೇ ಅವರನ್ನು ತಿದ್ದುವುದನ್ನೋ ಕೈಬಿಡುವುದನ್ನೋ ಮಾಡಬಹುದು. ಮೇಲುವರ್ಗದ ಯುವಕರೂ ಇಚ್ಚೆಯುಳ್ಳವರೂ ಬರಲಿ, ಅದಕ್ಕೇನೂ ನಾವು ಅಡ್ಡಿಪಡಿಸಬಾರದು' ಎಂದರು.

ಮಹದೇಶ್ವರರ ಈ ಕಾರ್ಯಕ್ರಮದ ವಿವರಣೆಯನ್ನು ಕೇಳಿ ಪ್ರಭುಸ್ವಾಮಿಗಳು ಮೌನವಾಗಿಯೇ ತಮ್ಮ ಸಮ್ಮತಿಯನ್ನು ಸಂತೋಷವನ್ನು ಸೂಚಿಸಿದರು. ಮುಂದಿನ ದಿನಗಳಲ್ಲಿ ಕುಂತೂರು ಕ್ಷೇತ್ರ ಅನೇಕ ವಿದ್ಯಾರ್ಥಿಗಳ ಆವಾಸ ಸ್ಥಾನವಾಯಿತು. ಮುಡುಕುತೋರೆ ಮಲ್ಲಿಕಾರ್ಜುನರೂ ಈಗ ಹೆಚ್ಚಾಗಿ ಇಲ್ಲಿಯೇ ಇರಲು ತೊಡಗಿದರು. ತಂತ್ರ ಮತ್ತು ವೈದ್ಯ ವಿದ್ಯೆಯನ್ನು ಮಹದೇಶ್ವರರೇ ನೇರವಾಗಿ ಕಲಿಸಲು ಪ್ರಾರಂಭಿಸಿದರು.

ಧರಣೇಂದ್ರಯ್ಯನವರು ಧರ್ಮಗಳ ಬಗ್ಗೆ, ಧರ್ಮಶಾಸ್ತ್ರಗಳ ಬಗ್ಗೆ ಉಪನ್ಯಾಸಗಳನ್ನು ಕೊಡುತ್ತಿದ್ದರು. ಆಗಾಗ ಪ್ರಭುಸ್ವಾಮಿಗಳೂ ಅಧ್ಯಾಪನ ಕೆಲಸವನ್ನು ನಿರ್ವಹಿಸುತ್ತಿದ್ದರು. ನಿರಂಜನ, ಶಂಕರಪ್ಪ, ಸಂಗಪ್ಪ ಮುಂತಾದವರು ಶರಣರ ವಿಚಾರಗಳನ್ನು ಸೋದಾಹರಣವಾಗಿ ಮಂಡಿಸುತ್ತಿದ್ದರು. ಸಂಜೆಯಾಯಿತೆಂದರೆ ಎಂದಿನಂತೆ ಚರ್ಚೆ ನಡೆಯುತ್ತಿತ್ತು. ಈಗಲಂತೂ ಚರ್ಚಾಗೋಷ್ಠಿ ಹಿಂದಿಗಿಂತಲೂ ಹೆಚ್ಚಿನ ಉತ್ಸಾಹದಿಂದ ನಡೆಯುತ್ತಿದ್ದಿತು. ಆರಂಭದ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಚರ್ಚೆಯ ಸಂದರ್ಭದಲ್ಲಿ ಕಾಣುತ್ತಿದ್ದ ಉದ್ವೇಗ ಕ್ರಮೇಣ ಕಡಿಮೆಯಾಗತೊಡಗಿತ್ತು. ಜಾತಿ, ಮತ, ಧರ್ಮ, ದೇವರುಗಳ ಬಗ್ಗೆ ಮೊದಮೊದಲಿನ ದಿನಗಳಲ್ಲಿ ಕುತೂಹಲದಿಂದ ಮಾತ್ರ ಚರ್ಚಿಸುವ ರೀತಿಗೆ ಬಂದಿದ್ದರು. ಒಂದೆರಡು ವರ್ಷಗಳಲ್ಲಿ ಕ್ಷೇತ್ರದಲ್ಲಿ ತಯಾರಾದ ಅನೇಕ ಯುವಕರು ಸ್ವಯಂ ಸೇವಕರಾಗಿ ಗ್ರಾಮ ಸಂದರ್ಶನಗಳಲ್ಲಿ ಕಲಿತದ್ದನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ನಿರತರಾದರು.

ಮಹದೇಶ್ವರರು. ಆಗಾಗ ತಮ್ಮ ಸಹಚರರೊಡನೆ ಕಾರ್ಯಕರ್ತರ ಕೆಲಸದ ರೀತಿನೀತಿಗಳನ್ನು, ಅದರ ಪರಿಣಾಮವನ್ನು ಸಮೀಕ್ಷಿಸುವ ಕೆಲಸದಲ್ಲಿ ನಿರತರಾಗುತ್ತಿದ್ದರು. ತಾವು ನಿರೀಕ್ಷಿಸಿದ ಮಟ್ಟದಲ್ಲಿ ತೀವ್ರಗತಿಯ ಪರಿಣಾಮ ಕಾಣುತ್ತಿರಲಿಲ್ಲವಾದರೂ. ಕಾರ್ಯಕರ್ತರ ಕೆಲಸದ ನಿಷ್ಠೆ ಅದರಿಂದ ನಿಧಾನ ಗತಿಯಲ್ಲಿ ಜನಮನದಲ್ಲಿ ಬೇರೂರುತ್ತಿದ್ದ ವಿಚಾರಗಳ ಕುರುಹುಗಳು ಅಲ್ಲಲ್ಲಿ ಕಾಣುತ್ತಿದ್ದವು.

ಪೀಠಾಧಿಕಾರಿಯಾಗಿ ಮಾಡಬಹುದಾದ ಜನಪರವಾರ ಕೆಲಸಗಳನ್ನು ಶ್ರೀ ಸಾಮಾನ್ಯರ ಬದುಕಿನ ಸ್ತರದಲ್ಲಿ ಇದ್ದುಕೊಂಡೇ ಮಾಡಬಹುದಲ್ಲಾ ಎಂದು ಎಷ್ಟೋ ಬಾರಿ ಅವರು ಅಂದುಕೊಳ್ಳುತ್ತಿದ್ದರು. ಹಾಗೆ ನೋಡಿದರೆ ಪೀಠದ ಮೇಲಿನ ಮಾತುಗಳಿಗೆ ಒಂದು ಅಧಿಕಾರದ ಮುದ್ರೆ ಇರುತ್ತದೆ. ನಾವು ಸಾಮಾನ್ಯವಾದ ವಾಸ್ತವ ಸತ್ಯಗಳನ್ನು ಹೇಳಿದರೂ ಜನ ಅದಕ್ಕೆ ಆಧ್ಯಾತ್ಮಿಕ ಅರ್ಥಗಳನ್ನೇ ಹಚ್ಚುತ್ತಾರೆ. ಪೀಠದ ಕಾರಣದಿಂದ ನಾವು ಜನಸಾಮಾನ್ಯರಿಂದ ಮಾನಸಿಕವಾಗಿ ದೂರವೇ ಉಳಿದುಬಿಡುತ್ತೇನೆ ಎಂದು ಕಾಣುತ್ತದೆ. ನಾವು ಎಷ್ಟೇ ಹತ್ತಿರಕ್ಕೆ ಹೋದರೂ ಜನ, ಇವರೂ ತಮ್ಮಂತೆಯೇ ಎಂದು ಮುಕ್ತವಾಗಿ ಒಪ್ಪಿಕೊಳ್ಳುವುದೇ ಇಲ್ಲ. ಒಳಗೊಳಗೇ ಮುದುಡಿಕೊಂಡುಬಿಡುತ್ತಾರೆ. ನಾನು ಅಧಿಕಾರ ವಹಿಸಿಕೊಂಡ ಈ ಕೆಲವೇ ವರ್ಗಗಳಲ್ಲಿ ಇಂತಹ ಅನುಭವಗಳು ಅದೆಷ್ಟು ಬಾರಿ ಆಗಿವೆ! ಅವರಿವರ ಮಾತೇಕೆ, ಸ್ವತಃ ಮುಡುಕುತೊರೆ ಮಲ್ಲಿಕಾರ್ಜುನರು, ಶಾಂತಮಲ್ಲಿಕಾರ್ಜುನರೇ ನನಗೆ ಆಗಾಗ ವಿಶೇಷ ಗೌರವ ತೋರಲು ಪ್ರಯತ್ನಿಸುತ್ತಾರೆ! ಮೊದಲಿನ ಹಾಗೆ ಈಗ ಒಬ್ಬನೇ ಎಲ್ಲಿಯೂ ಚಲಿಸುವಂತಿಲ್ಲ. ಹೋ! ಎಲ್ಲಿಗೆ ಹೋದರು ಕೈಮುಗಿದು ಬಾಗಿ ನಿಲ್ಲುವ, ದೂರಕ್ಕೆ ಸರಿದು ನಿಲ್ಲುವ ಜನರೇ ಹೆಚ್ಚು ಅವರುಗಳ ಈ ಎಲ್ಲಾ ಚಹರೆಗಳಲ್ಲಿ ಅದೆಂತಹ ಭಕ್ತಿ ಇದೆಯೋ, ಅಭಿಮಾನ ಇದೆಯೋ, ಭಯ ತುಂಬಿರುತ್ತದೋ ಪೀಠಾಧಿಕಾರಿಗೆ ತಲೆಬಾಗಲೇಬೇಕೆಂಬ ಪರಂಪರಾಗತ ನಂಬಿಕೆಯ ಒತ್ತಡವಿದೆಯೋ ಯಾರು ಬಲ್ಲವರು, ಕಂಡವರು ಯಾರು?

ಮಹದೇಶ್ವರರಲ್ಲಿ ಈ ಭಾವನೆ ದಿನ ದಿನಕ್ಕೂ ಬೆಳೆದು ಹೆಮ್ಮರವಾಗತೊಡಗಿತು. ಈ ಸ್ಥಾನವನ್ನು ಮತ್ತೊಬ್ಬರಿಗೆ ಕೊಟ್ಟು ತಾನು ಮೊದಲಿನಂತೆ ಸಾಮಾನ್ಯನಂತೆ ಇರಬಾರದೇಕೆ ಎಂದುಕೊಳ್ಳತೊಡಗಿದರು. ನನ್ನನ್ನೇ ನಂಬಿ ಗುರುಗಳು ನನಗೆ ಪೀಠವನ್ನು ವಹಿಸಿದ್ದಾರೆ. ನನ್ನ ಈ ರೀತಿಯ ನಿರ್ಧಾರ ಜವಾಬ್ದಾರಿಯಿಂದ ಜಾರಿಕೊಳ್ಳುವ ತಂತ್ರವೇನಾದರೂ ಆದೀತೆ?

ಇದರಿಂದ ಗುರುಗಳು ನೊಂದುಕೊಳ್ಳುವುದಲ್ಲದೇ ಎನ್ನುವ ಚಿಂತನೆಯೂ ಅವರ ಮನಸ್ಸಿನಲ್ಲಿ ಹೊಯ್ದಾಡತೊಡಗುತ್ತಿತ್ತು. ಮತ್ತೆ ಕೆಲವು ದಿನಗಳ ನಂತರ ಮಿತಿಯಲ್ಲಿ ಇದುವರೆವಿಗೆ ನನ್ನ ವಿಚಾರಗಳನ್ನು ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ಪ್ರಮಾಣಿಕ ಪ್ರಯತ್ನವನ್ನು ಮಾಡಿಯೇ ಇದ್ದೇನೆ. ನನ್ನ ವಿಚಾರ ಪ್ರಣಾಳಿಕೆಗಳನ್ನು ಜನರ ಮನಸ್ಸಿನ ನೆಲದಲ್ಲಿ ಬಿತ್ತಿ, ಬೆಳೆ ತೆಗೆಯುವ ನೂರಾರು ಜನರ, ಕಾರ್ಯಕರ್ತರ ತಂಡವೇ ನಿಷ್ಠೆಯಿಂದ ಕೆಲಸ ಮಾಡುತ್ತಿದೆ. ಈಗ ಅವರಿಗೆ ನನ್ನ ಅನಿವಾರ್ಯತೆ ಏನೂ ಇಲ್ಲ. ಹಾಗೆ ನೋಡಿದರೆ ಯಾವುದೇ ಸಾಮಾಜಿಕ ಚಳುವಳಿಯಲ್ಲಿ ಅದು ಎಷ್ಟೇ ದೊಡ್ಡದಿರಲಿ, ಚಿಕ್ಕದಿರಲಿ, ಯಾವನೇ ಒಬ್ಬ ವ್ಯಕ್ತಿ ಅನಿವಾರ್ಯವಾಗಲೂಬಾರದು. ಒಬ್ಬ ವ್ಯಕ್ತಿಯ ಅಥವಾ ಒಂದು ಸ್ಥಾನದ ಬಲದ ಮೇಲೆ ನಿಂತ ಯಾವ ಚಳುವಳಿಯೂ ಬಹಳ ದಿನಗಳು ಜೀವಂತವಾಗಿ ಇರಲಾರದು ಎಂಬುದನ್ನು ಹೇಳುತ್ತಾರೆ.

ಈ ಕಾದಂಬರಿಯ ಬಹುಮುಖ್ಯ ವಿಶೇಷವೆಂದರೆ ಭಾಷೆಯ ಬಳಕೆ, ನೂರಾರು ವರ್ಷಗಳ ಹಿಂದೆ ಇದ್ದ ಮಹದೇಶ್ವರರ ಕಾಲದ ಭಾಷೆಯನ್ನೇ ಬಳಸುವುದು ಅಥವಾ ಜನಪದ ಕಾವ್ಯಭಾಷೆ ಬಳಸುವುದು ಚಾರಿತ್ರಿಕ ಕಾದಂಬರಿಯ ದೃಷ್ಟಿಯಿಂದ ಅಪಾಯಕಾರಿ. ಹಾಗೆ ಮಾಡಿದರೆ ವೇದಕಾಲಿನ ಭಾಷೆಯನ್ನು ಅನುಸರಿಸಲು ಹೋದ ಜಾಲ್ವರ್ ಸ್ಕಾಟ್‌ನಂತೆ ಹಾಸ್ಯಾಸ್ಪದರಾಗಬೇಕಾಗುತ್ತದೆ. ಈ ಕಾದಂಬರಿಯಲ್ಲಿ ಲೇಖಕರಾದ ಮಗು ಅವರು ಸನ್ನಿವೇಶ, ಪಾತ್ರ, ಪ್ರದೇಶಗಳಿಗೆ ಅನುಗುಣವಾಗಿ ಬಹಳ ಎಚ್ಚರದಿಂದ ಭಾಷೆಯನ್ನು ದಶಕ್ತವಾಗಿ ದುಡಿಸಿಕೊಂಡಿದ್ದಾರೆ ಎಂಬುದನ್ನು ನೋಡಬಹುದಾಗಿದೆ. ಮಹಯಾತ್ರಿಕ ಜನಪದ ಕಾದಂಬರಿಯ ಕನ್ನಡ ಚರಿತ್ರೆಯ ಪಯಣದ ಬಹುಮುಖ್ಯ ಕಾದಂಬರಿಯಾಗಿದೆ ಎಂಬುದನ್ನು ಹೇಳಬಹುದಾಗಿದೆ.

ಮಹದೇಶ್ವರರನ್ನು ಕುರಿತು ಇರುವ ಸಮೃದ್ಧವಾದ ಜನಪದ ಸಾಹಿತ್ಯವನ್ನು ವಿಶ್ಲೇಷಿಸುತ್ತಾ ಹೋದಂತೆ ಅನೇಕ ರೀತಿಯ ವಿಶ್ಲೇಷಣಾ ಸಾಧ್ಯತೆಗಳು ನಮ್ಮ ಕಣ್ಣ ಮುಂದೆ ತೆರೆದುಕೊಳ್ಳುತ್ತವೆ. ಜನಪದ ಸಾಹಿತ್ಯದ ಆಶಯವಷ್ಟೇ ಮುಖ್ಯವಾಗುತ್ತದೆಯೇ ಹೊರತು, ಎಲ್ಲ ವಿವರಗಳು ಚಾರಿತ್ರಿಕ ತುಂಬಾ ಎಚ್ಚರಿಕೆಯಿಂದ ಅರ್ಥೈಸಬೇಕಾಗುತ್ತದೆ. ಅವರವರ ಭಾವಕ್ಕೆ ಸಂಸ್ಕಾರಕ್ಕೆ ತಕ್ಕಂತೆಯೂ ಇದು ಬೇರೆ ಬೇರೆ ಆಕಾರವನ್ನು ಪಡೆದುಕೊಳ್ಳುವ

ಸಾಧ್ಯತೆಗಳು ಇರುತ್ತವೆ. ಆದರೆ ಇದರಲ್ಲಿ ಯಾವುದು ಸ್ವೀಕಾರರ್ಹ ಎನ್ನುವುದು ಕಾಲದಿಂದ ಮಾತ್ರ ನಿರ್ಧಾರಿತವಾಗುತ್ತದೆ.

ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಲೇಖಕರು ಮಲೆಮಹದೇಶ್ವರರ ಬಗ್ಗೆ ಅತ್ಯಂತ ಭಕ್ತಿಯಿಂದ ಬರೆಯುವ ಮಗು ಅವರು ಆತನ ಬದುಕನ್ನು ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಗಳಲ್ಲಿ ರೂಪಿಸಿ ಈ ಶ್ರೀ ಮಲೆಯ ಮಹದೇಶ್ವರ ಸುತ್ತ ಇರುವ ಜನಪದದ ಮನೆಮನೆಗಳಲ್ಲಿ ಸುತ್ತುವರಿದಿರುವ ಮೌಢ್ಯದ ಪದರಗಳೆಲ್ಲವನ್ನೂ ಬಿಡಿಸಿ ಆತನ ನಿಜರೂಪದ ದರ್ಶನ ಮಾಡಿಸಿದ್ದಾರೆ. ಈ ಕಾದಂಬರಿಯ ಉದ್ದಕ್ಕೂ ಗ್ರಾಮೀಣ ಪರಿಸರದಲ್ಲಿ ಬೆಳೆದು, ಅಲ್ಲಿನ ಬದುಕಿನ ಪದರು ಪದರುಗಳನ್ನೂ ಹಾಗೂ ಮೌನ ಜೀವಿಗಳ ವೈವಿಧ್ಯಮಯ ಬದುಕನ್ನು ಕಣ್ಣಾರೆ ಕಂಡು ಆ ಎಲ್ಲ ಅನುಭವಗಳ ಮೂರ್ತರೂಪವನ್ನು ಹಾಗೂ ದರ್ಶನವನ್ನು ತಮ್ಮ ಚೈತನ್ಯದ ಒಂದು ಭಾಗವನ್ನಾಗಿಸಿಕೊಂಡಿರುವ ಇಲ್ಲಿನ ಲೇಖಕರಾದ ಮಗು ಅವರು ತಮ್ಮ ಮೂರು ಕಾದಂಬರಿಗಳಲ್ಲೂ ಸಾಮಾನ್ಯವಾಗಿ ಜನಪದದ ಭಾವನೆಗಳುಮೆದುವಾಗಿ ನಿರೂಪಿತವಾಗಿರುವಂತೆ ಅಲ್ಲಲ್ಲಿ ಅನ್ನಿಸಿದರೂ ಇದು ಅವರ ಕೊರತೆಯಲ್ಲ, ತನ್ನದೇ ಚೌಕಟ್ಟನೊಳಗೆ ಸಾಗುವ ಶಿಷ್ಟಭಾಷೆ ಜನಪದದ ಬದುಕನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಲಾರದೆಂದು ಹೇಳಬಹುದಾಗಿದೆ.

ಈ ಕಾದಂಬರಿಯಲ್ಲಿ ನಾವು ಒಟ್ಟಾಗಿ ಹೇಳುವುದಾದರೆ ಲೇಖಕರ ಈ ಮಹಾಯಾತ್ರಿಕ ಕೃತಿಯಂತೂ ಮಲೆಮಹದೇಶ್ವರರ ಸೊಗಸಾದ ಜೀವನಗಾಥೆ, ಮಹದೇಶ್ವರರ ಜೀವನ ಚರಿತ್ರೆಯ ಮೇಲೆ ಹೊಸ ಬೆಳಕು ಬೀರಿದ ಪ್ರಮುಖ ಕೃತಿ ಇದಾಗಿದೆ ಎಂಬುದನ್ನು ನೋಡಬಹುದಾಗಿದೆ. ಯಾವುದೇ ಅಧಿಕೃತ ದಾಖಲೆಗಳಿಲ್ಲದ, ಜನಪದರ ವಾದಗಳು, ವಿತಂಡವಾದಗಳು, ಟೀಕೆಗಳು, ಸಮರ್ಥನೆಗಳು ಕೇಳಿಬರುತ್ತಿದ್ದ ಸಂದರ್ಭದಲ್ಲಿ ಲೇಖಕರಾದ ಮಗು ಅವರು ತಮ್ಮ ಕೃತಿಯಲ್ಲಿ ಅವರ ಹುಟ್ಟಿಗಿಂತ, ಸಾಧನೆಗೆ ಆದ್ಯತೆ ನೀಡಿದ್ದು ಅತ್ಯಂತ ಶ್ಲಾಘನೀಯ, 'ಶರಣರ ಘನವನ್ನು ಮರಣದಲ್ಲಿ ಕಾಣು' ಎಂಬ ತತ್ವವನ್ನು ಮಲೆಯೂರು ಗುರುಸ್ವಾಮಿ ಅವರು ಈ ಕಾದಂಬರಿಯಲ್ಲಿ ಸಾಕಾರಗೊಳಿಸಿರುವುದನ್ನು ನೋಡಬಹುದಾಗಿದೆ.

ಕನ್ನಡದಲ್ಲಿ ಬಂದಿರುವ ಬಹುತೇಕ ಕಾದಂಬರಿಗಳಂತೆ ಇಲ್ಲಿ ಲೇಖಕರಾದ ಮಗು ಅವರು ಮಲೆಯ ಮಹದೇಶ್ವರನ ಕಥೆಯನ್ನು ನೇರವಾಗಿ ಸರ್ವಸಾಕ್ಷಿ ಪ್ರಜ್ಞೆಯಿಂದ ನಿರೂಪಿಸಿರುವುದನ್ನು ನಾವು ನೋಡಬಹುದಾಗಿದೆ. ಇದು ಸೂಕ್ತ ಮಾರ್ಗವೆನಿಸುತ್ತದೆ.

ಏಕೆಂದರೆ ಈ ಕಾದಂಬರಿಯಲ್ಲಿ ಮಲೆಯ ಮಹದೇಶ್ವರರು ಉತ್ತಮ ಪುರುಷರಂತೆ ನಾನು ಎಂಬಂತೆ ನಿರೂಪಿತವಾಗಿದ್ದರೆ. ಉಳಿದ ಪಾತ್ರಗಳ ಒಳತೋಟಗಳನ್ನು, ಜಂಜಾಟಗಳನ್ನು ಸಮರ್ಥವಾಗಿ ಸೆರೆಹಿಡಿಯಲಾಗುತ್ತಿರಲಿಲ್ಲ. ಈ ಕಾದಂಬರಿಯಲ್ಲಿ ಬರುವ ಕಾಳಮ್ಮ, ಸಂಗಪ್ಪ, ಬಿಲ್ಲಯ್ಯ ಮೊದಲಾದ ಜನಸಾಮಾನ್ಯರ ಜೀವನದ ಆಗುಹೋಗುಗಳು ನೈಜತೆಯ ಹಿನ್ನೆಲೆಯಲ್ಲಿಯೇ ಪ್ರತಿಪಾದಿತವಾಗಿರುವಂತೆ ಮಲೆಯ ಮಹದೇಶ್ವರನಂತಹ ಉದಾತ್ತ, ಕ್ರಾಂತಿಕಾರಿಕ ಸೊಗಸಾಗಿ ನಿರೂಪಿತನಾಗಿದ್ದಾನೆ. ನಮ್ಮ ಆರಾಧ್ಯ ವ್ಯಕ್ತಿಯ ಪರಕಾಯ ಪ್ರವೇಶ ಕಠಿಣವಾದರೂ, ಆ ಮಾನಸಿಕ ದೂರ ಈ ಕಾದಂಬರಿಯಲ್ಲಿ ಎಲ್ಲಿಯೂ ಕಾಣುವುದಿಲ್ಲ. ಮಹದೇಶ್ವರನು ನಮ್ಮಲ್ಲೊಬ್ಬನಾಗಿ, ನಮ್ಮೆಲ್ಲರಿಗೆ ಬೇಕಾದವನಾಗಿ ಇಂದಿಗೆ ಪ್ರಾಯಃ ಹೆಚ್ಚು ಪ್ರಸ್ತುತ ವ್ಯಕ್ತಿಯಾಗಿ ಗೋಚರಿಸುತ್ತಿರುವುದನ್ನು ನೋಡಬಹುದಾಗಿದೆ.

ಈ ಕಾದಂಬರಿಯಲ್ಲಿ ಮರಿದೇವರು ಎಂಬ ಬಾಲಕ ಬಯಲಲ್ಲಿ ಹರಿವ ಬೆಳಕಾಗಿ, ಅಜ್ಞಾನ, ಅಂಧಕಾರ ಮೂಢನಂಬಿಕೆ, ಡಾಂಬಿಕ್ಷತೆಯನ್ನು ತೊರೆದು ಜನರ ಅಜ್ಞಾನವನ್ನು ಹೋಗಲಾಡಿಸಿ, ಸುಜ್ಞಾನವನ್ನು ಬೀರುತ್ತು ಎಲ್ಲರಿಗೂ ಜ್ಞಾನದ ಬೆಳಕಾಗಿ ಮಹದೇಶ್ವರನಾಗಿ ಮಹಾಚುಾತ್ರೆ ಕೈಗೊಂಡು ನಾಡಿನ ಉದ್ದಗಲಕ್ಕೂ ಕಂಪುಸೂಸುತ್ತ ಸವೆದ ಸಿರಿಗಂಧವಾಗಿ ದೈವತ್ವದೆಡೆಗೆ ಸಾಗುವ ಜೀವನ ಚ್ಚರಿತ್ರೆಯನ್ನು ಈ ಕಾದಂಬರಿಯಲ್ಲಿ ಲೇಖಕರು ವಾಸ್ತವಿಕ ಸಾಮಾಜಿಕ ನೆಲೆಯಲ್ಲಿ ಯಾವುದೇ, ಪವಾಡ, ಅತಿಮಾನುಷ, ರಂಜನೀಯ ವಿವರಣೆಗಳಿಲ್ಲದೆ ತುಂಬ ವಸ್ತುನಿಷ್ಠವಾಗಿ ರಚನೆಮಾಡಿದ್ದಾರೆ.

"ನೀರಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರವ
ನೆಚ್ಚುವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮದೇವ"

ಎಂಬ ನುಡಿಯಂತೆ ಬಸವಣ್ಣನವರ ವಚನದ ಈ ಸಾಲುಗಳು ಡಾಂಭಿಕ ಜನರ ಹುಸಿಭಕ್ತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿವೆ. ಇದು ಸಲ್ಲದೆ ನ್ನುಡಿದಂತೆ ನಡೆವ ನೈಜತೆ ಇರಬೇಕೆಂಬ ಅಣ್ಣನ ಮಾತಿನ ಇಂಗಿತ ಮಹದೇಶ್ವರರ ಬದುಕಿನ ಸುತ್ತ ಎಣೆದ ಈ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. ಕುಗ್ರಾಮಗಳಲ್ಲಿ ಬೆಟ್ಟಗುಡ್ಡಗಳಲ್ಲಿ ಹಾಡಿಗಳಲ್ಲಿ

ಅಜ್ಞಾನದ ಅಂಧಕಾರದಲ್ಲಿ ಪಶುಸಮಾನರಾಗಿ ಬದುಕುತ್ತ ಇರಲು ಸೂರಿಗೆ ದಿಕ್ಕಿಲ್ಲದೆ ಇರುವ ಜನಪದರ, ಬುಡಕಟ್ಟು ವರ್ಗದವರ, ದೀನದಲಿತರ, ಬಾಳು ಬೆಳಗುವ ದಿವ್ಯಜ್ಯೋತಿಯಾಗಿ ಅವರ ಬದುಕಿನ ಸಥಿತಿಯ ಸುಧಾರಣೆಗಾಗಿ ಯಾವ ಮಂತ್ರತಂತ್ರಗಳಿಲ್ಲದೆ ಅವರೊಡನೊಬ್ಬನಾಗಿದ್ದುಕೊಂಡು, ಶ್ರಮವಿಲ್ಲದೆ ಬದುಕಿಲ್ಲ, ಶ್ರಮವಿಲ್ಲದೆ ತಿಳುವಳಿಕೆ ಇಲ್ಲ, ತಿಳುವಳಿಕೆಯ ಮಾನವನ ಶ್ರಮದ ಒಂದು ಭಾಗ ಎಂದು ಸಾರಿದ ಮಲೆಯ ಮಹದೇಶ್ವರರ ಜೀವನ ಚ್ಚರಿತ್ರೆಯನ್ನು ತಮ್ಮ ಕಾದಂಬರಿಯಲ್ಲಿ ಮಗು ಅವರು ಅತ್ಯಂತ ಸಮರ್ಥವಾಗಿ ಮನಸ್ಸಿಗೆ ತಾಕುವಂತೆ ಹೇಳಿದ್ದಾರೆ. ಹಾಗೆ ನೋಡಿದರೆ ಈ ಮಹಾಚಿೂತ್ರಿಕ ಕಾದಂಬರಿ ಎಂದೆಂದಿಗೂ ಪ್ರಸ್ತುತವೆನಿಸುತ್ತದೆ.

ಶ್ರೀಯುತರು ಈ ಕಾದಂಬರಿಯಲ್ಲಿ ಬರುವ ಹಲವು ವಿವರಣೆಗಳು ವಾಕ್ಯಗಳು ಕೃತಿಯನ್ನು ಓದಿದ ನಂತರವೂ ಮನಸ್ಸನ್ನು ಆವರಿಸಿಕೊಂಡು ಬಹುಕಾಲ ಕಾಡುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಹೇಳಲು ಇಚ್ಛಿಸಿದ್ದೇನೆ.

"ಈ ಲೋಕದ ವರ್ಣಮಯ ಗೂಡಿನೊಳಗೆ ಸಿಕ್ಕಿ ತೆರಣಿಯ ಹುಳುವಾಗಬೇಡ"

"ಬ್ರಹ್ಮರಂಧ್ರದ ನೇರಕ್ಕೆ ಕಟ್ಟಿದ ಶಿಖೆ ಸ್ರರ್ಯಕಿರಣಗಳನ್ನು ಒಂದೆಡೆ ಸೇರಿಸಿ ಗಂಟು ಹಾಡದಂತೆ ಭಾಸವಾಗುತ್ತಿತ್ತು"

"ಸೂರ್ಯ ಚಂದ್ರತಾರೆ, ನಿಹಾರಿಕೆಗಳ ನಿರಂತರ ವ್ಯವಸ್ಥಿತಗತಿ ನನಗೆ ಸೃಷ್ಟಿಯ ನಿಗೂಢತೆಯ ಬಗೆಗೆ ವಿಸ್ಮಯವನ್ನುಂಟುಮಾಡುತ್ತದೆ".

"ಆಯಿತು ತಾಯಿ ಬಹಳ ಕಾಲದಿಂದ ಮಕ್ಕಳನ್ನು ಬಯಸಿ ಬೆಂದು ಹೋಗಿದ್ದ ನಿಮ್ಮ ಹೃದಯ ಭೂಮಿಯನ್ನು ಈತನ ಹುಟ್ಟುವಿಕೆ ತಂಪಾಗಿಸಿದೆ ಬಿರುಕು ಬಿಟ್ಟ ಭೂಮಿಯ ಮೇಲೆ ಮುಂಗಾರು ಮಳೆ ಸಮೃದ್ಧವಾಗಿ ಸುರಿದಂತೆ ಆಗಿದೆ".

ಈ ತರಹದ ಭಾಷೆಯ ಬಿಗಿ, ಶಬ್ದ ಲಾಲಿತ್ಯ ಸ್ವಲ್ಪದರದಲ್ಲೇ ಹೆಚ್ಚು ಹೇಳುವ ಹದವಾದ ಪ್ರೌಢಚಿಂತನೆ, ಮನಸ್ಸಿಗೆ ನಾಟುವ ಮಾತುಗಲನ್ನು ಇವರ ಮೂರು ಕಾದಂಬರಿಗಳಲ್ಲೂ ಹಾಗೂ ಇವರ ಇನ್ನಿತರ ಬರಹಗಳಲ್ಲೂ ನಾವು ಕಾಣಬಹುದಾಗಿದೆ. ಶ್ರೀಯುತರ ಮೂರು ಕಾದಂಬರಿಗಳಲ್ಲಿ **'ಮಹಾಯಾತ್ರಿಕ'** ಹಾಗೂ **'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'** ಈ ಕಾದಂಬರಿಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಣವಿದೆ. ಈ ಮಹಾಚಿೂತ್ರಿಕ

ಕಾದಂಬರಿಯಲ್ಲಿ ಮಹದೇಶ್ವರರ ಬಗ್ಗೆ ಅತ್ಯಂತ ಭಕ್ತಿಯಿಂದ ಬರೆಯುವ ಮಗು ಅವರು ಮಲೆಯ ಮಹದೇಶ್ವರರ ನಡೆದು ಹೋದ ಆತನ ಬದುಕಿನ ವಿವಿಧ ಘಟ್ಟಗಳಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ನೆಲೆಗಳಲ್ಲಿ ರೂಪಿಸಿ ಈ ಶರಣನ ಸುತ್ತ ಜನಪದದ ಮನೆಮನೆಗಳಲ್ಲಿ ಸುತ್ತುವರಿದಿರುವ ಮೌಢ್ಯದ ಪದರಗಳೆಲ್ಲವನ್ನೂ ಬಿಡಿಸಿ ಆತನ ನಿಜರೂಪದ ದರ್ಶನ ಮಾಡಿಸಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಬೆಳೆದು, ಅಲ್ಲಿನ ಬದುಕಿನ ಪದರ ಪದರಗಳನ್ನು ಮುಗ್ಧ ಮೌನ ಜೀವಿಗಳ ವೈವಿಧ್ಯಮಯ ಬದುಕನ್ನು ಕ್ಷಣ್ಣಾರೆ ಕಂಡು ಆ ಎಲ್ಲ ಅನುಭವಗಳ ಮೂರ್ತರೂಪವನ್ನು ತಮ್ಮ ಚೈತನ್ಯದ ಒಂದು ಭಾಗವನ್ನಾಗಿಸಿಕೊಂಡಿರುವ 'ಮಗು' ಅವರು ಈ ಕಾದಂಬರಿಯಲ್ಲಿ ಜನಪದದ ಬಗ್ಗೆ ಮೈತುಂಬಿ ಮನತುಂಬಿ ಹೇಳಿರುವುದನ್ನು ನೋಡಬಹುದಾಗಿದೆ.

ಒಟ್ಟಾರೆಯಾಗಿ 'ಮಹಾಯಾತ್ರಿಕ' ಕಾದಂಬರಿಯನ್ನು ಪ್ರಧಾನವಾಗಿಟ್ಟುಕೊಂಡು ಈ ಕಾದಂಬರಿಯಲ್ಲಿ ವೈಚಾರಿಕತೆ ಮತ್ತು ಆಧ್ಯಾತ್ಮಿಕತೆಯನ್ನು ಹಾಗೂ ಚಾರಿತ್ರಿಕೆ ಅಂಶಗಳನ್ನು ಗುರುತಿಸುವುದಾಗಿದೆ. ಹಾಗೆಯೇ ಹಳೇ ಮೈಸೂರು ಭಾಗದಲ್ಲಿ ಅಧ್ಯಾತ್ಮಿಕ ಸಿದ್ದಪುರುಷನಾಗಿ ಇಲ್ಲಿನ ಜನ-ಮನದಲ್ಲಿ ಉಳಿದಿರುವ ವ್ಯಕ್ತಿಯೇ ಮಲೆಯ ಮಹದೇಶ್ವರ ಮೈಸೂರು ಹಾಗೂ ಚಾಮರಾಜನಗರದಲ್ಲಿ ಅದರಲ್ಲೂ ಈ ಭಾಗದ ಜನಪದರಲ್ಲಿ ಮಲೆಯ ಮಹದೇಶ್ವರರನ್ನು ಕುರಿತು ಅಗಾಧ ಸಾಹಿತ್ಯ ನಿರ್ಮಾಣವಾಗಿರುವುದನ್ನು ನೋಡಬಹುದಾಗಿದೆ. ಮಹದೇಶ್ವರರ ಒಟ್ಟು ಬದುಕಿಗೊಂದು ಈ ಕೃತಿ ಕನ್ನಡಿ ಹಿಡಿದಿದೆ, ಒಟ್ಟಾರೆಯಾಗಿ 'ಮಹಾಯಾತ್ರಿಕ' ಕಾದಂಬರಿಯು ಮಹದೇಶ್ವರರ ಆಧ್ಯಾತ್ಮಶಕ್ತಿ, ಪ್ರಕೃತಿಪ್ರೇಮ, ವಿವಿಧ ಸ್ಥಳದ ಶಿಷ್ಯರ ಪಡೆ ಒಟ್ಟು ಸಂದೇಶಗಳನ್ನು ಈ ಕಾದಂಬರಿಯುದ್ದಕ್ಕೂ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಅಧ್ಯಾಯ ಆರು

ಉಪಸಂಹಾರ

ಈ ನಿಬಂಧದಲ್ಲಿ ಒಟ್ಟು ಆರು ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದೇನೆ. ಮುಖ್ಯವಾಗಿ ಈ ಆರು ಅಧ್ಯಾಯಗಳಲ್ಲಿ ಗ್ರಾಮೀಣ ಜನತೆಯ ಚಿತ್ರಣ ಹೇಗಿದೆ ಎಂಬುದನ್ನು ತಿಳಿಸಲಾಗಿದೆ. ಹಾಗೂ ಜನಪದ ಸಾಹಿತ್ಯ ಹೇಗಿದೆ ಮತ್ತು ಜನರ ಅಧ್ಯಾತ್ಮ ಮತ್ತು ವೈಚಾರಿಕತೆಯನ್ನು ಮುಖ್ಯವಾಗಿ ಗುರುತಿಸುವುದಾಗಿದೆ. ಒಟ್ಟು ಆರು ಅಧ್ಯಾಯಗಳಲ್ಲಿ ಮೂರು ಅಧ್ಯಾಯಗಳು ಪ್ರಮುಖವಾಗಿ ಚಾರಿತ್ರಿಕ ಅಂಶಗಳನ್ನು ಒಳಗೊಂಡಿವೆ. ಹಾಗೂ ಐತಿಹಾಸಿಕ ಅಂಶಗಳು ಕಂಡುಬರುತ್ತವೆ. ಮುಖ್ಯವಾಗಿ ಈ ನಿಬಂಧದಲ್ಲಿ ಒಟ್ಟಾರೆಯಾಗಿ ಲೇಖಕರು ಗ್ರಾಮೀಣ ಭಾಗದವರಾಗಿರುವುದರಿಂದ ಗ್ರಾಮೀಣ ಜನತೆಯ 'ಆಡುಭಾಷೆ' ಈ ನಿಬಂಧದಲ್ಲಿ ಹೆಚ್ಚಾಗಿ ಬಳಸಲಾಗಿದೆ. ಮತ್ತು ಹಳೆಯ ಮೈಸೂರು ಪ್ರಾಂತ್ಯದಲ್ಲಿ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ವಿಚಾರವಾಗಿ ಪ್ರಸ್ತಾಪಿಸಲಾಗಿದೆ. ಚಿಕ್ಕದೇವರಾಜರ ಪಟ್ಟಾಭಿಷೇಕದಿಂದ ಅವರ ಮರಣದವರೆಗಿನ ರಾಜ ಆಳ್ವಿಕೆ ಹೇಗಿತ್ತು ಎಂಬುದನ್ನು ತಿಳಿಸುವುದು ಕೂಡ ಈ ನಿಬಂಧದ ಉದ್ದೇಶವಾಗಿರುತ್ತದೆ.

ಮೈಸೂರು ಮತ್ತು ಚಾಮರಾಜನಗರ ಪ್ರಾಂತ್ಯದಲ್ಲಿದ್ದುಕೊಂಡು ಹೆಚ್ಚು ಜನಪ್ರಿಯವಾಗಿ ಸಾಹಿತ್ಯ ರಚನೆ ಮಾಡಿದ ಸಾಹಿತಿ. ಮಗು ಅವರು ತಮ್ಮ ಕೃತಿಗಳಿಗಿಂತ ತಾವು ಹೆಚ್ಚಾಗಿ ಗುರುತಿಸಿಕೊಂಡಿದ್ದಾರೆ. ಹಾಗಾಗಿ ಮಗು ಅವರ ಕೃತಿಗಳು 'ಮಹಾಯಾತ್ರಿಕ' ಹೊರತುಪಡಿಸಿದರೆ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಅಪ್ರತಿಮವೀರ ಹಾಗೂ ಇನ್ನಿತರ ಕೃತಿಗಳು ಹೆಚ್ಚು ಜನಪ್ರಿಯವಾಗಿಲ್ಲ. ಇತಿಹಾಸ ಮತ್ತು ಪುರಾಣ ಮತ್ತು ಸಮಾಜಕ್ಕೆ ನಿಷ್ಠರಾಗಿ ವಸ್ತುನಿಷ್ಠವಾಗಿ ಕೃತಿರಚನೆ ಮಾಡಿದ್ದರೂ ಅಜ್ಞಾತವಾಗಿಯೇ ಉಳಿದಿರುವ ಮಗು ಅವರ ಕೃತಿಗಳ ಮಹತ್ವವನ್ನು ಗುರುತಿಸುವುದು ಈ ನಿಬಂಧದದ ಮೂಲ ಉದ್ದೇಶವಾಗಿದೆ.

ಈ ನಿಬಂಧದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿ ಅವರ ಮೂರು ಕಾದಂಬರಿಗಳಾದ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'(೧೯೮೪), ಮಹಾಯಾತ್ರಿಕ(೧೯೮೯) ಹಾಗೂ ಅಪ್ರತಿಮವೀರ(೧೯೯೬) ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ಮಲೆಯೂರು ಗುರುಸ್ವಾಮಿ ಅವರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದಾಗ ಆಧುನಿಕ ಭಾರತ ಗ್ರಾಮೀಣ ಜನತೆಯ ಬದುಕು, ಧಾರ್ಮಿಕ ಮತ್ತು ಸಾಂಸ್ಕೃತಿಕ ಆವರಣವನ್ನು ಇಂದಿನ ಸಾಹಿತ್ಯವಲಯಕ್ಕೆ

ಅಳವಡಿಸುವಲ್ಲಿ ಮಗು ಅವರ ಪ್ರತಿಭೆ ಮಹತ್ತರವಾದದ್ದು, ಹಾಗಾಗಿ ನಾನು ಇವರ ಮೂರು ಕಾದಂಬರಿಗಳನ್ನು ವಿಶ್ಲೇಷಿಸುವುದು ಮೂಲ ಉದ್ದೇಶವಾಗಿದೆ.

ಮಗು ಅವರ ಮೊದಲ ಕಾದಂಬರಿ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಈ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ಗ್ರಾಮೀಣ ಬದುಕಿನ ಚಿತ್ರಣ, ಇತಿಹಾಸ ಎಳೆಗಳು ಇಲ್ಲಿ ಕಂಡುಬರುತ್ತದೆ. ಹಾಗೂ ಈ ಕಾದಂಬರಿಯಲ್ಲಿ ಚಾರಿತ್ರಿಕ ಅಂಶಗಳನ್ನೊಳಗೊಂಡಿರುವುದೊಂದು ವಿಶೇಷವಾಗಿದೆ ಎಂದು ಹೇಳಬಹುದಾಗಿದೆ. 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಕಾದಂಬರಿಯಲ್ಲಿ ಪ್ರಮುಖವಾಗಿ ನಾವು ಚಾರಿತ್ರಿಕ ವ್ಯಕ್ತಿಯ ವ್ಯಥೆಯ ಕಥೆಯಿದೆ ಎಂಬುದನ್ನು ಕಾಣಬಹುದಾಗಿದೆ. ಈ ಕಾದಂಬರಿಯಲ್ಲಿ ನಾವು ಗ್ರಾಮೀಣ ಬದುಕಿನ ಚಿತ್ರಣ ಹೇಗಿದೆ ಎಂಬುದನ್ನು ಹೇಳುವುದು ನನ್ನ ಮೂಲ ಉದ್ದೇಶವಾಗಿದೆ. ಆದ್ದರಿಂದ ಈ ಕಾದಂಬರಿಯನ್ನು ಅಧ್ಯಾಯ ಮೂರು 'ಗ್ರಾಮೀಣ ಬದುಕಿನ ಚಿತ್ರಣ' ಎಂಬುದಾಗಿ ಮಾಡಿಕೊಂಡಿರುತ್ತೇನೆ. ಈ ಅಧ್ಯಾಯದ ಶೀರ್ಷಿಕೆ ಸೂಕ್ತವಾದುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಮತ್ತು ಮೊದಲನೆಯ ಅಧ್ಯಾಯದಲ್ಲಿ ಗ್ರಾಮ್ಯ ಪರಿಸರದ ಚಿತ್ರಗಳಿವೆ. ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಗಳ ಬದುಕು ಹೇಗಿದೆ ಎಂಬುದನ್ನು ಕಾದಂಬರಿಕಾರರು ವಿಶ್ಲೇಷಿಸಿರುವುದನ್ನು ನೋಡಬಹುದಾಗಿದೆ ಹಾಗೂ ಈ ಕಾದಂಬರಿಯಲ್ಲಿನ ಪಾತ್ರಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಲೇಖಕರು ಕಂಡರಿಸಿದ್ದಾರೆ ಎಂಬುದು ತಿಳಿಯುತ್ತದೆ.

ಮಗು ಅವರ ಎರಡನೇ ಕಾದಂಬರಿ 'ಮಹಾಯಾತ್ರಿಕ' ಇದನ್ನು ೧೯೮೯ರಲ್ಲಿ ರಚನೆ ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಆಧ್ಯಾತ್ಮಿಕ ಮತ್ತು ವೈಚಾರಿಕತೆ ಹೇಗೆ ಕಂಡುಬರುತ್ತದೆ ಎಂಬುದನ್ನು ಗುರುತಿಸುವುದು ನನ್ನ ಮೂಲ ಉದ್ದೇಶವಾಗಿದೆ. ಹಳೇ ಮೈಸೂರು ಭಾಗದಲ್ಲಿ ಆಧ್ಯಾತ್ಮಿಕ ಸಿದ್ಧಪುರುಷನಾಗಿ ಜನಮಾನಸದಲ್ಲಿ ಉಳಿದಿರುವ ವ್ಯಕ್ತಿಯೇ ಮಲೆಯ ಮಹದೇಶ್ವರ ಈ ಮಲೆಯ ಮಹದೇಶ್ವರರನ್ನು ಕುರಿತು ಜನಪದರಲ್ಲಿ ಅಗಾಧ ಸಾಹಿತ್ಯ ನಿರ್ಮಾಣವಾಗಿರುವುದು ಆ ವ್ಯಕ್ತಿಯ ಮಹಿಮೆಗೆ ಮತ್ತೊಂದು ಸಾಕ್ಷಿರೂಪ. ಇಂಥ ವ್ಯಕ್ತಿಯ ಶಕ್ತಿಯನ್ನು ಕುರಿತು ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ 'ಮಹಾಯಾತ್ರಿಕ' ಕಾದಂಬರಿ ರೂಪುಗೊಂಡಿದೆ ಎಂಬುದನ್ನು ನೋಡಬಹುದಾಗಿದೆ. ಹಾಗೆಯೇ ಮಲೆಯ ಮಹದೇಶ್ವರರ ಒಟ್ಟು ಬದುಕಿಗೊಂದು ಈ ಕೃತಿ ಕನ್ನಡಿ ಹಿಡಿದಿದೆ. ಈ ಕಾದಂಬರಿಯನ್ನು ನನ್ನ

ನಿಬಂಧದಲ್ಲಿ ಐದನೆಯ ಅಧ್ಯಾಯ ಎಂದು ಮಾಡಿಕೊಂಡಿದ್ದೇನೆ. ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಮಹದೇಶ್ವರರ ಆಧ್ಯಾತ್ಮಶಕ್ತಿ, ಪ್ರಕೃತಿಪ್ರೇಮ, ಅನೇಕ ಶಿಷ್ಯರ ಸಮೂಹ, ಒಟ್ಟು ಸಂದೇಶಗಳನ್ನು ಈ ಕೃತಿಯ ಉದ್ದಕ್ಕೂ ಲೇಖಕರು ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಮಗು ಅವರ ಮೂರನೆಯ ಕಾದಂಬರಿಯೇ ಅಪ್ರತಿಮವೀರ ಈ ಕಾದಂಬರಿಯನ್ನು ೧೯೯೬ರಲ್ಲಿ ರಚನೆಮಾಡಿದ್ದಾರೆ. ಈ ಕಾದಂಬರಿಯನ್ನು ನನ್ನ ನಿಬಂಧದಲ್ಲಿ ಅಧ್ಯಾಯ – ೪ ಎಂಬುದಾಗಿ ಮಾಡಿಕೊಂಡಿದ್ದೇನೆ. ಈ ಕಾದಂಬರಿಯಲ್ಲಿ ನಾನು ಮುಖ್ಯವಾಗಿ ಐತಿಹಾಸಿಕ ಅಂಶಗಳು ಹಾಗೂ ಚಾರಿತ್ರಿಕ ಅಂಶಗಳನ್ನು ಗುರ್ತಿಸಲು ಪ್ರಯತ್ನಮಾಡಿದ್ದೇನೆ. 'ಅಪ್ರತಿಮವೀರ ಚರಿತೆ' ಕಾದಂಬರಿಯಲ್ಲಿ ಪ್ರಮುಖವಾಗಿ ರಆಜಮಹಾರಾಜರಿಗೆ ಸಂಬಂಧಿಸಿದ ಅಂಶಗಳನ್ನು ಕಲೆಹಾಕಿಕೆ. ಮೈಸೂರು ಸಂಸ್ಥಾನದ ರಾಜಪ್ರಭುತ್ವ ಪ್ರಜಾಪ್ರಭುತ್ವಗಳೆರಡರ ತೌಲನಿಕ ಅಧ್ಯಯನವನ್ನು ಈ ಕಾದಂಬರಿಯಲ್ಲಿ ಗುರ್ತಿಸಿದ್ದೇನೆ. ರಾಜರ ಕಥೆಯೆಂದರೆ ಸಾಮಾನ್ಯವಾಗಿ ಕಲ್ಪನೆ, ಆದರೆ ಕಲ್ಪನೆಗಿಂತ ಹೆಚ್ಚಾಗಿ ವಾಸ್ತವ ಮತ್ತು ಇತಿಹಾಸಗಳೆರಡಕ್ಕೂ ಸಮೀಪವಾಗಿ ಈ ಕಾದಂಬರಿ ರಚಿತವಾಗಿರುವುದನ್ನು ನೋಡಬಹುದಾಗಿದೆ.

ಈ ಕಾದಂಬರಿ ಮೈಸೂರು ರಾಜರ ಚರಿತ್ರೆಯನ್ನು ಕಟ್ಟಬೇಕೆಂದರೆ ಇರಬೇಕಾದ ಎಲ್ಲ ಐತಿಹಾಸಿಕ ಗುಣಗಳನ್ನು ಮೈಗೂಡಿಸಿಕೊಂಡಿವೆ. ಚಾರಿತ್ರಿಕ ಅಂಶಗಳ ಜೊತೆಗೆ ಹೇಗೆ ಐತಿಹಾಸಿಕ ಅಂಶಗಳು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ ಎಂಬುದರ ಅಧ್ಯಯನ ಈ ಅಧ್ಯಾಯದ ವಸ್ತುವಾಗಿದೆ.

ಗ್ರಂಥಋಣ

೧. ಆಕರ ಗ್ರಂಥಗಳು

೧. ಪ್ರೊ. ಮಲೆಯೂರು ಗುರುಸ್ವಾಮಿ : **'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'**
ನಿಸರ್ಗ ಪ್ರಕಾಶನ, ಲವಕುಶ ಬಿಲ್ಡಿಂಗ್ಸ್
೧೭ನೆ ಕ್ರಾಸ್, ನಂಜನಗೂಡು, ೧೯೮೪

: **'ಮಹಾಯಾತ್ರಿಕ'** ಪ್ರಕಾಶನ ಸಂವಹನ
ಶಿವರಾಂಪೇಟೆ, ಮೈಸೂರು, ೨೦೧೪

: **'ಅಪ್ರತಿಮವೀರ'**, ಪ್ರಕಾಶನ ಸಂವಹನ
ಈವ್ನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು, ೧೯೯೬

೨. ಪರಾಮರ್ಶನ ಗ್ರಂಥಗಳು

೧. ಸೋಮಶೇಖರ ಬಿಸಲ್ವಾಡಿ : ***ಮಹಾಮನೆ***
(ಅಭಿನಂದನ ಗ್ರಂಥ)

೨. ರಂ.ಶ್ರೀ.ಮುಗುಳಿ, : ***ಕನ್ನಡ ಸಾಹಿತ್ಯ ಚರಿತ್ರೆ***
ಪ್ರಕಾಶಕರು: ಗೀತಾಬುಕ್ ಹೌಸ್
ಮೈಸೂರು, ೨೦೦೯

೩. ಪ್ರೊ. ಹೆಚ್.ರಾಮಲಿಂಗಪ್ಪ : ***ಕರ್ನಾಟಕದ ಇತಿಹಾಸ ಪರಿಚಯ***
ಕಲಾಪ್ರಕಾಶನ ೨ನೇ ಅಡ್ಡ ರಸ್ತೆ
ಮುನೇಶ್ವರ ಬ್ಲಾಕ್, ರಾಜಮಹಲ್
ಗುಟ್ಟಹಳ್ಳಿ; ಬೆಂಗಳೂರು.

೪ ಡಾ. ಎಂ.ಪಿ.ಮಂಜಪ್ಪಶೆಟ್ಟಿ ಮಸಗಲಿ : ***ಮೈಸೂರು ಅರಮನೆ***
ಮಸಗಲಿ ಪ್ರಕಾಶನ, ನಂ. ೬೨೬
೧೩ನೆಯ ಕ್ರಾಸ್, ೪ನೆ ಹಂತ
ಟಿ.ಕೆ.ಬಡಾವಣೆ, ಮೈಸೂರು

೫. ಜಿ.ಎಸ್.ಭಟ್ಟ : ***ಮೈಸೂರು ದರ್ಶನ***
ಜೀನಹಳ್ಳಿ ಸಿದ್ಧಲಿಂಗಪ್ಪ
ಜಿಲ್ಲಾ ಕನ್ನಡ ಸಾಹತಿಯ ಪರಿಷತ್ತು
ನಂ. ೧, ವಿಜಯನಗರ
ಮೊದಲನೆ ಹಂತ, ಮೈಸೂರು
೨೦೧೦

೬. ಪ್ರೊ. ಮಲೆಯೂರು ಗುರುಸ್ವಾಮಿ : *'ಕಪಿಲ ನದಿಯ ಎಡಬಲದಿ'* ಮಹಾಮನೆ ಪ್ರಕಾಶನ, ಮೈಸೂರು ಮೊದಲ ಮುದ್ರಣ ೨೦೧೩.

೭. ಡಾ. ಸಿ.ಬಿ.ಹೊನ್ನಯ್ಯ(ಸಂ.) : *ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ,* ಜೈಭೀಮ್ ಪ್ರಕಾಶನ, ನಾಗದೇವನಹಳ್ಳಿ ಬೆಂಗಳೂರು, ೨೦೦೮.

೮. ಎಲ್.ಎಸ್.ಶೇಷಗಿರಿರಾವ್ : *ಹೊಸಗನ್ನಡ ಸಾಹತ್ಯ ಚರಿತ್ರೆ,* ಅಂಕಿತಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ ಬಸವನಗುಡಿ, ಬೆಂಗಳೂರು

೯. ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, : *ಕನ್ನಡ ಸಾಹಿತ್ಯ ಚರಿತ್ರೆ (ಪ್ರಾಚೀನ – ಆಧುನಿಕ)* ಅಂಕಿತ ಪುಸ್ತಕ, ಬೆಂಗಳೂರು

೧೦. ರಾಜಪ್ಪ ದಳವಾಯಿ(ಸಂ.), : ಕನ್ನಡ ಸಾಹಿತ್ಯ ಕೋಶ, ೨೦೧೦

೧೧. ಎಂ.ಎಚ್.ಕೃಷ್ಣಯ್ಯ : *ಸಾಲು ದೀಪಗಳು* ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೧೨. ಪ್ರಭುಸ್ವಾಮಿ.ಬಿ.ಹೆಗ್ಗೂಠಾರ : *ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು* ಪ್ರೊ. ಮಲೆಯೂರು ಗುರುಸ್ವಾಮಿ ೨೦೧೧, ಅನನ್ಯ ಮಾಸಪತ್ರಿಕೆ ಬೆಂಗಳೂರು

೧೩. ಹಳ್ಳಿಕೇರಿ : *ದಶಕದ ಕನ್ನಡ ಸಾಹಿತ್ಯ* ಪ್ರಸಾರಾಂಗ, ಕನ್ನಡ ವಿ.ವಿ ಹಂಪಿ, ೨೦೦೨

೧೪. ಕೀರ್ತಿನಾಥ ಕುರ್ತಕೋಟಿ : *ಯುಗಧರ್ಮ ಮತ್ತು ಸಾಹಿತ್ಯ ದರ್ಶನ* ಮನೋಹರ ಗ್ರಂಥಮಾಲೆ ಧಾರವಾಡ, ೧೯೯೮

೧೫. ನಾಗಭೂಷಣಸ್ವಾಮಿ.ಓ.ಎಲ್ : *ವಿಮರ್ಶೆಯ ಪರಿಭಾಷೆ* ಪರಿಸರ ಸಾಹಿತ್ಯ ಶಿವಮೊಗ್ಗ, ೧೯೮೩

*****